
# ಅಪರಂಜಿ

ತಿಳಿನಗೆಯ ಕಾರಂಜಿ

ಮಾರ್ಚ್ 2022



ಈಗ ನಾಲ್ಕನೆಯ ಕಪಿ.
ಇದು ಯಾರನ್ನೂ ನೋಡದು.
ಏನನ್ನೂ ಕೇಳಿಸಿಕೊಳ್ಳದು ಮತ್ತು
ಏನೂ ಮಾತನಾಡದು !

ಬಿಡಿ ಪ್ರತಿ: ರೂ. 10/-

**ಸಂಪಾದಕ ಮಂಡಳಿ**

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್



**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.




# ಅಪರಂಜಿ

ತಿಳಿನಗೆಯ ಕಾರಂಜಿ


**ಸಂಪುಟ 39**

**ಸಂಚಿಕೆ – 6**

**ಮಾರ್ಚ್ – 2022**


## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮನಮ್ಮಲ್ಲಿ | ಶಿವಕುಮಾರ್ | 3 |
| ಪೊಟ್ಟಮರಿ ಕಣ್ಣನ್ | ಶಿವು | 4 |
| ಹಾಲುಬಾಯಿ | ಲಕ್ಷ್ಮಿ ಮಧು | 8 |
| ಕುಣಿದು ಕುಣಿಸುವ ಜಂಗಮವಾಣಿ | ಕವಿತಾ ಗಿರೀಶ್ | 11 |
| ಸುಮ್ನೆ ತಮಾಷೆಗೆ | ವಾಟ್ಸಪ್‌ನಿಂದ | 13 |
| ಸಂಗೀತ ಲೋಕದಲ್ಲಿ.... | ಧಾರಿಣಿ ಮಾಯಾ | 15 |
| ಆಟೋಕ್ಕುಂಟು ಲೆಕ್ಕಕ್ಕಿಲ್ಲ | ಅನಿತಾ ನಾಡಿಗ್ | 16 |
| ಕೇಶ ಕ್ಲೇಷ | ಕೆ.ರಮೇಶ್ | 20 |
| ಹಿರಿಯರ ಪ್ರಸಂಗಗಳು | ಎ.ಆರ್. ಹರಿಪ್ರಸಾದ್ | 23 |
| ಹಿಂದಿ – ಚೈನಿ ಚೌ ಚೌ | ಇ.ಆರ್. ರಾಮಚಂದ್ರನ್ | 27 |
| ತುಂತುರು | ದನಂಅ | 30 |
| ಮುದ್ದೇಶನ ಪೋಸ್ಟ್ ಮಾರ್ಟಂ | ನಾಗರತ್ನ ಚಂದ್ರಶೇಖರ್ | 32 |
| ಆಸ್ಕರ್ ವೈಲ್ಡ್ ದೃಷ್ಟಿಯಲ್ಲಿ ಗಂಡಸು | ಬೇಲೂರು ರಾಮಮೂರ್ತಿ | 35 |
| ಹಾಲ್ಸಾಬಿಯ ಖೋಟಾ ನಸೀಬು | ಶರತ್ ಕಲ್ಕೋಡ್ | 36 |


ಮುಖಪುಟ : **ಇಂಟರ್‌ನೆಟ್ ಕೃಪೆ**

ವ್ಯಂಗ್ಯ ಚಿತ್ರಗಳು: ರಘುಪತಿ ಶೃಂಗೇರಿ, ಆದರ್ಶ ಪೈ


*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanjiaparanji@gmail.com ಮೊಬೈಲ್:9845264304



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com



**For Online payment of subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ: ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

●ಪ್ರಕಾಶ್

ಪಂಜಾಬ್ ಚುನಾವಣಾ ಸುದ್ದಿ; 11 ಅಂಶಗಳ ಸಂಕಲ್ಪ ಸೂತ್ರ

– ಪತ್ರಿಕೆ

**ಸಧ್ಯ , 12 ಅಲ್ಲವಲ್ಲ !!**

***

ಹಿಜಾಬ್ –– ಶಾಲು ; ಹಬ್ಬಿದ ಸವಾಲು – ಪತ್ರಿಕೆ

**ಆಹಾ ! ಶೀರ್ಷಿಕೆ ಅಂದರೆ ಹೀಗಿರಬೇಕು !**

***

ನೀವು ಅಶ್ವಿನಿ ಹೇರ್ ತೈಲವನ್ನೇ ಏಕೆ ಬಳಸಬೇಕು ?

– ದಿನ ಪತ್ರಿಕೆ

**"ನಿಮ್ಮ ಜೀವನೋಪಾಯಕ್ಕೆ, .ಅಷ್ಟೂ ಗೊತ್ತಿಲ್ಲವೇ ಸ್ವಾಮಿ ?!**

***

ಪತ್ರಕರ್ತರು ಪೂರ್ವಗ್ರಹ ಪೀಡಿತರಾಗಿದ್ದರಂತೆ ವರ್ತಿಸಿದರೆ ಮಾನ್ಯತೆ ರದ್ದು – ಪತ್ರಿಕೆ

**ಅವರ ಗ್ರಹಚಾರ, ಪಾಪ !**

***

ಸ್ವಚ್ಛ ಸುಂದರ ಬೆಂಗಳೂರಿನತ್ತ ನಮ್ಮ ನಡೆ – ಪತ್ರಿಕೆ

**ಗಗನ ಕುಸುಮ ಅಂದರೆ ಇದೇ !!**

***

ಪ್ರೇಮಿಗಳ ದಿನ; ಕೆಂಪು ಗುಲಾಬಿ ಬೆಲೆ ಏರಿಕೆ – ಸುದ್ದಿ

**ಒಮಿಕ್ರೋನ್ ಹರಡುಲ್ಲ ತಾನೇ !**

***

ಉತ್ತರ ಪ್ರದೇಶದ ಸಿ ಎಮ್ ಯೋಗಿ ಅವರ ಬಳಿ ರಿವಾಲ್ವರ್

– ಸುದ್ದಿ

**ಅಹಿಂಸಾ ಪರಮೋ ಧರ್ಮ ಅಂತ ಜ್ಞಾಪಿಸ ಬೇಕು !**

# ನಮ್ಮ ನಿಮ್ಮಲ್ಲಿ

● ಶಿವಕುಮಾರ್

ಕನ್ನಡನಾಡಿನ ಪ್ರತಿಷ್ಠಿತ ಸಾಂಸ್ಕೃತಿಕ ಸಂಸ್ಥೆ, ಬಿ.ಎಂ.ಶ್ರೀ ಪ್ರತಿಷ್ಠಾನವು 2022 ಸಾಲಿನ "**ವಿ.ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ**" ಯನ್ನು ನಮ್ಮ ಟ್ರಸ್ಟಿಯಾಗಿರುವ ಶ್ರೀಯುತ ಆನಂದರಿಗೆ ನೀಡಿರುವುದು ಅತ್ಯಂತ ಸಂತಸದ ಸಮಾಚಾರ. ಪತ್ರಿಕಾರಂಗ ಹಾಗೂ ಮಾಧ್ಯಮ ಕ್ಷೇತ್ರಕ್ಕೆ ಆನಂದ ಸಲ್ಲಿಸಿರುವ ಕೊಡುಗೆ ಅಪಾರವಾದದ್ದು. ಜನಪ್ರಿಯ ಪತ್ರಿಕೆ ಪ್ರಜಾವಾಣಿಯಲ್ಲಿ ಕಾರ್ಯ ನಿರ್ವಹಿಸಿದ ಶ್ರೀಯುತರು 1980-90ದ ಅವಧಿಯಲ್ಲಿ ಸುಧಾ ವಾರಪತ್ರಿಕೆಯಲ್ಲಿ ಕಾರ್ಯನಿರತರಾಗಿದ್ದರು. ಅಲ್ಲಿ ಅವರು ಬರೆಯುತ್ತಿದ್ದ 'ವಾರೆನೋಟ' ಅಂಕಣ ಮೊನಚಾದ ಹಾಸ್ಯ ಮತ್ತು ವಿಡಂಬನೆಯಿಂದ ಪ್ರಸಿದ್ಧವಾಗಿತ್ತು. ಇತ್ತೀಚೆಗೆ ಅವರು ಪ್ರೇಮ್‌ಜಿ ವಿಶ್ವವಿದ್ಯಾಲಯದ ಭಾಷಾಂತರ ವಿಭಾಗದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರು.



ಬಿ.ಎಂ.ಶ್ರೀ ಪ್ರತಿಷ್ಠಾನವನ್ನು 1959 ರಲ್ಲಿ ಖ್ಯಾತ ಸಾಹಿತಿ ಪ್ರೊ. ಎಂ.ವಿ..ಸೀತಾರಾಮಯ್ಯನವರು ಸ್ಥಾಪಿಸಿದರು. ನಿಟ್ಟೂರು ಶ್ರೀನಿವಾಸರಾಯರು ಗೌರವಾಧ್ಯಕ್ಷರಾಗಿದ್ದು, ಮಾಸ್ತಿಯವರು ಈ ಸಂಸ್ಥೆಗೆ ಪೋಷಕರಾಗಿದ್ದರು. ಆಗಿನಿಂದ ಈ ಸಂಸ್ಥೆ ನಾಡಿನ ಸಾಂಸ್ಕೃತಿಕ ಪ್ರಗತಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ.

ಅಪರಂಜಿ ಪತ್ರಿಕೆಯ ನಿರ್ವಹಣೆಯಲ್ಲಿ ಆನಂದ ಅವರು ನಮ್ಮೊಂದಿಗೆ ಕೈಜೋಡಿಸಿರುವುದು ಅಪರಂಜಿಯ ಸೌಭಾಗ್ಯ. ಪತ್ರಿಕೆಗೆ ಅವರು ನೀಡಿರುವ ಕೊಡುಗೆ ಪತ್ರಿಕೆಯನ್ನು ಶ್ರೀಮಂತಗೊಳಿಸಿದೆ. ಅಪರಂಜಿಗಾಗಿ ಅವರು ಸೃಷ್ಟಿಸಿರುವ ಒಂದು ಸ್ಥಿರ ಶೀರ್ಷಿಕೆ 'ತುಂತುರು' ಒಂದು ಹೊಸ ಪ್ರಯೋಗ. ಒಂದೇ ಪುಟದಲ್ಲಿ ಅನೇಕ ಚಿಂತನೆಯನ್ನು ಪ್ರಚೋದಿಸುವ ಹೇಳಿಕೆಗಳನ್ನು ಕಲೆಹಾಕಿ ಓದುಗರಿಗೆ ಕ್ಯಾಪ್ಸೂಲ್ ರೀತಿ ನೀಡುತ್ತಿರುವುದು ನಿಜಕ್ಕೂ ಒಂದು ಚೇತೋಹಾರಿ ಪ್ರಯತ್ನ.

**ಮಾರ್ಚ್ ತಿಂಗಳಲ್ಲಿ ಈ ಪ್ರಶಸ್ತಿಯನ್ನು ಆನಂದ ಅವರಿಗೆ ನೀಡಲಾಗುತ್ತಿದೆ. ಶ್ರೀಯುತ ಆನಂದ ಅವರಿಗೆ ಈ ಶುಭ ಸಂದರ್ಭದಲ್ಲಿ ನಮ್ಮೆಲ್ಲರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುವೆ.**

■

# ಪೊಟ್ಟಮರಿ ಕಣ್ಣನ್

**। ಶಿವು**

ಜೀವನದ ಸಂಧ್ಯೆಯಲ್ಲಿ , ಆರಾಮವಾಗಿ ಕುಳಿತು ಮೂರ್ತಿರಾಯರ ಮಾತಿನಲ್ಲಿ ಹೇಳುವುದಾದರೆ " ಸಂಜೆಗಣ್ಣಿನ ಹಿನ್ನೋಟ" ದಂತೆ ನಮ್ಮ ದೃಷ್ಟಿಯನ್ನು ಭೂತಕಾಲಕ್ಕೆ ಹರಿಸಿದರೆ ಅನೇಕ ಸ್ವಾರಸ್ಯಕರ ಘಟನೆಗಳು, ಪ್ರೀತಿ ವಿಶ್ವಾಸಗಳ ಹೊನಲನ್ನೇ ಹರಿಸಿದ ಗೆಳೆಯರು ಕಾಣಸಿಗುತ್ತಾರೆ. ಪೊಟ್ಟಮರಿ ಕಣ್ಣನ್ ನಂತಹ ಮಿತ್ರನೊಬ್ಬನು ನನಗೆ ಸಿಕ್ಕಿದ್ದು ನನ್ನ ಸೌಭಾಗ್ಯ ಅಂತಲೇ ನಾನು ತಿಳಿಯುವೆ.

"ಎಂತಹ ವಿಚಿತ್ರ ಹೆಸರು – ಪೊಟ್ಟಮರಿ! ಎಲ್ಲಿಂದ ಬಂತೋ ನಿನಗೆ ಆ ಹೆಸರು ?" ಅಂತ ನಾನೊಮ್ಮೆ ಕೇಳಿದಾಗ, ಅವನು, " ಪೊಟ್ಟಮರಿ ಅಂದರೆ ಒಂದು ಜಾತಿಯ ಕಾದಾಟದ ಹುಂಜ. ಫೈಟಿಂಗ್ ಕಾಕ್ ಅಂತಾರಲ್ಲಾ, ಹಾಗೆ. ನಮ್ಮ ಪೂರ್ವೀಕರು ಕರೂರಿನಲ್ಲಿ ಇಂತಹ ಹುಂಜಗಳನ್ನು ಬೆಳೆಸುವುದನ್ನೇ ವೃತ್ತಿ ಮಾಡಿಕೊಂಡಿದ್ದರಂತೆ. ನಾವು ಸರಬರಾಜು ಮಾಡಿದ ಹುಂಜಗಳು ಎಂದಿಗೂ ಸೋತದ್ದೇ ಇಲ್ಲವಂತೆ. ನಮ್ಮ ತಾತ ಹೇಳುತ್ತಿದ್ದರು. " ಅಂತ ಉತ್ತರಿಸಿದ್ದ.

ಕಣ್ಣನ್ ಪೀಣ್ಯದಲ್ಲಿ ಒಂದು ಫರ್ನಿಚರ್ ಅಂಗಡಿ ನಡೆಸುತ್ತಿದ್ದ. ನನ್ನ ಸಣ್ಣ ಉದ್ಯಮವೂ ಪೀಣ್ಯದಲ್ಲೇ ಇದ್ದುದರಿಂದ ಈ ಕಾಲಘಟ್ಟದಲ್ಲಿ ಕಣ್ಣನ್‌ನ ಪರಿಚಯವಾಯಿತು. ಅವನು ನನಗೆ ಒಂದೆರಡು ಪುಸ್ತಕದ ಕಪಾಟುಗಳನ್ನೂ ಮಾಡಿಕೊಟ್ಟದ್ದುಂಟು. ನಮ್ಮ ವ್ಯಾವಹಾರಿಕ ಪರಿಚಯ ಗಾಢವಾದ ಸ್ನೇಹಕ್ಕೆ ತಿರುಗಿದ್ದು ಹೇಗೆ ಅಂತ ಕೇಳಿದರೆ ಉತ್ತರಿಸುವುದು ಬಹಳ ಕಷ್ಟ. ಯಾವು ಯಾವುದೋ ಕಾರಣಗಳಿಗೆ ಜನ ನಮಗೆ ಹತ್ತಿರವಾಗಿಬಿಡುತ್ತಾರೆ.

ಕಾರಣ ಏನಾದರೂ ಇರಲಿ, ಅವನ ಹಾಸ್ಯ ಮನೋಭಾವ , ತನ್ನ ಕೆಲಸಗಾರರನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದ ರೀತಿ ನನಗೆ ಇಷ್ಟವಾದದ್ದು ಸುಳ್ಳಲ್ಲ. ಪ್ರಾರಂಭದಲ್ಲಿ ಚಿಕ್ಕ ಅಂಗಡಿ ಇಟ್ಟಿದ್ದ ಕಣ್ಣನ್ ಕಾಲಕ್ರಮೇಣ ದೊಡ್ಡದಾಗಿ ವ್ಯಾಪಾರಮಾಡಲು ಪ್ರಾರಂಭಿಸಿದ. ರಾಜಾಜಿನಗರದಲ್ಲಿ ಒಂದು ದೊಡ್ಡ ಮಳಿಗೆಯ ತುಂಬಾ ಅವನ ತಯಾರಿಕೆಯ ಸಾಮಗ್ರಿಗಳು ಸದಾ ತುಂಬಿರುತ್ತಿದ್ದವು.

ಒಮ್ಮೆ ಅವನೊಂದಿಗೆ ಮಾತನಾಡುತ್ತಿದ್ದಾಗ, " ಹೇಗಿದೆ ನಿನ್ನ ವ್ಯಾಪಾರ? " ಅಂತ ಕೇಳಿದೆ.

" ಸಾಮಗ್ರಿಗಳನ್ನು ತಯಾರಿಸಿ ಮಾರಾಟ ಮಾಡುವ ಬದಲು ಈಗ ಹಳೆಯ ಸಾಮಗ್ರಿಗಳನ್ನು ಕೊಂಡು ಮಾರಲು ಪ್ರಾರಂಭಿಸಿದ್ದೇನೆ." ಅಂದ

" ಅರ್ಥವಾಗಲಿಲ್ಲ, ವಿವರಿಸಿ ಹೇಳು." ಅಂತ ಆಜ್ಞಾಪಿಸಿದೆ.

" ನೋಡು ಶಿವು, ಈಗ ಪುರಾತನ ಕಾಲದ ಆ್ಯಂಟೀಕ್ ಫರ್ನಿಚರ್ ಗಳಿಗೆ ಅತ್ಯಂತ ಹೆಚ್ಚು ಬೆಲೆಕೊಟ್ಟು ಕೊಳ್ಳುವವರಿದ್ದಾರೆ. ಚೆಟ್ಟಿನಾಡಿನಲ್ಲಿ ಇಂತಹ ಹಳೆಯ ಕುರ್ಚಿ ಮೇಜು, ಮಂಚ, ಬಾಗಿಲುವಾಡಗಳು ಹೇರಳವಾಗಿ ಸಿಗುತ್ತಿವೆ. ನಾನು ಅವನ್ನು ಅಲ್ಲಿಂದ ಆರಿಸಿ ತಂದು ನನ್ನ ಕಾರ್ಖಾನೆಯಲ್ಲಿ ಪರಿಷ್ಕರಿಸಿ ಮಾರಾಟಕ್ಕಿಟ್ಟರೆ ಹತ್ತು ಪಟ್ಟು ಹೆಚ್ಚು ಬೆಲೆಗೆ ಮಾರಬಹುದು. ಅಂದಹಾಗೆ ಮುಂದಿನ ವಾರ ಕಾರೈಕುಡಿಗೆ ಟ್ರಿಪ್ ಪ್ಲಾನ್ ಮಾಡಿದ್ದೇನೆ. ನನ್ನ ಜೊತೆ ಬರ್ತೀಯೇನು.?" ಅಂತ ವಿಶ್ವಾಸದಿಂದ ಆಹ್ವಾನಿಸಿದ. ಕಣ್ಣನ್ ಜೊತೆ ತಮಿಳುನಾಡಿನಲ್ಲಿ ಓಡಾಡುವ ಅವಕಾಶವನ್ನು

ಯಾರಾದರೂ ಕಳೆದುಕೊಳ್ಳುತ್ತಾರೆಯೇ. " ನನ್ನ ಬಿಟ್ಟು ನೀನು ಹೇಗೆ ಹೋಗ್ತೀಯಾ ನಾನೂ ನೋಡ್ತೀನಿ" ಅಂತ ಹೇಳಿ ಅವನನ್ನು ಬೀಳ್ಕೊಟ್ಟೆ.

ಮುಂದಿನ ವಾರ ಒಂದು ಬೆಳಗ್ಗೆ ತನ್ನ ವ್ಯಾನ್ ತೆಗೆದುಕೊಂಡು ಕಣ್ಣನ್ ನಮ್ಮ ಮನೆಯ ಮುಂದೆ ಹಾಜರ್. ಮನೆಯೊಳಗೆ ಬಂದು ನನ್ನ ಪತ್ನಿ ಕೊಟ್ಟ ಕಾಫಿ ಕುಡಿದು, "ಏನೂ ಯೋಚನೆ ಮಾಡಬೇಡೀಮ್ಮ. ನಿಮ್ಮ ಗಂಡನನ್ನ ಜೋಪಾನವಾಗಿ ಕರೆದುಕೊಂಡು ಹೋಗಿ, ಹಿಂದಕ್ಕೆ ಕರೆದು ತರುವೆ " ಅಂತ ಅವನು ಆಶ್ವಾಸನೆ ಕೊಟ್ಟನಂತರ ನಾವು ಕಾರನ್ನು ಹತ್ತಿದೆವು. ಕಣ್ಣನ್ ಗೆ ಮಲೆಯಾಳಂ ಭಕ್ತಿ ಗೀತೆಗಳೆಂದರೆ ಬಹಳ ಇಷ್ಟ. ದಾರಿಯುದ್ದಕ್ಕೂ ಅವನ ಸಿ.ಡಿ. ಪ್ಲೇಯರ್‌ನಿಂದ ಹೊರಹೊಮ್ಮುತ್ತಿದ್ದ ಭಕ್ತಿರಸದ ಭರದಲ್ಲಿ ನಮಗೆ ಕಾಲ ಸರಿದದ್ದೇ ತಿಳಿಯಲಿಲ್ಲ. ಹೊರಡುವಾಗಲೇ ಕಣ್ಣನ್ " ಶಿವು, ನಮ್ಮ ರೂಟ್ ಪ್ಲಾನ್ ತಿಳಿಸಿಬಿಡ್ತೇನೆ. ಮೊದಲಿಗೆ ಕೃಷ್ಣಗಿರಿ ಧರ್ಮಪುರಿ ಮಾರ್ಗವಾಗಿ ಸೇಲಮ್, ನಾಮಕ್ಕಲ್ ದಾರಿ ಹಿಡಿದು ಅಲ್ಲಿಂದ ಕಾವೇರಿ ನದಿ ದಾಟಿ ಕರೂರು ಸೇರುವುದು. ಅಲ್ಲಿ ನಮ್ಮ ಫ್ಯಾಮಿಲಿ ಹೋಮ್ ಇದೆ. ನನ್ನ ಚಿಕ್ಕಪ್ಪನ ಮಗ ಮೇಯಪ್ಪನ್ ಅದನ್ನ ನೋಡಿಕೊಳ್ತಾ ಇದಾನೆ. ಅಲ್ಲಿ ಇವತ್ತು ರಾತ್ರಿ ಕಳೆದು, ನಾಳೆ ಕಾರೈಕುಡಿ. ಅಲ್ಲಿ ನಿನಗೆ ಆ ಚೆಟ್ಟಿಯಾರುಗಳ ಸೌಧಗಳ ವೈಭವಾನ ತೋರಿಸ್ತೇನೆ. ಮಾರನೆಯ ದಿನ ಅಲ್ಲಿಂದ ಹಿಂದಕ್ಕೆ ಪಯಣ. "ಅಂತೆಲ್ಲಾ ವಿವರಿಸಿದ. " ನೀನು ಎಲ್ಲಾದರೂ ಕರೆದುಕೊಂಡು ಹೋಗು. ನಿನ್ನ ಕಸಿನ್ ತೀರ್ಥ ಸ್ವೀಕಾರ ಮಾಡ್ತಾನೆ ತಾನೆ? ಅದೊಂದು ಸಂಗತಿ ಕ್ಲಾರಿಫೈ ಮಾಡ್ಬಿಡಪ್ಪ "ಅಂತ ನಗುತ್ತಾ ಹೇಳಿದೆ. "ಅವನು ತೀರ್ಥ ಸ್ವೀಕಾರ ಮಾಡೋದಿರಲಿ ನಮ್ಮ ಪೊಟ್ಟಮರಿ ಹುಂಜಗಳೂ ತೀರ್ಥ ಸ್ವೀಕರಿಸಿಯೇ ಜಗಳಕ್ಕೆ ಹೊರಡೋವು" ಅಂದ ಕಣ್ಣನ್

ನಾಮಕ್ಕಲ್ ದಾಟಿ ಕರೂರಿನ ದಾರಿಯಲ್ಲಿ ಮೋಹನೂರಿನ ಹತ್ತಿರ ಬರುತ್ತಿದ್ದಾಗ ವ್ಯಾನಿನ ಮುಂದಿನ ಚಕ್ರ ಪಂಕ್ಚರ್ ಆಯಿತು. ದೇವರ ದಯದಿಂದ ಹತ್ತಿರದಲ್ಲೇ ರಸ್ತೆ ಬದಿಯಲ್ಲಿ ಕಾರು, ಲಾರಿಗಳ ಟಯರುಗಳನ್ನು ದುರಸ್ತಿಪಡಿಸುವ ಷೆಡ್ ಒಂದು ಕಣ್ಣಿಗೆ ಬಿತ್ತು. ಅಲ್ಲಿಗೆ ಹೋಗಿ ಅಂಗಡಿಯಾತನಿಗೆ ಹೇಳಿದ ಮೇಲೆ ಆತ ಪಂಕ್ಚರ್ ಆದ ಟಯರನ್ನು ಬಿಚ್ಚಿಕೊಂಡು ಬರಲು ಹುಡುಗನೊಬ್ಬನನ್ನು ಕಳಿಸಿದ. ನಾವಿಬ್ಬರೂ ಷೆಡ್ ಮುಂದೆ ಇದ್ದ ಬೆಂಚೊಂದರ ಮೇಲೆ ಕುಳಿತೆವು. ಸಾಕಷ್ಟು ವಿಶಾಲವಾಗಿದ್ದ ಆ ಷೆಡ್ ತುಂಬಾ ಎಲ್ಲಾ ಬಗೆಯ , ಹಾಗೂ ಅಳತೆಗಳ ಟಯರುಗಳೇ ತುಂಬಿದ್ದವು. ಷೆಡ್ ಒಳಗೆ ಎರಡು ಮೇಜುಗಳು. ಒಂದರ ಮೇಲೆ ಅವರ ವರ್ಕ್‌ಷಾಪಿನ ಉಪಕರಣಗಳು ತುಂಬಿದ್ದರೆ, ಇನ್ನೊಂದರ ಮೇಲೆ ಟೂಲ್‌ಬಾಕ್ಸ್ ತರಹದ್ದು ಏನೋ ಇತ್ತು. ಕಣ್ಣನ್ ಆ ಎರಡನೇ ಮೇಜನ್ನು ಕಂಡ ತಕ್ಷಣ ಅದರ ಹತ್ತಿರ ಹೋಗಿ ಅದನ್ನು ಕೂಲಂಕಷವಾಗಿ ಪರೀಕ್ಷಿಸಲು ತೊಡಗಿದ. ಅಂಗಡಿಯವ, "ಅದೇನು ಸ್ವಾಮಿ ಆ ಮೇಜನ್ನ ಹಾಗೆ ನೋಡ್ತೀರಾ?" ಎಂದು ಕೇಳಿದ. ಕಣ್ಣನ್ ಲೋಕಾಭಿರಾಮವಾದ ದನಿಯಲ್ಲಿ, " ನನಗೆ ಇಂತಹದೊಂದು ಮೇಜು ಬೇಕಾಗಿತ್ತು. ಅದಕ್ಕೇ ನೋಡಿದೆ. ತುಂಬಾ ಹಳೇದಿರಬೇಕು ಇದು" ಎಂದು ಹೇಳಿ ಮತ್ತೆ ಬಂದು ಬೆಂಚಿನ ಮೇಲೆ ಕುಳಿತ. ಪಂಕ್ಚರ್ ರಿಪೇರಿ ಆದಮೇಲೆ ಹಣ ಕೊಡುವಾಗ, ಆ ಮಾಲಿಕನನ್ನು ಕುರಿತು, " ಆ ಮೇಜನ್ನ ಖರೀದಿಗೆ ಕೊಡ್ತೀರಾ ?" ಅಂತ ಕೇಳಿದ. ಆತ, " ಅದು ಮಾರಾಟಕ್ಕಿಲ್ಲ. " ಎಂದು ಹೇಳಿ ಸುಮ್ಮನಾದ. ಕಣ್ಣನ್ ಸುಮ್ಮನಿರಲಿಲ್ಲ. " ಮಾರಾಟಕ್ಕಿಲ್ಲದಿರಬಹುದು. ಆದರೆ ಎಲ್ಲ ವಸ್ತುಗಳಿಗೆ ಬೆಲೆ ಇದ್ದೇ ಇರುತ್ತದೆ.

ಎಷ್ಟು ಹಣ ಕೊಟ್ಟರೆ ಅದನ್ನು ನನಗೆ ಮಾರಲು ಸಿದ್ಧ ?" ಅಂತ ಪಟ್ಟು ಹಿಡಿದ. ಆತ ಯೋಚನೆ ಮಾಡಿ " ಒಂದು ಸಾವಿರ ರೂಪಾಯಿ". ಎಂದು ಹೇಳಿದ. ಕಣ್ಣನ್ " ಆಯಿತು. ಇಗೋ ಐನೂರು ಅಡ್ವಾನ್ಸ್. ಕರೂರಿಗೆ ಹೊರಟಿದ್ದೇವೆ. ಹಿಂದಕ್ಕೆ ಹೋಗುವಾಗ ಮೇಜನ್ನು ತೆಗೆದುಕೊಂಡು ಹೋಗುತ್ತೀವಿ. ಮೇಜನ್ನು ಸ್ವಲ್ಪ ಒರೆಸಿ ಇಟ್ಟಿದ್ದರೆ ಸಾಕು. " ಎಂದು ಹೇಳಿದ ನಂತರ ನಾವು ಕಾರು ಹತ್ತಿ ಪ್ರಯಾಣ ಮುಂದುವರಿಸಿದೆವು.

" ಅದ್ಯಾಕೋ ಆ ಮೇಜಿಗೆ ಅಷ್ಟೊಂದು ದುಬಾರಿ ಬೆಲೆ ಕೊಟ್ಟೆ?" ಅಂತ ನಾನು ಕೇಳಿದೆ. ಕಣ್ಣನ್, " ಇವತ್ತು ನನ್ನ ಅದೃಷ್ಟಾನೇ ಅದೃಷ್ಟ. ಅದು ಹತ್ತೊಂಭತ್ತನೇ ಶತಮಾನದ ರಾಮ್‌ನಾಡ್ ಮೇಜು. ಅದು ಇವನ ಹತ್ತಿರ ಹೇಗೆ ಬಂತೋ ತಿಳೀದು. ರೋಸ್‌ವುಡ್ ಮರದಿಂದ ಮಾಡಿರೋ ಆ ಮೇಜಿನ ಮೇಲ್ಭಾಗದ ಮೇಲೆ ದಂತದ ಇನ್‌ಲೇ ಕೆಲಸ ಬಹು ನಾಜೂಕಾಗಿ ಮಾಡಿದ್ದಾರೆ. ಮೇಲ್ಭಾಗಾನ ರಕ್ಷಿಸೋದಕ್ಕೆ ಅದರ ಮೇಲೆ ಒಂದು ಪಾರ್ಚ್‌ಮೆಂಟ್ ಅಂಟಿಸಿರ್ತಾರೆ. ಹೊಂಗೆ ಎಣ್ಣೆ ಬಳಿದು ಆ ಪಾರ್ಚ್‌ಮೆಂಟ್‌ನ ಹುಷಾರಾಗಿ ಬಿಡಿಸಿದರೆ ದಂತದ ಕುಸುರಿ ಕೆಲಸ ಕಾಣುತ್ತೆ. ಮೇಜಿನ ಕಾಲುಗಳನ್ನು ಗಮನಿಸಿದೆಯಾ .ಎಷ್ಟು ಕಲಾತ್ಮಕವಾಗಿ ಕೆತ್ತನೆಮಾಡಿದ್ದಾರೆ. ಇಂತಹದೇ ಒಂದು ಮೇಜನ್ನು ಕಳೆದ ತಿಂಗಳು ಒಂದು ಲಕ್ಷಕ್ಕೆ ಮಾರಿದ್ದೆ. " ಅಂತ ಉತ್ತರಿಸಿದ.

ಕರೂರಿನಲ್ಲಿ ಕಣ್ಣನ್‌ನ ಮನೆತನದ ಮನೆಯನ್ನ ಸೇರಿದಾಗ ಸಂಜೆಯಾಗಿತ್ತು. ಹಳೆಯ ಕಾಲದ ಮನೆ. ಮುಂದೆ ಎಡ ಬಲ ಜಗುಲಿಗಳು. ಮಧ್ಯೆ ನಡೆದು ಹೋದರೆ ಮನೆಯ ಮುಖ್ಯ ದ್ವಾರ. ಮುಖ್ಯ ದ್ವಾರವಾದರೂ ಎತ್ತರ ಐದಡಿ ಮಾತ್ರ. "ಬಾಗಿಲು ದಾಟುವಾಗ ಹುಷಾರ್. ತಲೆ ಬಗ್ಗಿಸಿಕೊಂಡೇ ದಾಟಬೇಕು." ಅಂತ ಕಣ್ಣನ್ ಮೊದಲು ಹೇಳಿದ್ದರಿಂದ ದೂರದಿಂದಲೇ ತಲೆಬಗ್ಗಿಸಿಕೊಂಡು ನಡೆದು ಬಾಗಿಲು ದಾಟಿದ ನಂತರ ತಲೆ ಎತ್ತಿದೆ. ತಲೆ ಬಾಗಿಲುವಾಡಕ್ಕೆ ಬಡಿಯಿತು. ಇಲ್ಲಿನ ಗೋಡೆಗಳ ದಪ್ಪ ಎರಡು ಅಡಿ ಅಂತ ಅವನು ಹೇಳಿರಲಿಲ್ಲ.

ಮನೆಯೊಳಗೆ ಹೋಗುತ್ತಿದ್ದಂತೆ ಒಂದು ಹಜಾರ. ಸುತ್ತಲೂ ಕೊಠಡಿಗಳು. ಹಜಾರದ ಮಧ್ಯೆ ಒಂದು ತೇಗದ ಮರದ ತೂಗುಯ್ಯಾಲೆ. ನೇರವಾಗಿ ಹೋದರೆ ವಿಶಾಲವಾದ ದೇವರ ಮನೆ. ಕಣ್ಣನ್‌ನ ಕಸಿನ್ ಮೇಯಪ್ಪನ್ ನಮ್ಮನ್ನ ಬಹು ಆದರದಿಂದ ಸ್ವಾಗತಿಸಿದ. ನನಗೋ ಎಲ್ಲಾ ಹೊಸದು. " ನೋಡೋದೇನಿದೆ ಇಲ್ಲಿ?" ಅಂತ ಕೇಳಿದೆ. " ನದಿ ತೀರದಲ್ಲಿ ಸದಾಶಿವ ಬ್ರಹ್ಮೇಂದ್ರರ ಆಶ್ರಮ ಇದೆ. ಬ್ರಹ್ಮೇಂದ್ರರು ಗೊತ್ತಲ್ಲ. ಮಾನಸ ಸಂಚರರೇ ರಚಿಸಿದೋರು" ಅಂತ ಮೇಯಪ್ಪನ್ ಉತ್ತರಿಸಿದ. ಮಾರನೆಯ ಬೆಳಗಿನ ತಿಂಡಿಗೆ ಮನೆಯಾಕೆ ಪುಟ್ಟು ಮಾಡಿದ್ದರು. ಅಕ್ಕಿ ತರಿ ಮತ್ತು ಕಾಯಿತುರಿಗಳನ್ನು ಒಂದು ಬೊಂಬಿನ ಕೊಳವೆಯಲ್ಲಿ ತುಂಬಿ ಇಡ್ಲಿ ಮಾಡುವಂತೆ ಹಬೆಯಲ್ಲಿ ಬೇಯಿಸಿ ಮಾಡುವ ತಿಂಡಿ ಇದು. ಬಲು ರುಚಿಯಾಗಿತ್ತು. ತಿಂಡಿ ಮುಗಿದ ತಕ್ಷಣ ಕಾರೈಕುಡಿ ದಾರಿ ಹಿಡಿದೆವು.

ತಮಿಳುನಾಡಿನ ಶಿವಗಂಗಾ ಜಿಲ್ಲೆಯಲ್ಲಿ ನೆಲೆಸಿರುವ ನಾಟ್ಟುಕೋಟಿ ಚೆಟ್ಟಿಯಾರ್ ಒಂದು ವ್ಯಾಪಾರೀ ಜನಾಂಗ. ಹಿಂದೆ ಇವರ ವಂಶಸ್ಥರು ಶ್ರೀಲಂಕಾ, ಮಲೇಷ್ಯಾ ಬರ್ಮಾ ದೇಶಗಳೊಡನೆ ವಹಿವಾಟು ನಡೆಸಿ ಶ್ರೀಮಂತರಾಗಿದ್ದರು. ಇವರುಗಳು ಶ್ರೀಮಂತಿಕೆಯ ಕುರುಹಾಗಿ ಇಂದಿಗೂ ಅವರುಗಳ ಹಳೆಯ ಕಾಲದ ಮನೆಗಳು

ನಿಂತಿವೆ. ಇವರುಗಳ ಸೇವೆಗಾಗಿ ಅನೇಕ ಕುಶಲ ಕರ್ಮಿಗಳು ಬಂದು ಬಹು ಸುಂದರ ಪರಿಕರಗಳನ್ನು ನಿರ್ಮಿಸುವ ವೃತ್ತಿಯನ್ನು ಕೈಗೊಂಡಿದ್ದರು. ನಾವು ಕಾರೈಕುಡಿ ಸೇರಿದನಂತರ ಕಣ್ಣನ್ ನೇರವಾಗಿ ತನಗೆ ಆ್ಯಂಟೀಕ್ ವಸ್ತುಗಳನ್ನು ಸರಬರಾಜು ಮಾಡುವವರ ಮಳಿಗೆಗಳಿಗೆ ಕರೆದೊಯ್ದ. ಆ ಮಳಿಗೆಗಳನ್ನು ನೋಡುವುದೇ ಕಣ್ಣಿಗೆ ಒಂದು ಹಬ್ಬ. ಎಂತೆಂಥಹ ಆರಾಮ ಕುರ್ಚಿಗಳು, ಸಂಕೀರ್ಣ ಕುಸುರಿ ಕೆತ್ತನೆ ಮಾಡಿದ ಬಾಗಿಲುಗಳು, ಊಟದ ಮೇಜುಗಳು ಇನ್ನೂ ಅನೇಕ ಶ್ರೀಮಂತಿಕೆಯ ಸಾಧನಗಳು ಮಳಿಗೆಯನ್ನು ತುಂಬಿತ್ತು ಕಣ್ಣನ್ ತನ್ನ ವಹಿವಾಟಿನಲ್ಲಿ ನಿರತನಾದ. ನಾನು ಬಿಟ್ಟಕಣ್ಣು ಬಿಟ್ಟಿಕೊಂಡು ಈ ಆ್ಯಂಟೀಕ್ ಸಮಾರಾಧನೆಯನ್ನು ನೋಡುತ್ತಾ ನಿಂತೆ.

ಆ ಸಂಜೆ ಕರೂರು ಸೇರಿ ಮಾರನೆಯ ಬೆಳಗ್ಗೆ ಬೆಂಗಳೂರಿನ ದಾರಿ ಹಿಡಿದೆವು. ಮೋಹನೂರಿನ ಬಳಿ ಬಂದಾಗ ಕಣ್ಣನ್ ಖರೀದಿಸಿದ ಆ್ಯಂಟೀಕನ್ನು ಸಂಗ್ರಹಿಸಲು ಪಂಕ್ಚರ್ ಅಂಗಡಿಗೆ ಹೋದೆವು. ನಮ್ಮನ್ನು ನೋಡಿ ಅಂಗಡಿಯವ , " ಬನ್ನಿ ನಿಮಗಾಗಿಯೇ ಕಾಯುತ್ತಿದ್ದೆ. " ಎಂದು ಹೇಳಿ ತನ್ನ ಸಹಾಯಕನಿಗೆ ಮೇಜನ್ನು ತರಲು ಹೇಳಿದ. ಆ ಹುಡುಗ ಅಂಗಡಿಯ ಹಿಂದೆ ಹೋದ. ಐದು ನಿಮಿಷಗಳ ನಂತರ ಆ ಹುಡುಗ ಮೇಜನ್ನು ತಲೆಯ ಮೇಲೆ ಹೊತ್ತು ತಂದ. ನಾವು ನೋಡಿದ ಪಾರ್ಚ್‌ಮೆಂಟ್ ಅಂಟಿಸಿದ್ದ , ಹಳೆಯ ಮರದ ಮೇಜಿನ ಬದಲು ಹಳದಿ ಬಣ್ಣದ ಪೇಂಟ್ ಬಳಿದಿದ್ದ ವಿಕಾರವಾದ ವಸ್ತು ವಿಶೇಷವೊಂದು ನಮ್ಮ ಮುಂದೆ ಪ್ರತಿಷ್ಠಾಪನೆಯಾಯಿತು. ಅಂಗಡಿಯವ, " ಮೇಜು ತೀರಾ ಹಳೆಯದಾಗಿತ್ತು. ನೀವು ಅಷ್ಟೆಲ್ಲಾ ದುಡ್ಡು ಕೊಟ್ಟಮೇಲೆ ಮೇಜನ್ನು ಸ್ವಲ್ಪ ಹೊಸದಾಗಿ ಕಾಣುವಂತೆ ಮಾಡಲು ನಾನೇ ಅದನ್ನು ಚೆನ್ನಾಗಿ ಉಜ್ಜಿ ಅದಕ್ಕೆ ಅಂಟಿದ್ದ ಬಟ್ಟೆಯನ್ನೆಲ್ಲಾ ಕಿತ್ತು ತೆಗೆದು ಹೊಸದಾಗಿ ಪೇಂಟ್ ಬಳಿಸಿದೆ. ಈಗ ನೋಡಿ ಎಷ್ಟು ಚೆನ್ನಾಗಿ ಕಾಣುತ್ತಿದೆ. " ಅಂತ ತನ್ನ ಕೆಲಸವನ್ನು ತಾನೇ ಮೆಚ್ಚುತ್ತಾ ಹೇಳಿದ. ಕಣ್ಣನ್ ಏನೂ ಮಾತನಾಡಲಿಲ್ಲ. ಸುಮ್ಮನೆ ಜೇಬಿನಿಂದ ಐನೂರು ತೆಗೆದು ಅವನಿಗೆ ಕೊಟ್ಟು ಮೇಜನ್ನ ಕಾರಿನ ಮೇಲೆ ಕಟ್ಟಿಸಿ , ಅವನಿಗೆ ವಿದಾಯ ಹೇಳಿದ. ನಾನು ಕಾರಿನಲ್ಲಿ ಕುಳಿತೆ.

ಕಾರು ಹೊರಟಮೇಲೆ ನಾನು ," ಎಂತಹ ಅಧಿಕ ಪ್ರಸಂಗಿ ಅವನು. ಅವನಿಗೆ ಯಾರು ಪೇಂಟ್ ಮಾಡಲು ಹೇಳಿದ್ದು. ಮೇಜಿಗೆ ಏನೂ ಡ್ಯಾಮೇಜ್ ಆಗಿರುಲ್ಲಾ ತಾನೆ?" ಅಂತ ಕಾತರದಿಂದ ಪ್ರಶ್ನಿಸಿದೆ.

ಕಣ್ಣನ್ ನಕ್ಕು, " ಅದು ಈಗ ಆ್ಯಂಟೀಕ್ ಅಲ್ಲ. ಪಾರ್ಚ್‌ಮೆಂಟ್ ನ ಸಿಕ್ಕಾ ಪಟ್ಟೆ ಹೆರೆದು ತೆಗೆದಾಗ ಇನ್‌ಲೇ ಕೆಲಸವೆಲ್ಲಾ ಧೂಳೀಪಟ ಆಗಿಬಿಟ್ಟಿದೆ. ಪೇಂಟ್ ನಲ್ಲಿರುವ ಕೆಮಿಕಲ್ ಗಳಿಂದ ರೋಸ್‌ವುಡ್ ನ ಮೇಲಿನ ಪದರವೇ ಸುಟ್ಟು ಹೋಗಿರುತ್ತೆ. ಏನೋ ತುಂಬಾ ಕಷ್ಟಪಟ್ಟು ರಿಪೇರಿ ಮಾಡಿದರೂ ಇದನ್ನ ಒರಿಜಿನಲ್ ಅಂತ ಮಾರುಕ್ಕೆ ಆಗುಲ್ಲ. ಲಕ್ಷ ಇರಲಿ ಹತ್ತು ಸಾವಿರ ಸಿಕ್ಕರೆ ಪುಣ್ಯ. ಇರಲಿ ಬಿಡು. ಅವನೇನೋ ನನಗೆ ಸಂತೋಷ ಆಗಲಿ ಅಂತಾನೇ ಮಾಡಿದ ಕೆಲಸ ಇದು. ಸಂತೋಷ ಪಟ್ಟುಕೊಂಡೇ ಹೋಗೋಣ. ನಾಮಕ್ಕಲ್ಲಿನಲ್ಲಿ ಒಳ್ಳೇ ವಡಾಪೊಂಗಲ್ ಸಿಗುತ್ತೆ. ನಾಮಕ್ಕಲ್ ಹಿಯರ್ ವಿ ಕಮ್" ಎನ್ನುತ್ತಾ ಕಣ್ಣನ್ ಮನ್ನಾಡೆ ಹಾಡೊಂದನ್ನು ಸಿಳ್ಳೆ ಹಾಕಲು ಪ್ರಾರಂಭಿಸಿದ. ಆ ಕ್ಷಣದಲ್ಲಿ ಇಂತಹ ಸ್ಥಿತ ಪ್ರಜ್ಞ ನನ್ನ ಗೆಳೆಯನಲ್ಲಾ ಎಂಬ ಹೆಮ್ಮೆಯಿಂದ ಬೀಗಿದೆ.

■

# ಹಾಲುಬಾಯಿ

। ಲಕ್ಷ್ಮಿ ಮಧು

ಇದು ಹಾಲುಬಾಯಿ. ಇದಕ್ಕೆ ಬೇರೆ ಬೇರೆ ಕಡೆ ಬೇರೆ ಬೇರೆ ಹೆಸರಿದೆ.ಇಲ್ಲಿವುದು ರಾಗಿಯದು. ಕೊಂಡು ತಂದಿದ್ದು.

ನಮ್ಮ ಅಮ್ಮ ಈ ಹಾಲುಬಾಯಿಯನ್ನ ಫಸ್ಟ್ ಕ್ಲಾಸಾಗಿ ಮಾಡೋರು. ತುಂಬ ರುಚಿಯಾದ, ಆರೋಗ್ಯಕರವಾದ, ಸಾತ್ವಿಕ ಸಿಹಿತಿನಿಸು ಇದು.

ಇಷ್ಟು ಸಾತ್ವಿಕವಾದ ಸ್ವೀಟಿಗೆ ಸಂಬಂಧಿಸಿದಂತೆ ಒಂದು ರಕ್ತಸಿಕ್ತ ಕಥೆ ಇದೆ. ಪಕ್ಕದಮನೆಯ ಅಜ್ಜಿ ಹೇಳ್ತಾ ಇದ್ದಿದ್ದು. ಬಹುಶಃ ಎಲ್ಲರಿಗೂ ಗೊತ್ತಿದೆ. ಗೊತ್ತಿಲ್ಲದವರ ಸಾಮಾನ್ಯಜ್ಞಾನದ ವಿಕಾಸಕ್ಕೆ ಕಾರಣಳಾಗುವ ಸದುದ್ದೇಶದಿಂದ ಪ್ರಸ್ತುತಿ ಪಡಿಸುತ್ತಿದ್ದೇನೆ.

ಹಿಂದೆ,

ಬಹಳ ಹಿಂದೆ...

ಯಾವುದೋ ಕಾಲದಲ್ಲಿ..

ಒಬ್ಬ ಕೆಳ ಅಂದ್ರೆ ತೀರಾ ಕೆಳಜಾತಿಯ ಹುಡುಗನೊಬ್ಬ ಇದ್ದ. ಅವನು ದನವೋ, ಕುರಿಯೋ ಮೇಯಿಸಲಿಕ್ಕೆ ಅಂತ ಊರಂಚು ಕಾಡಂಚಿಗೆಲ್ಲ ಹೋಗ್ತಿದ್ದ.

ಹೀಗೆ ತಿರುಗುವಾಗ ಎಲ್ಲೋ ಒಂದು ಕಡೆ ಬ್ರಾಹ್ಮಣ ಗುರುಗಳೊಬ್ಬರು ಹಲವು ಶಿಷ್ಯರಿಗೆ ವೇದ ಪಾಠ ಹೇಳಿಕೊಡ್ತಾ ಇದ್ದಿದ್ದನ್ನ ನೋಡಿದ . ಇವನಿಗೆ ಕುತೂಹಲ ಆಯ್ತು. ಮರೆಯಲ್ಲಿ ನಿಂತು ಕೇಳಿದ ...

ಅವನಿಗೆ ಈ ವೇದ, ಸಂಸ್ಕೃತ ಎಲ್ಲ ತುಂಬ ಇಷ್ಟ ಆಯ್ತು.ಆದರೆ ನೇರವಾಗಿ ಹೋಗಿ ಕಲಿಯುವಂತಿಲ್ಲ. ಅಸ್ಪೃಶ್ಯ ತಾನೇ...!!??

ಸರಿ..'ತೇಡಾ ಉಂಗ್ಲೀ ಸೇ ಘೀ ನಿಕಾಲ್ನ' ಅಂತ ಕದ್ದು ಪಾಠ ಕೇಳೋಕೆ ಶುರು ಮಾಡಿದ.

ಕದ್ದು ಕೇಳ್ತಾ ಕೇಳ್ತಾನೇ ಬ್ರಾಹ್ಮಣ ಹುಡುಗರನ್ನೂ ಮೀರಿಸೋ ಹಾಗೆ ವಿದ್ಯೆ ಕಲಿತ.

ಒಂದಿನ ಈ ಏಕಲವ್ಯ, ಆಕಸ್ಮಿಕವಾಗಿ ತನ್ನ ಗುರುಗಳ ಮಗಳನ್ನ ನೋಡಿದ.

ಆಕ್ಚುವಲಿ, ಇವಳೇ ನಮ್ಮ ಕಥಾನಾಯಕಿ..!!!

ಈ ಹೈದನಿಗೆ ಗುರುಪುತ್ರಿಯ ಮೇಲೆ ಪ್ರೇಮಾಂಕುರ ಆಯ್ತು. ಆ ಪ್ರಾಚೀನ ಕಾಲದಲ್ಲಿ ಲವ್ವಾದರೆ ಮದುವೆ ಆಗ್ತಾ ಇದ್ರು ..!!

ಆದರೆ ಇವನು ಅವಳನ್ನ ಮದುವೆ ಆಗೋದು ಅಸಾಧ್ಯ.!! ಹಾಗೆ ಯೋಚನೆ ಮಾಡೋದೂ ಘೋರ ಪಾಪ..!! ಅಯ್ಯೋ ಪಾಪ..!!

ಸರಿ.. ಮತ್ತೆ ಬುದ್ಧಿ ಸೊಟ್ಟಗಾಯ್ತು..'ತೇಡಾ ಉಂಗ್ಲೀ..' ಮಾಡಿ ತುಪ್ಪ ತೆಗೆಯೋಕೆ ಹೊರಟ..!!

ಜುಟ್ಟು, ಜನಿವಾರ, ಇತ್ಯಾದಿ ಸರ್ವಾಲಂಕಾರಗಳನ್ನೂ ಮಾಡಿಕೊಂಡು ಬ್ರಾಹ್ಮಣ ವೇಷ ಹಾಕ್ಕೊಂಡು ಗುರುಗಳ ಮನೆಗೆ ಬಂದ. ದೂರದಿಂದ ಬಂದಿದೀನಿ ಅಂದ. ಅವರಿಂದ ಕಳ್ಳತನದಲ್ಲಿ ಕಲಿತಿದ್ದ ವಿದ್ಯೆ ಅವರ ಮುಂದೆಯೇ ಪ್ರದರ್ಶಿಸಿ, 'ಭಲೇ.' ಎನಿಸಿಕೊಂಡ..!!!

ತನಗೆ ಬಂಧು ಬಳಗವಿಲ್ಲ,  ಒಬ್ಬ ತಾಯಿ ಮಾತ್ರ ಇರೋದಾಗಿಯೂ, ತಾನು ಕನ್ಯಾರ್ಥಿಯಾಗಿ ಬಂದಿರೋದಾಗಿಯೂ ಹೇಳಿದ.

ಇವನ  ಮಾತಿಗೆ ಮರುಳಾದ ಗುರುಗಳು ಕನ್ಯಾದಾನ ಮಾಡಿ ಕೃತಾರ್ಥರಾದರು.

ಈ ಕಳ್ಳ ಬ್ರಾಹ್ಮಣ ತನ್ನ ತಾಯಿಯನ್ನು ಕರೆತಂದ. ಈ ತಾಯಿ,  ಪಾಪ.., ಕದ್ದು ವೇದ ಕಲಿತಿರ್ಲಿಲ್ವಲ್ಲ...ಅವಳದು  ಶುದ್ಧ ಅವಳ ಜಾತಿಯ ಗ್ರಾಮ್ಯ

ಭಾಷೆ. ಈ ಸುಸಂಸ್ಕೃತ ಮಾತುಗಳು ಅವಳಿಗೆ ಬರ್ತಾ ಇರಲಿಲ್ಲ...!!

ಸರಿ, ಈ ನವ ಬ್ರಾಹ್ಮಣ ಮತ್ತೆ ಬೆರಳು ಸೊಟ್ಟ ಮಾಡಿದ. ಅಮ್ಮನಿಗೆ ಮೂಗಿಯಂತೆ ನಟಿಸೋಕ್ಕೆ ಹೇಳಿದ. ಅವಳೂ ಒಪ್ಪಿದಳು..!!

ವಿಥೌಟ್ ಮೇಕಪ್ ಡ್ರಾಮಾ ಶುರುವಾಯ್ತು. ಗುರುಪುತ್ರಿ ತನಗೆ  ಈ ಪಂಡಿತೋತ್ತಮ, ಬ್ರಾಹ್ಮಣ ಚೂಡಾಮಣಿ ಪತಿ ದೊರೆತದ್ದರಿಂದ  ಸಕ್ಕತ್ ಖುಷ್ ಆಗಿದ್ಲು.  ಅದರಲ್ಲೂ ಹೆಂಡತಿಯನ್ನು ಪ್ರೀತಿಸುವ ಎಕ್ಸ್ಟ್ರಾ  ಕ್ವಾಲಿಫಿಕೇಷನ್ ಬೇರೆ..!!

ಜೊತೆಗೆ ಬೋನಸ್ಸಾಗಿ ಸಿಕ್ಕಿದ ಮೂಗಿ ಅತ್ತೆಯಿಂದ ದಿವ್ಯಾನಂದಭರಿತಳಾಗಿ ಪತಿ, ಅತ್ತೆ ಸೇವೆ ಮಾಡಿದ್ದೂ ಮಾಡಿದ್ದೇ..!!

ಫಲವಾಗಿ ಮೂರು ಮಕ್ಕಳೂ ಆದವು.

ಎಲ್ಲ ಒಂದೇ ಥರ ಇದ್ರೆ ಕಾಲಕ್ಕೆ ಬೆಲೆಯಿರೋದಿಲ್ಲ ಅಲ್ವಾ..

ಇಲ್ಲೂ ಹಾಗೇ ಆಯ್ತು..!!!

ಒಂದಿನ ಈ ಕಥಾನಾಯಕಿ, ಈ ಕಥೆಯ ಪ್ರಮುಖ ಪಾತ್ರವಾದ, actually ವಿಲನ್ ಆದ, ಹಾಲುಬಾಯಿಯನ್ನ ತಯಾರಿಸಿದಳು. ಗಂಡ, ಮಕ್ಕಳು, ಅತ್ತೆ ಎಲ್ಲರಿಗೂ ಕೊಟ್ಟಳು.

ಈ ಹಾಲುಬಾಯಿಯನ್ನ ಜೀವನದಲ್ಲಿ ಎಂದೂ ಕಂಡು, ತಿಂದು, ಗೊತ್ತಿಲ್ಲದ ಅತ್ತೆ, ಅದನ್ನು ಸ್ವಾಹಾ ಮಾಡಿ, ಅದರ ಅಪ್ರತಿಮ ರುಚಿಗೆ ಮರುಳಾಗಿ, ಆನಂದಪರವಶಳಾಗಿ  ಕೂಗಿಯೇ ಬಿಟ್ಲು..

"ಆಹಾ.. ಮಗಾ.. ಒಳ್ಳೇ ಎಮ್ಮೆ ನಾಲ್ಗೆ ಅಂಗೆ ಬೋ ಸೆಂದಾಕೈತೆ...!!!!"

ನಾಯಕಿಗೆ  ಅರ್ಥ, ದಿಗ್ಭ್ರಮೆ.., ಶಾಕು..ಏನೇನು ಆಗ್ಬೇಕೋ ಎಲ್ಲ ಆಗಿ ಹೋಯ್ತು..!!!

ಕೊನೆಗೆ ತನಗೆ ಮಹಾಮೋಸ ಮಾಡಿದ ಈ ನೀಚ ಗಂಡನ ಮೇಲೆ ಮಹಾರೋಷ ಹುಟ್ಟಿತು..!!

ಕತ್ತಿ ಎತ್ಕೊಂಡ್ಲು.. ಹೊರಟಳು..

ಪ್ರಾಣಕಾಂತನ ಪ್ರಾಣ ತೆಗೆಯೋಕೆ..!!

ಈ ಕಳ್ಳ ಒಟ್ಟಾ ಫೇರಿ ಕಿತ್ತ. ಇವಳು ಬಿಡಲಿಲ್ಲ.. ಅಟ್ಟಿಸಿಕೊಂಡು ಹೋದಳು.

ಹೆದರಿ, ಕಂಗಾಲಾದ ಈ ದ್ರೋಹಿ, ಕೋಣದ ರೂಪ ತಳೆದ. ಈಯಮ್ಮ ಎಷ್ಟಾದ್ರೂ ಗುರುಗಳಿಗೇ ಮಗಳು... ಗೊತ್ತಾಗಲ್ವಾ... ಹಿಡಿದೇ ಬಿಟ್ಲು..!!

ಕೋಣನ ರೂಪದಲ್ಲಿ ಇದ್ದ ಗಂಡನ ರುಂಡ ಚೆಂಡಾಡಿದಳು...!!!

ಅಲ್ಲಿಗೂ ಅವಳ ರೋಷ ತಣಿಯಲಿಲ್ಲ. ಅವನ ಜಾತಿಯವರನ್ನೆಲ್ಲ ಕೊಲ್ಲಲು ಹೊರಟಳು. ಭಯಭೀತರಾದ ಅಮಾಯಕರು ಜೀವ ಉಳಿಸು ತಾಯೇ ಅಂತ ಕಾಲಿಗೆ ಬಿದ್ದು ಮೊರೆಯಿಟ್ಟರು.

ವರ್ಷಾ ವರ್ಷಾ ಅವಳ ಗಂಡನ ಪ್ರತೀಕವಾಗಿ ಕೋಣನನ್ನ

ಬಲಿ ಕೊಡುವುದಾಗಿ ಪ್ರಾಮಿಸ್ ಮಾಡಿದರು..!! ಅವರಿಗೆ ಕ್ಷಮಾದಾನ,

ಇವಳಿಗೆ ಸಮಾಧಾನ ಸಿಕ್ತು..!!

ಈ ತಾಯಿ, ಮಾರಮ್ಮ ಆದಳು. ದೇವತೆಯಾದಳು..!!

ಆದರೆ ಜಾತಿಗೆಟ್ಟ ದೇವತೆ ಆದ್ದರಿಂದ ಊರ ಹೊರಗೇ ಆಲಯ, ಪೂಜೆ ಎಲ್ಲ.

ವರ್ಷಕ್ಕೊಂದು ಕೋಣ ಕಡ್ಡಾಯ..!! ಕೊಂದವನನ್ನೇ ಮತ್ತೆ ಮತ್ತೆ ಕೊಲ್ಲಬೇಕಾದರೆ ಎಷ್ಟು ಕೋಪವೋ ಆಕೆಗೆ.

ಅದೆಷ್ಟು ಸಂಕಟವೋ..!!

ಹಂ... ಇದು ಕತೆ..!!

ಆದರೆ ನನ್ನ ಒಂದು ಅಭಿಪ್ರಾಯ ಏನೂ ಅಂದ್ರೆ..

ವರ್ಷಾನುಗಟ್ಟಲೆ ಮೂಗಿಯಂತೆ ಇದ್ದ ಹೆಂಗಸಿನ ಬಾಯಿ ಬಿಡಿಸಿದ ಈ ಹಾಲುಬಾಯಿ ಇನ್ನೆಷ್ಟು ರುಚಿಯಾಗಿ ಇದ್ದೀತು..??!!

ಬಹುಶಃ ಅಮ್ಮ ಮಾಡ್ತಿದ್ದ ಹಾಗಿತ್ತು..!!!!

ಇದು ಭೈರಪ್ಪನವರ ಕಾದಂಬರಿಯೊಂದರಲ್ಲಿ ಬರುತ್ತಂತೆ. ಅವರ ಕಟ್ಟಾ ಅಭಿಮಾನಿಯಾಗಿದ್ದೂ ಅದನ್ನ ಮರೆತಿದ್ದೆ. ■

---

## ನಾ. ಕಸ್ತೂರಿಯವರ ಅನರ್ಥಕೋಶದಿಂದ

**ಖುದಾಸೀನ** – ದೇವರಿದ್ದಾನೆ ಎಂದು ಉದಾಸೀನವಾಗಿರುವುದು

**ಸಾಲಗ್ರಾಮ** – ಸಾಲದಿಂದ ಕಟ್ಟಿರುವ ಮನೆಗಳ ಸಾಲು

**ಕ್ಷಾಮಧೇನು** – ಬಡಕಲು ಹಸು

**ವಧು** – ನಾವು ಮಾವನಿಂದ ಪಡೆದ ಮೊದಲ ವಸ್ತು

# ಕುಣಿದು ಕುಣಿಸುವ ಜಂಗಮವಾಣಿ

। ಕವಿತಾ ಗಿರೀಶ ಹೆಗಡೆ, ಶಾರ್ಜಾ

ಮೊದಲೆಲ್ಲಾ ಬದುಕಿಗೆ ಏನು ಅವಶ್ಯಕ? ಅಂದರೆ ಉತ್ತರ ಸರಳವಾಗಿತ್ತು.

ಒಂದು ಹಿಡಿ ಅನ್ನ,
ಬೊಗಸೆ ತುಂಬಾ ನೀರು,
ಮಾನ ಮುಚ್ಚುವಷ್ಟು ಬಟ್ಟೆ,
ಮೇಲೆ ಒಂದು ಸೂರು ಇದ್ದರೆ
ಮತ್ತಿನ್ನೇನ್ನು ಬದುಕೋಕೆ.
ಆದರೆ ಈಗ ಅಷ್ಟು ಸುಲಭ, ಸರಳ ಇಲ್ಲಾ ಬಿಡಿ ಬದುಕು...

ತುತ್ತು, ಸೂರು, ನೀರಿಗಿಂತ ಇನ್ನೊಂದು ವಸ್ತು ಅತ್ಯಗತ್ಯವಾಗಿಬಿಟ್ಟಿದೆ. ಮನುಷ್ಯ ಆಯಸ್ಸು, ವರ್ಣ, ಗುಣ, ಲಿಂಗ ಯಾವುದರ ಬೇಧವೂ ಇಲ್ಲದೇ ಆ ವಸ್ತುವಿನ ದಾಸನುದಾಸನಾಗಿದ್ದಾನೆ.

ಎಲ್ಲವನ್ನೂ ಇಲ್ಲವಾಗಿಸಿರುವ ವಸ್ತು ಯಾವುದು ತಿಳಿಯಿತು ಅಲ್ಲವೇ? ಅದೇ ಊಟ, ತಿಂಡಿ, ನಿದ್ದೆ ಅಷ್ಟೇ ಯಾಕೆ ಹೆಂಡತಿಇಲ್ಲದಿದ್ದರೂ ಓಕೆ... ಅದಿರಬೇಕು ನೋಡಿ. ಅಯ್ಯೋ ಇನ್ನೂ ಗೊತ್ತಾಗಲಿಲ್ಲವೇ? ಅದೇ ನಿಮ್ಮ ಕೈಲ್ಲಿ ಇದೆಯಲ್ಲ ಈಗ... ಅದೇ... ಜಂಗಮ ವಾಣಿ... ಮೊಬೈಲ್ ರೀ..!

ಮೊದಲೆಲ್ಲಾ ವೇಳೆ ಕಳೆಯಲು ಪುಸ್ತಕಗಳು ಜೊತೆಯಾಗುತ್ತಿದ್ದವು. "ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದೆ ಕೋಟಿರೂಪಾಯಿ" ಎಂದೆಲ್ಲಾ ಕವಿಗಳು ಬರೆಯುವ ಕವಿತೆಗೆ ಮನ ಒಪ್ಪಿ ಭಾವನೆಗಳಲ್ಲಿ ತೇಲುವಷ್ಟು ವೇಳೆಯಿತ್ತು. ಹೆಂಡತಿಯ ಪಕ್ಕದಲ್ಲಿ ಕುಳಿತು ಗುನುಗಿ ಅವಳ ಗಲ್ಲವನ್ನು ಕೆಂಪಾಗಿಸುವ ಸರಳ ಸುಂದರ ಬದುಕಿತ್ತು.

ಅಂತಹ ತಿಳಿ ಸಂಜೆಯಂಥ ತಂಪಾದ ಬದುಕನ್ನು ಆ ವಸ್ತು ಇನ್ನಿಲ್ಲವಾಗಿಸಿಬಿಟ್ಟಿದೆ. ತಾಯಿಯ ಮಡಿಲಲ್ಲಿ ಬೆಚ್ಚಗೆ ಗುಬ್ಬಚ್ಚಿಯಂತೆಕುಳಿತು ಕಥೆ ಕೇಳುವ ಪುಟಾಣಿ ಮಕ್ಕಳಿಗೂ ಅಮ್ಮ ಹೇಳುವ ಕಥೆಗಿಂತ ಮೊಬೈಲೇ ಹೆಚ್ಚು ಪ್ರೀಯವಾಗಿದೆ. ಪುಸ್ತಕಗಳನ್ನೂ ಮೂಟೆಕಟ್ಟಿ ಅಟ್ಟಕ್ಕೆ ಎಸೆದು ಬಿಟ್ಟಿದೆ ಈ ಮೊಬೈಲ್..!

ಮೊಬೈಲ್ ಎಂಬ ವಸ್ತು ಬಂದ ಮೇಲೆ, ಬೆಳಿಗ್ಗೆಯಿಂದ ರಾತ್ರಿಯ ತನಕ ಸಂಪೂರ್ಣ ಮೊಬೈಲ್ ಮೇಲೆ ನಾವುಅವಲಂಬಿತರಾಗಿದ್ದೇವೆ..! ಬೆಳಿಗ್ಗೆ ಎಬ್ಬಿಸುವ ಅಲಾರಾಂ, ಕ್ಯಾಲೆಂಡರ್, ವಾಚ್, ಲ್ಯಾಂಡ್ಲೈನ್ ಫೋನ್, ಕ್ಯಾಲಕ್ಯುಲೆಟರ್, ಟೇಪ್ರೆಕಾರ್ಡರ್, ರೇಡಿಯೋ ಎಲ್ಲವನ್ನೂ ಮಾಯವಾಗಿಸಿಬಿಟ್ಟಿದೆ ಈ ಮೊಬೈಲ್. ಇದು ಬಂದಾಗಲಿಂದ ಒಂದಾದ ಮೇಲೊಂದುವಸ್ತುಗಳನ್ನು ನುಂಗುತ್ತಲೇ ಬಂದಿದೆ.

ಮೊಬೈಲ್ನಿಂದ ಮಾನವ ಕಳೆದುಕೊಂಡಿರುವುದು ಕೇವಲ ವಸ್ತುಗಳನ್ನಷ್ಟೇ ಅಲ್ಲಾ ಅನ್ನುವುದು ವಿಷಾದನೀಯ. ಎಲ್ಲಾ ವಸ್ತುಗಳ ಜೊತೆಗೆ ಮಾನವನ ಭಾವನೆ, ಸಂವೇದನಾಶೀಲತೆ, ಸಂಬಂಧ, ಪ್ರೀತಿ ಮಾನವೀಯತೆ ಎಲ್ಲವೂ ಇನ್ನಿಲ್ಲವಾಗಿದೆ. ಆಕ್ಸಿಡೆಂಟ್ ಆಗಿ ಸಾವು ಬದುಕಿನ ನಡುವೆ ಹೋರಾಡುವವರಿಗೆ ಸಹಾಯ ಮಾಡದೇ ವಿಡಿಯೋ ಮಾಡುವಷ್ಟು ಕಟುಕನಾಗಿದ್ದಾನೆ ಮಾನವ..! ಮೊಬೈಲಿನ ಒಳಗೆ ತಾನು ಇಳಿದು ಹೋಗಿದ್ದಾನೆ.

ಸಂಘ ಜೀವಿ ಮಾನವನನ್ನು ಕೋಣೆಯೊಳಗೆ ಕೂಡಿಟ್ಟು ತಾನು ಅವನ

ಕೈಗೂಸಾಗಿದೆ. ನಿಜ ಲೋಕದಿಂದ ಬೇರೆ ಮಾಡಿ ಸಾಮಾಜಿಕತಾಣಗಳ ಮತ್ತೊಂದು ಲೋಕವನ್ನು ತೋರಿಸಿ ಆ ಲೋಕದಲ್ಲಿ ಅವನನ್ನು ಬಂಧಿಯಾಗಿಸಿಬಿಟ್ಟಿದೆ. ಆ ಕಣ್ಣುಮುಚ್ಚಾಲೆಯಲೋಕದಲ್ಲಿ ಕಳೆದುಕೊಳ್ಳುವವರೆಷ್ಟೋ, ಪಡೆದುಕೊಳ್ಳುವವರೆಷ್ಟೋ...

ಆ ಮೊಬೈಲಾಯಣ ಭಗವಂತನಿಗೆ ಗೊತ್ತು.

ಸ್ಮಾರ್ಟ್ ಫೋನ್ ಇದೊಂದು ಇದ್ದಿದ್ದರೆ ಯಾವ ರಾಮಾಯಣ, ಮಹಾಭಾರತವೂ ನೆಡೆಯುತ್ತಲೇ ಇರಲಿಲ್ಲ. ನಾರಾಯಣನಿಗೆಮೊಬೈಲಾಯಾಣ ಜೊತೆಗಿದ್ದಿದ್ದರೆ ಅವನೆತ್ತಿದ ಅವತಾರಗಳ ಉದ್ದೇಶ ಸಾಧಿಸುವುದು ಇನ್ನಷ್ಟು ಸುಲಭವಾಗುತ್ತಿತ್ತು.

ಇಂತಿಪ್ಪ ಮೊಬೈಲಾಯಣನ ದೇಹಕ್ಕೂ ಶೀತ, ಜ್ವರ, ಕೆಮ್ಮು ಕೆಲವೊಮ್ಮೆ ವೈರಸ್ ಅಟ್ಯಾಕ್ ಎಲ್ಲ ಖಾಯಿಲೆಗಳೂ ಬರುವ ಸಾಧ್ಯತೆಇದೆ. ಅದರಲ್ಲೂ ಅವನಿಗಿರುವ ಶಾಶ್ವತ ರೋಗ ಅಂದರೆ 'ಮೂರ್ಛೆ ರೋಗ.' ಇದು ಅವನನ್ನು ಕಾಡುವ ಪ್ರತಿದಿನದ ರೋಗ. ಚಾರ್ಜಿಂಗ್ ಎಂಬ ಮದ್ದನ್ನು ಪ್ರತಿದಿನವೂ ಇವನು ಸರಿಯಾದ ಪ್ರಮಾಣದಲ್ಲಿ ಸೇವಿಸದಿದ್ದರೆ ಮೂರ್ಛೆ ಹೋಗುವುದು ಖಂಡಿತ.

ಮೊಬೈಲ್ ಒಂದು ದೇಹವಾದರೆ ಇದಕ್ಕೆ ಆತ್ಮಗಳು ಹಲವಾರು ಫೇಸ್ಬುಕ್, ವಾಟ್ಸಾಪ್, ಟ್ವಿಟ್ಟರ್, ಇನ್ಸಾಗ್ರಾಮ್ ಇತ್ಯಾದಿ... ಇತ್ಯಾದಿ

ದೇಹ ನಾಶವಾದರೂ, ಆತ್ಮ ಶಾಶ್ವತ...! ಬೇರೆ ದೇಹವನ್ನು ಪ್ರವೇಶಿಸಲು ಸಾಮರ್ಥ್ಯವುಳ್ಳ ಆತ್ಮಗಳು! ಆದರೆ ಪ್ರೀತಿಯ ದೇಹನಾಶವಾದರೆ ಮಾನವನ ದುಃಖವಂತೂ ಎಂದಿನಂತೆ ಸತ್ಯ. ಆದರೆ ಯಾವ ನೋವು ದೀರ್ಘವಲ್ಲ ಬಿಡಿ..! ದೇಹಕ್ಕಿಂತ ಆತ್ಮಗಳುಮುಖ್ಯ ಅಲ್ಲವೇ?

ಆದರೂ ಕೆಲವೊಮ್ಮೆ ಗಂಭೀರ ರೋಗಗಳು ಆತ್ಮವನ್ನೂ ನಾಶಪಡಿಸಿ ಬಿಡಬಹುದು. ಜಾತ್ರೆಯಲ್ಲಿ ಕೈ ತಪ್ಪಿಸಿಕೊಂಡು ಕಳೆದು ಹೋಗಿಬಿಡುವ ಮಕ್ಕಳಂತೆ ಕಳೆದು ಹೋಗಿ ಬಿಡಬಹುದು. ಯಾರೋ ಕಿಡ್ನಾಪ್ ಮಾಡಿ ಬಿಡಬಹುದು. ಆಗ ಮಾತ್ರ ಯಜಮಾನನ ದುಃಖಎಂತವರನ್ನೂ ಕಂಗೆಡಿಸುವಷ್ಟು ಹೃದಯ ವಿದ್ರಾವಕ.

ಈ ಕೊರೋನ ಬಂದು "ಎಲ್ಲಾ ಬಣ್ಣವನ್ನೂ ಮಸಿ ನುಂಗಿತ್ತು" ಅನ್ನುವ ಹಾಗೆ, ಅಳಿದುಳಿದ ನಿತ್ಯ ಬದುಕನ್ನು ಮೊಬೈಲ್ ತನ್ನೊಳಗೆಎಳೆದುಕೊಂಡು ಬಿಟ್ಟಿತು.

ಮಕ್ಕಳಿಗೆ ಶಾಲೆಯ ಸಹಜ ಬದುಕಿಲ್ಲ..! ಪಾಠವೂ ಮೊಬೈಲ್, ಆಟವೂ ಮೊಬೈಲ್..! ಭೇಟಿಯಾಗಿ ನಕ್ಕು ನಲಿಯುವ ದಿನಗಳಿಲ್ಲ..! ಮಾತು ಮೊಬೈಲ್..! ಮೀಟಿಂಗೂ ಮೊಬೈಲ್..!

ನೆಂಟರೆಲ್ಲಾ ಸೇರಿ ಮಾಡುವ ಮದುವೆ ಮುಂಜಿಗಳಿಲ್ಲ... ಎಲ್ಲವೂ ವರ್ಚುವಲ್..!

ದೇವರ ಪೂಜೆಗೆ ಪೂಜಾರಿಯ ಅಗತ್ಯವೂ ಇಲ್ಲಾ ಈಗ. ಆ ಕೆಲಸವನ್ನು ಸಹ ಮೊಬೈಲ್ ತನ್ನ ಕೈಗೆತ್ತಿಕೊಂಡು ಬಿಟ್ಟಿದೆ. ಪೂಜೆ, ಭಜನೆ, ಮಂತ್ರ ಪಠಣ ಎಲ್ಲವೂ ಮೊಬೈಲ್ ಮಯವಾಗಿದೆ.

ಮೊಬೈಲಾಯಣನ ಈ ರೂಪವನ್ನು ನೋಡಿದ್ದರೆ ಖಂಡಿತ ನಾರದನು ಸಹ ಒಂದು ಜಂಗಮವಾಣಿಯನ್ನು ತನ್ನ ಸೊಂಟದಲ್ಲಿಸಿಕ್ಕಿಸಿಕೊಳ್ಳುತ್ತಿದ್ದನು... ದೇವಲೋಕದಲ್ಲಿ ಒಂದು ವಿಶೇಷ ಪಟ್ಟವನ್ನೂ ಕೊಡಿಸುತ್ತಿದ್ದಾನೇನೋ. ಕಲ್ಪವೃಕ್ಷ, ಕಾಮಧೇನು ಇವುಗಳಪಟ್ಟಿಗೆ ಮೊಬೈಲ್ ಸಹ ಸೇರಿ ಹೋಗುತ್ತಿತ್ತು.

ಹೀಗೆ ತೋರುಬೆರಳಿನಲ್ಲೇ ತಾ ಕುಣಿದು, ನಮ್ಮನ್ನೂ ಕುಣಿಸುವ ನಮ್ಮೆಲ್ಲರ ಹಿತಶತ್ರು ಜಂಗಮವಾಣಿಗೆ ಒಂದು ಜೈ ಅಂದುಬಿಡೋಣ ಅಲ್ಲವೇ..? ■

# ಸುಮ್ನೆ ತಮಾಷೆಗೆ...

**। ವಾಟ್ಸಪ್‌ನಿಂದ**

ಅಯೋಧ್ಯೆಗೆ ರಾಜನಾದ ಶ್ರೀರಾಮ ಒಂದು ದಿನ ತನ್ನ ಅರಮನೆಯ ಅಂಗಳದಲ್ಲಿ ಓಡಾಡುತ್ತಿದ್ದನಂತೆ. ಆಗ ಅವನಿಗೆ ಅಲ್ಲಿ ಇಲ್ಲಿ ತಿರುಗಾಡುತ್ತಿದ್ದ ಹನುಮಂತ ಕಾಣಿಸಿದನಂತೆ. ಅವನನ್ನು ನೋಡಿ 'ಅರೆ, ನೀನು ಇನ್ನೂ ಯಾಕೆ ಇಲ್ಲಿಯೇ ಇದ್ದೀಯಾ? ವಾಪಸು ಕಿಷ್ಕಿಂಧೆಗೆ ಹೋಗಿಲ್ಲವೇ?' ಎಂದು ಕೇಳಿದನಂತೆ. ಅದಕ್ಕೆ ಹನುಮಂತ 'ಇಲ್ಲಾ ಸ್ವಾಮಿ, ನಾನು ಸಂಜೀವಿನಿ ತಂದುಕೊಟ್ಟ ಟಿಎ ಡಿಎ ಬಿಲ್ ಇನ್ನೂ ಸೆಟ್ಲ್ ಆಗಿಲ್ಲ' ಎಂದನಂತೆ. ಅದಕ್ಕೆ ರಾಮನಿಗೆ ಸಿಟ್ಟು ಬಂತಂತೆ. ಹನುಮಂತನ ಬಿಲ್ ಸೆಟ್ಲ್ ಆಗಿಲ್ಲ ಎಂದರೆ ಇನ್ನು ಯಾರ ಬಿಲ್ ಸೆಟ್ಲ್ ಆಗುತ್ತದೆ ಎಂದು ಮಂತ್ರಿಯನ್ನು ಕರೆದು, ತಕ್ಷಣವೇ ಹನುಮಂತನ ಬಿಲ್ ಪಾವತಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದ. ಮಂತ್ರಿ 'ಆಯ್ತು, ತಕ್ಷಣವೇ ಮಾಡಿಸುತ್ತೇನೆ' ಎಂದು ಭರವಸೆ ನೀಡಿದ.

ನಂತರ ಸುಮಾರು 3–4 ತಿಂಗಳು ಕಳೆದ ನಂತರವೂ ಹನುಮಂತ ಅರಮನೆ ಆವರಣದಲ್ಲಿ ತಿರುಗಾಡುವುದು ನಿಲ್ಲಲಿಲ್ಲ. ಮತ್ತೆ ಅವನನ್ನು ಕಂಡ ರಾಮ 'ಯಾಕೆ ಇನ್ನೂ ಇಲ್ಲೇ ಇದ್ದೀಯಾ?' ಎಂದು ಕೇಳಿದಾಗ ಹನುಮಂತ 'ಇಲ್ಲ, ಇನ್ನೂ ನನ್ನ ಬಿಲ್ ಬಂದಿಲ್ಲ' ಎಂದನಂತೆ. ಈಗ ರಾಮನ ಸಿಟ್ಟು ಇನ್ನೂ ಹೆಚ್ಚಾಯಿತು. ಮತ್ತೆ ಮಂತ್ರಿಯನ್ನು ವಿಚಾರಿಸಿದ. ಅದಕ್ಕೆ ಮಂತ್ರಿ 'ಇಲ್ಲಾ ಸ್ವಾಮಿ, ಕೇಸ್ ವರ್ಕರ್ ಕೆಲವು ತಕರಾರು ಎತ್ತಿದ್ದಾನೆ. ಅದಕ್ಕೆ ಬಿಲ್ ಇನ್ನೂ ಪಾಸ್ ಆಗಿಲ್ಲ' ಎಂದನಂತೆ. 'ಏನ್ ತಕರಾರು ಅವಂದು' ಎಂದು ಕೇಳಿದ ರಾಮ.


'ಕೇಸ್ ವರ್ಕರ್ ಮೂರು ಪ್ರಶ್ನೆ ಹಾಕಿ ಬಿಲ್ ಪೆಂಡಿಂಗ್ ಇಟ್ಟಿದ್ದಾನೆ. ಮೊದಲನೆ ಪ್ರಶ್ನೆ, ಸಂಜೀವಿನಿ ತರುವಂತೆ ಹನುಮಂತನಿಗೆ ಸೂಚಿಸಿದವನು ರಾಮ, ಆದರೆ ರಾಮ ಆಗ ಅಯೋಧ್ಯೆಯ ರಾಜ ಆಗಿರಲಿಲ್ಲ. ರಾಜನಲ್ಲದ ಯಾರೋ ವ್ಯಕ್ತಿ ಹೇಳಿದ ಕೆಲಸವನ್ನು ಮಾಡಿದರೆ ಅದಕ್ಕೆ ಬಿಲ್ ಕೊಡಲು ನಿಯಮದಲ್ಲಿ ಅವಕಾಶ ಇಲ್ಲ. ಅಲ್ಲದೆ ಹನುಮಂತ 'ಡಿ' ದರ್ಜೆ ನೌಕರ. 'ಡಿ' ದರ್ಜೆ ನೌಕರರಿಗೆ ವಾಯುಮಾರ್ಗದಲ್ಲಿ ಹೋಗಲು ಎಲಿಜಿಬಿಲಿಟಿ ಇಲ್ಲ. ಇದಲ್ಲದೆ ಹನುಮಂತನಿಗೆ ಸಂಜೀವಿನಿ ಮಾತ್ರ ತರಲು ಹೇಳಿದ್ದು. ಆದರೆ ಅವನು ಇಡೀ ಸಂಜೀವಿನಿ ಪರ್ವತವನ್ನೇ ತಂದಿದ್ದಾನೆ. ಇದು ಅನವಶ್ಯಕ ಖರ್ಚು. ಆದ್ದರಿಂದ ಬಿಲ್ ಪಾಸ್ ಮಾಡಲು ಸಾಧ್ಯವಿಲ್ಲ ಎನ್ನುತ್ತಿದ್ದಾನೆ' ಎಂದ ಮಂತ್ರಿ. ಇದನ್ನು ಕೇಳಿದ ರಾಮ ತಲೆ ಮೇಲೆ ಕೈಹೊತ್ತು 'ಏನಾದ್ರೂ ಮಾಡಿ ತಕ್ಷಣವೇ ಹನುಮಂತನ ಬಿಲ್ ಪಾಸ್ ಮಾಡಿಸಿ' ಎಂದು ಸೂಚಿಸಿದನಂತೆ.

ನಂತರ ಮಂತ್ರಿ ಹನುಮಂತನಿಗೆ 'ನಿನ್ನ ಬಿಲ್ ಪಾಸಾಗಬೇಕು ಎಂದರೆ ಕೇಸ್ ವರ್ಕರ್ ಭೇಟಿ ಮಾಡಿ ಅವನನ್ನು ನೋಡಿಕೊ' ಎಂದು ಸಲಹೆ ಮಾಡಿದನಂತೆ. ಅದರಂತೆ ಹನುಮಂತ ಕೇಸ್ ವರ್ಕರ್ ಭೇಟಿ ಮಾಡಿ 'ಬಿಲ್ ಪಾಸಾದರೆ ಅದರ ಪರ್ಸೆಂಟೇಜ್ ಇಂತಿಷ್ಟು ಕೊಡುತ್ತೇನೆ' ಎಂದಾಗ ಕೇಸ್ ವರ್ಕರ್ 'ಸಂಜೆಯೇ ಬಂದು ಬಿಲ್ ತೆಗೆದುಕೊಂಡು ಹೋಗು' ಎಂದನಂತೆ. 'ಅರೇ ನೀವು ಅದೇನೋ ತಕರಾರು ಹಾಕಿದ್ದೀರಂತಲ್ಲ' ಎಂದು ಕೇಳಿದಾಗ ಕೇಸ್ ವರ್ಕರ್ 'ಅದೆಲ್ಲಾ ಏನೂ

ಇಲ್ಲ. ನಿನಗೆ ಸಂಜೀವಿನಿ ತರಲು ಹೇಳಿದಾಗ ರಾಮ ಅಯೋಧ್ಯೆಯ ರಾಜನಾಗಿರಲಿಲ್ಲ ಎನ್ನುವುದು ತಾನೆ. ಆಗ ಅಯೋಧ್ಯೆಗೆ ರಾಜರೇ ಇರಲಿಲ್ಲ. ರಾಮನ ಪಾದುಕೆ ಸಿಂಹಾಸನದ ಮೇಲಿತ್ತು. ಅದಕ್ಕಾಗಿ ರಾಮನೇ ರಾಜ ಎಂದು ಪರಿಗಣಿಸಿ ರಾಮ ಹೇಳಿದ್ದನ್ನು ಮಾಡಬಹುದು. ಇನ್ನು ನೀನು 'ಡಿ' ದರ್ಜೆ ನೌಕರ. ನಿನಗೆ ವಾಯುಮಾರ್ಗದಲ್ಲಿ ಹೋಗುವುದಕ್ಕೆ ಅನುಮತಿ ಇಲ್ಲ ಎನ್ನುವುದು. ತುರ್ತು ಸಂದರ್ಭದಲ್ಲಿ ಯಾರನ್ನು ಬೇಕಾದರೂ ವಾಯುಮಾರ್ಗದಲ್ಲಿ ಕಳಿಸಬಹುದು. ಮೂರನೆಯದ್ದು, ನೀನು ಸಂಜೀವಿನಿ ಪರ್ವತವನ್ನೇ ಯಾಕೆ ತಂದೆ ಎನ್ನುವುದು ತಾನೆ, ನೀನೇನು ಸಸ್ಯಶಾಸ್ತ್ರಜ್ಞ ಅಲ್ಲವಲ್ಲ, ನಿನಗೆ ಸಂಜೀವಿನಿ ಸಸ್ಯ ಯಾವುದು ಎನ್ನುವುದು ಗೊತ್ತಿಲ್ಲ. ಆದರೆ ಲಕ್ಷ್ಮಣನ ಜೀವ ಮುಖ್ಯ ಎಂದು ನೀನು ಸಂಜೀವಿನಿ ಪರ್ವತವನ್ನೇ ತಂದೆ. ಅದಕ್ಕಾಗಿ ನಿನ್ನ ಬಿಲ್ ಪಾಸ್ ಮಾಡಬಹುದು' ಎಂದನು.

■

---



# ಸಂಗೀತ ಲೋಕದಲ್ಲಿ ಫಸ್ಟ್ ಕ್ರೈ

**। ಧಾರಿಣಿ ಮಾಯಾ**

ನನ್ನಮ್ಮ ಭಾವಗೀತೆಗಳನ್ನು ತುಂಬ ಚೆನ್ನಾಗಿ ಹಾಡುತ್ತಿದ್ದರು. ಹಾಗಾಗಿ ನಾನೂ, ನನ್ನಕ್ಕ ಎಲ್ಲೇ ಹೋದರೂ ನಮ್ಮ ನೆಂಟರಿಷ್ಟರು, ನೀವೂ ನಿಮ್ಮಮ್ಮನ ಹಾಗೆ ಹಾಡುತ್ತೀರಾ ಎಂದು ಕೇಳುತ್ತಿದ್ದರು. ಸಂಗೀತದ ಒಲವೇ ಇರದ ನಮಗೆ ಉತ್ತರಿಸಲು ಮುಜುಗರವಾಗುತ್ತಿತ್ತು. ಅಮ್ಮನಿಗೆ ನನಗೂ, ನನ್ನಕ್ಕನಿಗೂ ಶಾಸ್ತ್ರೀಯ ಸಂಗೀತ ಕಲಿಸಬೇಕೆಂಬ ಇಚ್ಛೆಯಿತ್ತು. ಆದರೆ ನಮಗಿರಬೇಕಲ್ಲ! ತಮ್ಮ ಮಕ್ಕಳಿಗೆ ಹಾಡಿನ ಗಂಧ ಸ್ವಲ್ಪನಾದರೂ ಅಂಟಲಿ ಎಂಬ ಅಭಿಲಾಷೆಯಲ್ಲಿ ಒಬ್ಬ ಸಂಗೀತ ಮೇಷ್ಟ್ರನ್ನು ಮನೆಗೇ ಬಂದು ಸಂಗೀತ ಪಾಠ ಹೇಳಿಕೊಡಲು ವ್ಯವಸ್ಥೆಮಾಡಿಯೇ ಬಿಟ್ಟರು. ಆ ಮೇಷ್ಟ್ರಿಗೆ ಸುಮಾರು ಅರವತ್ತು ವರ್ಷವಿದ್ದಿರಬಹುದು.

ನಾವು ಶಾಲೆಯಿಂದ ನಾಲ್ಕು ಗಂಟೆಗೆ ಮನೆಗೆ ಬರುವ ಹೊತ್ತಿಗಾಗಲೇ ಮೇಷ್ಟ್ರ ಹಾಜರ್. ತಮ್ಮ ಹಾರ್ಮೋನಿಯಂ ಪೆಟ್ಟಿಗೆ ಮುಂದೆ ಕುಳಿತು ಅದರ ಶ್ರುತಿ ಸರಿ ಮಾಡುತ್ತ ಸ...ಪ ಸ... ಎಂದು ಗುನುಗುತ್ತಿದ್ದರು. ನಮಗೋ ಶಾಲೆಯಿಂದ ಬಂದೊಡನೆ ಸ್ವಲ್ಪ ವಿಶ್ರಾಂತಿ ಬೇಕೆನಿಸುತಿತ್ತು. ಆದರೆ ವಿಧಿಯಿಲ್ಲ, ಮೇಷ್ಟರ ಮುಂದೆ ಕುಳಿತೆವು. ಅವರು ಕಣ್ಣು ಮುಚ್ಚಿ ಕೆಲವು ಕೀಲಿಗಳನ್ನು ಅದುಮಿದರು. ಸಂಗೀತದದ ಸ ರಿ ಗ ಮ ಪ ರಾಗದಲ್ಲಿ ಹಾಡಿರೆಂದು ತಾವೇ ಹಾಡಿಸ್ವರ ತೋರಿಸಿದರು. ನನಗೋ ಆಕಳಿಕೆ. ನಾನೂ ನನ್ನಕ್ಕ ಒಬ್ಬರ ಸರತಿಯಂತೆ ಒಬ್ಬರು ದನಿಏರಿಸಿದೆವು. ಅಂದು ಸಂಗೀತ ಲೋಕದಲ್ಲಿ ನಮ್ಮದು ಫಸ್ಟ್ ಕ್ರೈ ಆಗಿತ್ತು. ಹೊರಬರಲಾರದ ಸ್ವರವನ್ನು ಗಂಟಲಿನಿಂದ ಹೇಗೋ ಹೊರದಬ್ಬಿದೆವು. ಮೊದಲನೆಯ ದಿನವಾದ್ದರಿಂದ ಅವರೂ ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ ಅನ್ಸುತ್ತೆ. ನಮ್ಮನ್ನು ಮಾಫಿ ಮಾಡಿದರು. ಮಣಭಾರದ ಶ್ರುತಿ ಪೆಟ್ಟಿಗೆಯನ್ನು ಪ್ರತಿದಿನ ಹೊರಲು ಅಸಾಧ್ಯವಾದ್ದರಿಂದ ನಮ್ಮ ಮನೆಯಲ್ಲೇ ಇಟ್ಟು ಹೋದರು. ಅಂದಿಗೆ ನಮಗೆ ಬಿಡುಗಡೆ ಸಿಕ್ಕಷ್ಟು ಸಂತೋಷ. ಹಕ್ಕಿಗಳು ಸ್ನೇಹಿತೆಯರೊಡನೆ ಆಟವಾಡಲು ಮನೆಯಾಚೆ ಓಡಿದವು.

ಕೆಲವೊಮ್ಮೆ ನಾನು ಶಾಲೆಯಿಂದ ಮನೆಗೆ ಬಂದ ಕೂಡಲೇ ಸಮವಸ್ತ್ರವನ್ನೂ ಬದಲಿಸದೆ ನನ್ನ ರೂಮಿಗೆ ಹೋಗಿ ಮಲಗುವ ನಾಟಕವಾಡುತ್ತಿದ್ದೆ. ನನ್ನಮ್ಮ ನನ್ನ ಮುಸುಕೆಳೆದು, 'ಹಾಗೆಲ್ಲ ಮಾಡಬೇಡ ಕಣೆ. ಪಾಪ ಅವ್ರು ವಯಸ್ಸಾದವರು, ಅರ್ಧ ಗಂಟೆಯಿಂದ ಕಾಯ್ತಾ ಇದ್ದಾರೆ' ಎಂದು ಹೇಳಿ ನನ್ನನ್ನು ರಮಿಸಿ ಅವರ ಮುಂದೆ ಕೂರಿಸುತ್ತಿದ್ದರು. ಪುನಃ ಮಾರನೇ ದಿನ ಮೇಷ್ಟ್ರು ಬರುವವರೆಗೂ ಬಿಂದಾಸಾಗಿರುತ್ತಿದ್ದೆವು. ಅವರನ್ನು ನೋಡಿದ ಕೂಡಲೇ ನಮ್ಮ ಮುಖ ಹರಳೆಣ್ಣೆ ಕುಡಿದಂತಾಗುತ್ತಿತ್ತು. ಹಾಗೂ ಹೀಗೂ ಕೆಲ ದಿನಗಳವರೆಗೂ ನಡೆಯಿತು ನಮ್ಮ 'ಸೊ ಕಾಲ್ಡ್ ಸಂಗೀತಾಭ್ಯಾಸ.' ಅಷ್ಟು ದಿನಗಳಾದರೂ ಅಲ್ಲಲ್ಲಿ ಅಪಸ್ವರ ಬರುತ್ತಲೇ ಇತ್ತು. ಒಮ್ಮೆ ನಮ್ಮ ಮೇಷ್ಟ್ರ ಸಿಟ್ಟು ನೆತ್ತಿಗೇರಿತು. ಶ್ರುತಿ ಪೆಟ್ಟಿಗೆಯನ್ನು ತೋರಿಸಿ, 'ನಿಮ್ಮಜ್ಜ, ಇಲ್ಲಿ ನೋಡಿ ಈ ಶ್ರುತಿ ಪೆಟ್ಟಿಗೆಯನ್ನು ಗಮನವಿಟ್ಟು ಕೇಳಿ ಅನುಸರಿಸಿ' ಎಂದು ರೇಗಿದರು. ಅವರ ಕೋಪ ನೋಡಿ ಮೊದಲಿಗೆ ದಿಗಿಲುಗೊಂಡರೂ, ಅವರ ಪಿತ್ತ ಏರಿದ್ದನ್ನು ಕಂಡು ಮುಸಿಮುಸಿ ನಕ್ಕವು ಎಳಸು ಮನಸ್ಸುಗಳು.

ನಮ್ಮೀ ಆಟವನ್ನು ನೋಡುತ್ತಿದ್ದ ನಮ್ಮಮ್ಮನಿಗೆ ಕೊನೆಗೆ ರೋಸಿ ಹೋಯಿತು. ಇನ್ನು ನಾವು ಸಂಗೀತ ಕಲಿತು ಉದ್ಧಾರವಾಗೋದು ಅಷ್ಟರಲ್ಲೇ ಇದೆ ಎಂದುಕೊಂಡು ಸಂಗೀತ ಮೇಷ್ಟ್ರಿಗೆ ನಮ್ಮ ಪರವಾಗಿ ಕ್ಷಮೆ ಕೋರಿದರು.

ಅಲ್ಲಿಗೆ ನಮ್ಮ ಸಂಗೀತ ಲೋಕದ ಪಯಣ ಮುಗ್ಗರಿಸಿ ಬಿತ್ತು. ■

# ಆಟೋಕ್ಕುಂಟು ಲೆಕ್ಕಕ್ಕಿಲ್ಲ

**। ಅನಿತಾ ನಾಡಿಗ್**

ಇತ್ತೀಚೆಗೆ ಆರು ವರ್ಷದ ಪುಟ್ಟನ ಜೊತೆ ಎಲ್ಲೋ ಹೊರಗೆ ಹೋಗೋ ತಯಾರಿ ನಡೆಸ್ತಾ ಇದ್ದೆ. ಇದಕ್ಕಿದ್ದಂತೆ ಅವನು, 'ಅತ್ತೆ ಇವತ್ತು ಆಟೋದಲ್ಲಿ ಹೋಗೋಣವ ' ಅಂದ. 'ಯಾಕೋ, ಕಾರ್ ಅಲ್ಲಿ ಬೇಡವ' ಅಂದಿದ್ದಕ್ಕೆ, 'ಆಟೋಲಿ ಹೋಗಕ್ಕೆ ನಂಗೆ ಇಷ್ಟ' ಅಂದ. ನನಗೆ ಸ್ವಲ್ಪ ಆಶ್ಚರ್ಯ ಆಗಿ, ಹಳೆ ನೆನಪುಗಳು ಮರುಕಳಿಸಿದವು.

ನಾನು ಸಣ್ಣವಳಿದ್ದಾಗ, ಆಟೊ ಸವಾರಿ ಅಂದ್ರೆ ತುಂಬಾ ಇಷ್ಟ ಆಗ್ತಾ ಇತ್ತು. ನಮ್ಮ ಚಿಕ್ಕಪ್ಪನ ಹತ್ರ ಆಟೊ ಇತ್ತು. ಬೇಸಿಗೆ ರಜೆ, ದಸರಾ ರಜೆ ಬಂದ್ರೆ, ಅಜ್ಜಿ ಮನೆಗೆ ಹೋಗೋ ಕಾತರ – ಚಿಕ್ಕಪ್ಪನ ಆಟೋದಲ್ಲಿ ರೌಂಡ್ ಹೋಗಬಹುದಲ್ಲ ಅಂತ. ನಮ್ಮ ಚಿಕ್ಕಪ್ಪ, ಅಜ್ಜಿ ಮನೆಗೆ ಹೋಗಿದ್ದ ಎಲ್ಲ ಚಿಳ್ಳೆಪಿಳ್ಳೆಗಳನ್ನು ಕಟ್ಟಿಕೊಂಡು ಆಟೋದಲ್ಲಿ ರೌಂಡ್ ಹಾಕಿಸಿ, ಪಾರ್ಕಲ್ಲಿ ಆಡಿಸಿ ಪೆಪ್ಪರ್ಮೆಂಟ್ ಕೊಡಿಸಿ ಕರ್ಕೊಂಡು ಬರ್ತಾ ಇದ್ದರು. ಇದು ನನ್ನ ನೆಚ್ಚಿನ ಬಾಲ್ಯದ ನೆನಪುಗಳಲ್ಲಿ ಒಂದು. ಆಗಿನ ಕಾಲದಲ್ಲಿ, ನಮ್ಮ ಮನೇಲಿ ಆಗಲಿ, ನಮ್ಮ ಸಂಬಂಧಿಕರ ಮನೇಲಿ ಆಗಲಿ ಹೆಚ್ಚೆಂದರೆ ಸೈಕಲ್ ಒಂದೆ ಇದ್ದಿದ್ದು. ಹಾಗಿದ್ದಾಗ, ಆಟೊ ಇಟ್ಕೊಂಡಿದ್ದ ನಮ್ಮ ಚಿಕ್ಕಪ್ಪ ನನ್ನ ಪಾಲಿಗೆ ಹೀರೋ ಆಗಿದ್ರು.

ಆಗ ನನ್ನ ವಯಸ್ಸಿನ ಗೆಳೆಯ–ಗೆಳತಿಯರಿಗೂ, ಆಟೊ ಸವಾರಿ ತುಂಬಾ ಇಷ್ಟ ಆಗ್ತಾ ಇತ್ತು. ನಾವು ನಮ್ಮ ಊರಿಗೆಲ್ಲ ಇದ್ದ ಒಂದೇ ಒಂದು ಆಟೊ ಬಂದ್ರೆ ಸಾಕು, ಎಲ್ಲ ಹೋ ಅಂತ ಆಟೊ ಹಿಂದೆ ಓಡಿ, ನಮ್ಮ ನಮ್ಮ ಆಟೊ ಸವಾರಿಯ ಅನುಭವಕ್ಕೆ ಉಪ್ಪು ಖಾರ ಹಾಕಿ ನಮ್ಮ ಅನುಭವದ ಬಗ್ಗೆ ಕೊಚ್ಚಿಕೋತಾ ಇದ್ವಿ.

ನಮ್ಮ ಪುಟ್ಟ ಆಟೋಲಿ ಹೋಗಣ ಅಂದಾಗ, ಆಶ್ಚರ್ಯ ಯಾಕೆ ಆಯಿತು ಅಂದ್ರೆ, ಸಣ್ಣವರಿದ್ದಾಗ, ನಮ್ಮ ಮನೆಗಳಲ್ಲಿ ಮೋಟಾರು ವಾಹನಗಳಿರಲಿಲ್ಲ. ಹಾಗಾಗಿ ಆಟೊ ನಮಗೆ ಪ್ರಿಯ ಆಗ್ತಾ ಇತ್ತು. ಆಸ್ಪತ್ರೇಲಿ ಹುಟ್ಟಿದ ನಮ್ಮ ಪುಟ್ಟ, ಮನೆಗೆ ಬಂದಿದ್ದೆ ಕಾರಲ್ಲಿ. ಹುಟ್ಟಿದಾಗಿಂದ ಕಾರಲ್ಲೇ ಓಡಾಡಿದ್ದ ಪುಟ್ಟನಿಗೆ ಆಟೊ ಏನು ಮೋಡಿ ಮಾಡಿದೆ ಅಂತ ಸ್ವಲ್ಪ ನಗು ಬಂದು, ಆಶ್ಚರ್ಯನೂ ಆಯಿತು.

ನಮ್ಮ ಭಾರತದಲ್ಲಿ, ಸುಮಾರು ಎಲ್ಲರಿಗೆ ಆಟೊ ಸವಾರಿಯ ಅನುಭವ ಇದ್ದೇ ಇರತ್ತೆ. ನನಗಂತೂ ಈ ಆಟೊ ಸಹವಾಸ ವಿಧವಿಧವಾದ ಅನುಭವಗಳನ್ನು ಕೊಡೋದಲ್ಲದೆ, ವಿವಿಧ ರಸಗಳನ್ನು ಪ್ರಚೋದಿಸಿದೆ!

ನಾನು ಕೆಲಸಕ್ಕೆ ಅಂತ ಬೆಂಗಳೂರಿಗೆ ಬಂದ ಮೇಲೆ ಆಟೋದಲ್ಲಿ ತುಂಬಾ ಓಡಾಡೋದು ಶುರು ಆಯಿತು. ಕೆಲಸ ಸಿಗಕ್ಕೆ ಮುಂಚೆ, ಕಮ್ಮಿ ಸಂಬಳ ಬರ್ತಾ ಇದ್ದ ದಿನಗಳಲ್ಲಿ, ಆಟೊ ಹತ್ತಿದಾಗ, ಓಡೋ ಮೀಟರ್ ನೋಡಿದ್ರೆ ನಂಗೆ ನನ್ನ ಹೃದಯದ ಬಡಿತ ಜೋರಿದ್ಯಾ , ಆಟೊ ಮೀಟರ್ ಓಟ ಜೋರಿದ್ಯಾ ಅಂತ ಅನುಮಾನ ಆಗೋದು. ಒಮ್ಮೊಮ್ಮೆ, ಮೀಟರ್ ಓಡೋ ವೇಗ ನೋಡಿ ನನ್ನ ಹೃದಯದ ಬಡಿತ ಹೆಚ್ಚಾಗೋದು. ಸ್ಟಾಪ್ ಬಂದ ಮೇಲೆ, ಎಷ್ಟೊಂದು ದುಡ್ಡು ಕೊಡ್ಬೇಕಲ್ಲ ಅಂತ ಬೇಜಾರಾಗೋದು. ಇನ್ನೇನ್ ಮಾಡೋದು, ದುಡ್ಡು ಕೊಡಲೇ ಬೇಕಲ್ಲ ಅಂತ ಪರ್ಸಿಗೆ ಕೈ ಹಾಕೋ ಹೊತ್ತಿಗೆ, ಆಟೋದವರು, ಮೀಟರ್ ಮೇಲೆ

ಹತ್ತು ಜಾಸ್ತಿ ಕೊಡಿ ಅಂದಾಗ, ನನ್ನ ಹೃದಯದ ಬಡಿತ ತಾರಕಕ್ಕೆ ಏರಿ,ಆಟೋದವರ ಜೊತೆ ಜಗಳ ಮಾಡಿದ ಮೇಲೇನೆ ಸಹಜ ಸ್ಥಿತಿಗೆ ಬರ್ತಾ ಇತ್ತು.

ನಾವು ಅಪಾರ್ಟ್ಮೆಂಟ್‌ಗೆ ಬಂದ ಮೇಲಂತು ಆಟೋದವರ ಜೊತೆ ಜಗಳ ಸಾಮಾನ್ಯ ಆಗೋಗಿತ್ತು. ನಾವು, ಪಿಕ್ ಅಪ್–ಡ್ರಾಪ್‌ಗೆ ಅಪಾರ್ಟ್ಮೆಂಟ್ ಒಳಗೆ ಬನ್ನಿ ಅನ್ನೋದು, ಅವರು ಹತ್ತು ರೂಪಾಯಿ ಎಕ್ಸ್ಟ್ರಾ ಕೊಡಬೇಕಾಗತ್ತೆ ಅನ್ನೋದು, ಅದಕ್ಕೆ ಜಗಳ. ಜಗಳ ಆಡಕ್ಕೆ ಕಷ್ಟ ಅಂತ ನಾನು, ಹತ್ತು ರೂಪಾಯಿ ಎಕ್ಸ್ಟ್ರಾ ಕೊಟ್ಟೋ, ಅಥವಾ ಗೇಟ್ ಹತ್ರಾನೇ ಆಟೊ ಇಳಿದು ಬರ್ತಾ ಇದ್ದೆ. ನನ್ನ ಸ್ನೇಹಿತೆ ಮಾತ್ರ ಆಟೋದವರ ಹತ್ರ ಚೆನ್ನಾಗಿ ಜಗಳ ಆಡ್ತಾ ಇದ್ಲು. ಒಂದು ಸಲ ಇದನ್ನು ಅವಳಿಗೆ ಹೇಳಿದಾಗ, 'ಇಲ್ಲ ಕಣೆ, ನಾನು ಊರಲ್ಲಿ ಇದ್ದಾಗ ನಾನು ಜಗಳ ಆಡದು ಇರ್ಲಿ, ಬೇರೆಯವರು ಜಗಳ ಆಡಿದ್ರೇನೇ ನಂಗೆ ಭಯ ಆಗದು. ಇಲ್ಲಿ ಬಂದು, ಆಟೋದಲ್ಲಿ ಓಡಾಡಕ್ಕೆ ಶುರು ಮಾಡಿದ್ಮೇಲೆ ನಂಗೆ ಧೈರ್ಯ ಬಂತು!'. ನನಗೆ ಇವಳ ಆಟೊ ಅನುಭವ ಇವಳಿಗೆ ಒಳ್ಳೆಯದು ಮಾಡಿತೋ, ಕೆಟ್ಟದು ಮಾಡಿತೋ ಅಂತ ಇದುವರೆಗೂ ಅರ್ಥ ಆಗಿಲ್ಲ.

ಓಲ ಉಬರ್ ಆಟೊ ಬರಕ್ಕೆ ಮುಂಚೆ, ಆಟೊ ಹಿಡಿಯದೇ ಒಂದು ದೊಡ್ಡ ಕೆಲಸ ಆಗ್ತಾ ಇತ್ತು. ನಾವು ಯಾವ ಆಟೋದವರನ್ನು ಎಲ್ಲಿಗೆ ಕರೆದರೂ, ಬರಲ್ಲ ಅನ್ನೋ ಉತ್ತರಾನೇ ಜಾಸ್ತಿ ಇರ್ತ ಇತ್ತು. ಬರ್ತೀನಿ ಅಂದ್ರೆ, ಮೀಟರ್ಗಿಂತ ತುಂಬಾ ಜಾಸ್ತಿ ಕೇಳೋರು. ಒಂದು ಸಲ ನಾನು ಶಿವಾಜಿನಗರ ಬಸ್ಟಾಪ್ ಅಲ್ಲಿ ಕೋರಮಂಗಲ ಬಸ್ಸಿಗೆ ಕಾದು ಸಾಕಾಗಿ, ಆಟೋದಲ್ಲಿ ಹೋಗಣ ಅಂತ ತೀರ್ಮಾನಿಸಿದೆ. ಆಟೊ ಸ್ಟಾಂಡ್ ಹತ್ರ ಹೋಗ್ತಾ ಇದ್ದೆ. ಜೀನ್ಸ್ ಪ್ಯಾಂಟ್, ಟೀ ಶರ್ಟ್ ಧರಿಸಿದ್ದ ನನ್ನನ್ನಆಟೊ ಸ್ಟಾಂಡ್ ಇಂದ ನೋಡಿದ ಒಬ್ಬ ಆಟೋದವನು, 'ಎಲ್ಲಿಗೆ ಮೇಡಂ' ಅಂತ ಕಿರಚಿದ. ಪಕ್ಕದವನು, 'ಕನ್ನಡ ಬರಲ್ಲ ಕಣೋ, ನಾರ್ತ್ ಇಂಡಿಯನ್' ಅಂದ. ಅಷ್ಟರಲ್ಲಿ ನಾನು ಆಟೋಸ್ಟ್ಯಾಂಡ್ ತಲುಪಿದ್ದೆ. ಒಬ್ಬ 'ಕಿಧರ್ ಜಾನಾ ಹೆ ಮೇಡಂ?' ಅಂದ. ನಾನು, 'ಕೋರಮಂಗಲ' ಅಂದು ಇಷ್ಟು ಜನರಲ್ಲಿ ಯಾರಾದ್ರು ಒಬ್ಬರಾದ್ರೂ ಬರ್ತಾರಾ ಅಂತ ಯೋಚಿಸ್ತಾ ಒಂದು ಕಣ್ಣು ಹಾಯಿಸಿದೆ. ನನ್ನ ಪ್ರಶ್ನಿಸಿದ ಆಟೊ ಡ್ರೈವರ್, 'ಟೂ ಹಂಡ್ರೆಡ್ ರುಪೀಸ್' ಅಂದ. ಆಗಿನ ಕಾಲದಲ್ಲಿ, ಶಿವಾಜಿ ನಗರದಿಂದ ಕೊರಮಂಗಲಕ್ಕೆ ಸುಮಾರು ಎಪ್ಪತ್ತೈದರಿಂದ ಎಂಬತ್ತು ರೂಪಾಯಿ ಆಗ್ತಾ ಇತ್ತು. ನನಗೆ ಸಿಟ್ಟು ಬಂದು 'ಸರಿ, ಕೊರಮಂಗಲಕ್ಕೆ ನೀವೇ ಹೋಗಿ' ಅಂದೆ. ನಾನು ಕನ್ನಡದಲ್ಲಿ ಹಾಗೆ ಡೈಲಾಗ್ ಹೊಡೆದಿದ್ದಕ್ಕೆ ಅವನ ಅಕ್ಕ ಪಕ್ಕದವರೆಲ್ಲ ಬಿದ್ದು ಬಿದ್ದು ನಗಕ್ಕೆ ಶುರು ಮಾಡಿದ್ರು. ಹಾಗು ಹೀಗೂ ಮಾತುಕತೆ ನಡೆಸಿ, ಆಟೊ ಹಿಡಿದು ಮನೆಗೆ ಹೋದೆ.

ಆಫೀಸಿನ ಸಲುವಾಗಿ ಜಯನಗರದಿಂದ ಚನ್ನಸಂದ್ರಕ್ಕೆ ನಾನು ದಿನಾ ಓಡಾಡಬೇಕಿತ್ತು. ಉತ್ತರಹಳ್ಳಿ ರೋಡ್ ಟ್ರಾಫಿಕ್ ಗೆ ಹೆದರಿ ನಾನು ಖಾಯಂ ಆಟೊ ಮೊರೆ ಹೋಗಿದ್ದೆ. ಸಂಜೆ ಮಾತ್ರ, ಭಾರಿ ತೊಂದರೆ ಆಗೋದು. ಯಾರು ಆಟೋದವರು ನಮ್ಮ ಸೈಡ್ ಬರ್ತಾ ಇರ್ಲಿಲ್ಲ. ಒಂದೊಂದು ಸಲ ಎರಡು ಆಟೊ ಮಾಡ್ಕೊಂಡು ಬರ್ತಾ ಇದ್ದೆ. ಆಟೋದವರಿಗೆ ಮೊದಲು, 'ಚನ್ನಸಂದ್ರ ಬರ್ತೀರಾ?' ಅಂತ ಕೇಳ್ತಾ ಇದ್ದೆ. ಇಲ್ಲ ಅಂದ್ರೆ, 'ಉತ್ತರಹಳ್ಳಿ?' ನನ್ನ ನಂತರದ ಪ್ರಶ್ನೆ. ಕೆಲವರು ತಲೆ ಅಲ್ಲಾಡಿಸಿ ಇಲ್ಲ ಅಂದ್ರೆ, ಕೆಲವರು ಮೌನ ಪ್ರದರ್ಶಿಸಿ ಇಲ್ಲ ಅನ್ನೋವ್ರು. ಆಗ ನಾನು, 'ಪದ್ಮನಾಭ ನಗರ?' ಅಂತ ಕೇಳ್ತಾ ಇದ್ದೆ. ಸುಮಾರು ಸಲ ಈ ಟ್ರಿಕ್ ಕೆಲಸ

ಮಾಡ್ತಾ ಇತ್ತು. ಪದ್ಮನಾಭನಗರಕ್ಕೆ ಬಂದು,ಇನ್ನೊಂದು ಆಟೊ ಅಥವಾ ಬಸ್ ಅಲ್ಲಿ ಮನೆ ತಲುಪ್ತಾ ಇದ್ದೆ. ಒಂದು ಸಲ, ನನ್ನ ಗ್ರಹಚಾರ ಚೆನ್ನಾಗಿಲ್ಲದೆ, ಎರಡು ಮೂರು ಆಟೋದವರನ್ನ ಕೇಳಿದ್ರು ಬರಲ್ಲ ಅಂದ್ರು. ನಾಕನೇ ಆಟೋದವನ್ನ ಕೇಳೋ ಹೊತ್ತಿಗೆ ನನ್ನ ಸಹನೆ ಮೀರಿತ್ತು. ಅವನೂ ಯಾವಾಗ ಪದ್ಮನಾಭನಗರಕ್ಕೊ ಬರಲ್ಲ ಅಂದನೋ, ನಾನು, 'ಸರಿ, ಎಲ್ಲಿಗೆ ಬರ್ತೀರಾ ಅಂತಾನಾದ್ರು ಹೇಳಿ ಹಾಗಾದ್ರೆ?' ಅಂದು ಬಿಟ್ಟೆ. ಅವನು ನನ್ನ ದುರುಗುಟ್ಟಿ ನೋಡಿ, ಆಟೊ ಸ್ಟಾರ್ಟ್ ಮಾಡ್ಕೊಂಡು ಹೋದ.

ಈ ತರ ಏನೇ ಅನುಭವ ಆಗಿದ್ರು, ಮಧ್ಯಮ ವರ್ಗದವರಿಗೆ ಆಟೋದವರು ಆಪತ್ಬಾಂಧವರೇ. ಮಕ್ಕಳಿಗೆ ಶಾಲೆಗೆ ಕಳಿಸಕ್ಕೆ, ಅಕ್ಕಪಕ್ಕದ ಹೆಂಗಳೆಯರು ಸೇರಿ, ಒಂದು ಆಟೊ ಮಾಡ್ಕೊಂಡು ಶಾಪಿಂಗ್ ಹೋಗಿ ಬರಕ್ಕೆ, ಅರ್ಜೆಂಟ್ ಆಗಿ ಹತ್ತಿರದಲ್ಲೆಲ್ಲೊ ಹೋಗಕ್ಕೆಲ್ಲ ಆಟೋನೆ ಸಲೀಸು.

ನನಗೆ ನೆನಪಿರೋ ಹಾಗೆ, ವಾಕಿಂಗ್ ಮಾಡ್ಕೊಂಡು ಊರಾಚೆ ಹೋಗಿಬಿಟ್ಟಿದ್ದ ನಮ್ಮ ಅಜ್ಜನನ್ನು, ರೋಡ್ ಅಲ್ಲಿ ಆಯಾ ತಪ್ಪಿ ಬಿದ್ದ ದೊಡ್ಡಪ್ಪನ್ನು ಉದಾರ ಮನಸ್ಸಿನಿಂದ, ದುಡ್ಡು ಸಹ ತೊಗೊಳ್ಳದೆ ಮನೆಗೆ ಕರೆದುಕೊಂಡು ಬಂದು ಬಿಟ್ಟಿದ್ದು ಆಟೋದವರೇ.

ಸಮಾಜಸೇವೆಗೂ ಇವರ ಕೊಡುಗೆ ದೊಡ್ಡದು. ನಾನು ಬ್ಯುಸಿ ರಸ್ತೆಗಳಲ್ಲಿ ಡ್ರೈವಿಂಗ್ ಮಾಡೋವಾಗ ರೈಟ್ ಟರ್ನ್ ತೊಗೊಳಕ್ಕೆ ಯಾವಾಗಲು ಆಟೋದವರನ್ನೇ ಕಾಯೋದು. ಎಷ್ಟೇ ಟ್ರಾಫಿಕ್ ಇರ್ಲಿ, ಹೀರೋಗಳ ತರ ಧೈರ್ಯವಾಗಿ ಮುನ್ನುಗ್ಗಿ, ದಾರಿ ಮಾಡ್ಕೊಂಡು ಸಲೀಸಾಗಿ ಮುಂದೆ ಹೋಗೋರು ಆಟೊ ಡ್ರೈವರ್ಗಳೇ. ಟ್ರಾಫಿಕ್ ಜಾಮ್ ಆದಾಗ, ಎಷ್ಟೋ ಸಲ ಆಟೊ ಡ್ರೈವರ್ಗಳು ಇಳಿದು, ಟ್ರಾಫಿಕ್ ಪೊಲೀಸ್ ಕೆಲಸ ಮಾಡೋದನ್ನ ನೋಡಿದೀನಿ.

ಒಂದು ಸಲ, ನನ್ನ ಅನಿವಾಸಿ ಭಾರತೀಯ ಸ್ನೇಹಿತೆ ಅಮೇರಿಕದಿಂದ ಬಂದಿದ್ಲು. ನಾನು ಅವಳಿಗೆ ಬೆಂಗಳೂರು ಅಮೆರಿಕಗಿಂತ ಏನು ಕಮ್ಮಿ ಅಂತ ತೋರಿಸಕ್ಕೆ, ಮೆಟ್ರೋ ಸ್ಟೇಷನ್ಗೆ ಕರ್ಕೊಂಡು ಹೋದೆ. ಮೆಟ್ರೋ ಇಳಿದು, ಅವಳ ಮನೆಗೆ ಬಿಡಕ್ಕೆ ಒಂದು ಆಟೊ ಹತ್ತಿದ್ವಿ. ಆ ಆಟೋದವನಂತು, ಇನ್ನೂ ಹದಿಹರೆಯದವನ ತರ ಇದ್ದ. ಆಟೋನ ಭರ್ ಅಂತ ಓಡಿಸ್ಕೊತ, ಸಂದಿಗೊಂದಿ ನುಗ್ಗಿಸ್ತಾ ಇದ್ದ. ನಾನು 'ಸ್ವಲ್ಪ ನಿಧಾನ ಓಡ್ಸಪ್ಪ, ನಮಗೆ ಅರ್ಜೆಂಟ್ ಇಲ್ಲ' ಅಂದೆ. 'ನೀವೇನ್ ಹೆದರಬೇಡಿ ಮೇಡಂ, ನಾನು ಸೇಫ್ ಆಗಿ ನಿಮ್ಮನ್ನ ಕರ್ಕೊಂಡು ಹೋಗ್ತೀನಿ' ಅಂದವನಿಗೆ ನನ್ನ ಸ್ನೇಹಿತೆ, 'ಏನಪ್ಪಾ ರೇಸ್‌ಗೆ ಹೊರಟಂಗೆ ಓಡಿಸ್ತಾ ಇದ್ಯಲ್ಲ. ಮೆತ್ತಗೆ ಹೋಗು. ನಾನು ವಾಪಾಸ್ ಊರಿಗೆ ಹೋಗಬೇಕು' ಅಂದಳು. ಯಾವ ಊರು ಮೇಡಂ ಅಂತ ಕೇಳಿದ್ದಕ್ಕೆ ನಾನು ಅವರು ಅಮೇರಿಕಾದಿಂದ ಬಂದವರೆಂದು ಉತ್ತರಿಸಿದೆ. ಅದನ್ನ ಕೇಳಿ ಅವನು ಇನ್ನೂ ವೇಗ ಹೆಚ್ಚಿಸಿ, 'ಏನ್ ಮೇಡಂ, ನಿಮ್ಮ ಅಮೇರಿಕಾದಲ್ಲಿ ಈ ತರ ರೇಸ್ ಮಾಡ್ತಾರಾ?' ಅಂದ. ನಾವಂತೂ ಜೀವ ಕೈಯಲ್ಲಿ ಹಿಡಿದು, ಯಾವಾಗ ಮನೆ ಬರತ್ತೋ ಅಂತ ಕಾಯ್ತಿದ್ವಿ.

ಎಲ್ಲದ್ದಕ್ಕಿಂತ ನಂಗೆ ಆಟೋದವರ ಬಗ್ಗೆ ತುಂಬಾ ಇಷ್ಟ ಆಗೋದು 'ಆಟೋಭಾಷಿತಗಳು'. ಕೆಲವು ಆಟೋಗಳ ಮೇಲೆ ಬರೆದ ಸಾಲುಗಳು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದರೆ, ಕೆಲವು ಸ್ಫೂರ್ತಿದಾಯಕವಾಗಿರತ್ತೆ. ಪ್ರೀತಿಪ್ರೇಮದ

ಬಗೆಗಿನ ಸಾಲುಗಳು ಪಂಚ್ ಕೊಟ್ಟು ನಗು ತರಿಸುತ್ತವೆ.

'ಅಪ್ಪ ಅಮ್ಮನ ಆಶೀರ್ವಾದ' ಸಾಮಾನ್ಯವಾಗಿ ಕಾಣುವ ಆಟೊ ಹಿಂದಿನ ಸಾಲು. ಕೆಲವು ಆಟೊ ಹಿಂದೆ ತುಂಬಾ ಸೃಜನಶೀಲವಾದ ನುಡಿಗಳನ್ನು ಕಾಣಬಹುದು. ಈ ಸಾಲನ್ನೇ ನೋಡಿ, 'ಬೇಡಿ ತಿಂದರೆ ನೀಡಿದಷ್ಟು, ದುಡಿದು ತಿಂದರೆ ಬೇಕಾದಷ್ಟು' ಎಂಥ ಸತ್ಯ ಅಲ್ವ?

ಇನ್ನೊಂದು ಆಟೊ ಹಿಂದೆ, 'ಪ್ರೀತಿ ಪಾಸಾದರೆ ರೋಮ್ಯಾನ್ಸ್, ಪ್ರೀತಿ ಫೇಲ್ ಆದರೆ ನಿಮ್ಹಾನ್ಸ್' ಅಂತ ಹಾಕೊಂಡವನು ಭಗ್ನ ಪ್ರೇಮಿಯೇನೋ ಅನ್ನಿಸುತ್ತೆ.

ಕೆಲವೊಂದು ಸಾಲು, ಅವರ ಭಾವಕ್ಕೆ ತಕ್ಕಂತೆ, ವರ್ತನೆಗೆ ತಕ್ಕಂತೆ ಇರತ್ತೆ. 'ಇಫ್ ಯು ಆರ್ ಮ್ಯಾಡ್, ಐ ಆಮ್ ಯುವರ್ ಡ್ಯಾಡ್!' ಹೇಗಿದೆ ನೋಡಿ!

ಈ ನೆನಪುಗಳನ್ನೆಲ್ಲ ಹೆಕ್ಕುತ್ತಾ ನಮ್ಮ ಪುಟ್ಟನ ಆಟೊ ಸವಾರಿಗೆ ಉಬರ್ ಆಟೊ ಬುಕ್ ಮಾಡಿದೆ. ಕ್ಯಾಶ್ ಹಾಕಿದ್ರೆ ನೋಡಿ, ಉಬರ್ ಆಟೊ ಬರೋದು. ಆಟೋಗೆ ಕಾಯ್ತಾ, ಪುಟ್ಟನಿಗೆ ಗಣಿತ ಪಾಠ ಮಾಡೋ ಆಸೆ ಆಯಿತು. ಅವನಿಗೆ, 'ಕಂದ, ಈಗ ಚಂದ್ರನ ಮನೆಗೆ ಆಟೋದಲ್ಲಿ ಹೋಗಕ್ಕೆ 48 ರೂಪಾಯಿ ಕೊಡಬೇಕು. ನನ್ನ ಹತ್ರ 50 ರೂಪಾಯಿ ನೋಟಿದೆ. ಆಟೊ ಮಾಮ ನಮಗೆ ಎಷ್ಟು ಚೇಂಜ್ ವಾಪಾಸ್ ಕೊಡಬೇಕು?'. ತನ್ನ ಬೆರಳು, ತಲೆ ಎಲ್ಲ ಉಪಯೋಗಿಸಿ, ನಮ್ಮ ಪುಟ್ಟ ಎರಡನೇ ಪ್ರಯತ್ನದಲ್ಲಿ 'ಎರಡು ರೂಪಾಯಿ' ಅಂತ ಸರಿ ಉತ್ತರ ಕೊಟ್ಟ. ಅಷ್ಟೊತ್ತಿಗೆ ಆಟೊ ಬಂತು. ನಾವು ಆಟೊ ಹತ್ತಿ ಕುಳಿತೆವು. ಪುಟ್ಟನಿಗೆ, 50 ರೂಪಾಯಿ ನೋಟು ಕೊಟ್ಟು, ಆಟೊ ಇಳಿಯೋವಾಗ, ಆಟೊ ಮಾಮಂಗೆ ದುಡ್ಡು ಕೊಟ್ಟು, ಚೇಂಜ್ ಇಸ್ಕೊ, ನಿನ್ನ ಗೋಲಕಕ್ಕೆ' ಅಂದೆ. ಸೂರ್ಯನ ಮನೆ ಬಂತು. ಪುಟ್ಟ ಖುಷಿಯಲ್ಲಿ, 50 ರೂಪಾಯಿ ಕೊಟ್ಟು, ಚೇಂಜ್‌ಗೆ ಕಾದ. ಆಟೋದವ, ದುಡ್ಡು ಜೇಬಿಗೆ ಹಾಕ್ಕೊಂಡು, ಜೇಬು ತಡಕಾಡಿ, ಚೇಂಜ್ ಇಲ್ಲ ಅಂದು ಮುಂದಕ್ಕೆ ಹೊರಟ. ಪುಟ್ಟನ ಮುಖ ಸಣ್ಣದಾಗಿ, ಅಳು ಧ್ವನಿಲಿ 'ಅತ್ತೆ, ಆಟೊ ಮಾಮ ಯಾಕೆ ಚೇಂಜ್ ಕೊಡ್ಲಿಲ್ಲ' ಅಂದ. ನನಗೆ ಅವನ ದುಃಖಕ್ಕೆ ಕಾರಣ, ಲೆಕ್ಕ ತಪ್ಪಾಯಿತು ಅಂತಾನೋ, ಗೋಲಕಕ್ಕೆ ದುಡ್ಡು ಸಿಗಲ್ಲ ಅಂತಾನೋ ಗೊತ್ತಾಗ್ಲಿಲ್ಲ. 'ಅವರ ಹತ್ರ ಇರಲಿಲ್ಲವಂತೆ ಕಂದ'. ಈ ಉತ್ತರ ಅವನಿಗೆ ಸರಿ ಅನ್ನಿಸದೆ, 'ಚೇಂಜ್ ಇಟ್ಕೋಬೇಕು ತಾನೆ' ಅಂತ ಅಳಕ್ಕೆ ಶುರು ಮಾಡಿದ. ಒಂದೊಂದು ಸಲ ಮಕ್ಕಳು ರಚ್ಚೆ ಹಿಡಿದರೆ, ಸಮಾಧಾನ ಮಾಡೋದೇ ಕಷ್ಟ ಆಗತ್ತೆ. ನಾವು ಬೇರೆ, ಚಂದ್ರನ ಮನೆ ಮುಂದೇನೆ ಇದ್ವಿ. ಪುಟ್ಟನ ಮೂಡ್ ಹೇಗೆ ಚೇಂಜ್ ಮಾಡೋದು ಅಂತ ಯೋಚನೆ ಮಾಡ್ತಿದ್ದಾಗ, ಒಂದು ಐಡಿಯಾ ಹೊಳೆಯಿತು. ಹಿಂದೆ, ಅವನು ಐಸ್ ಪೈಸ್ ಆಡೋವಾಗ ಇವನಿಗಿಂತ ತುಂಬಾ ಚಿಕ್ಕ ಹುಡುಗಿ, ಆಟಕ್ಕೆ ಬಂದು, ಅವಳನ್ನ ಔಟ್ ಮಾಡಿದ್ದ. ಆ ಮಗು ಆಟದ ನಿಯಮ ಅರ್ಥವಾಗದಷ್ಟು ಚಿಕ್ಕದಿತ್ತು. ಆಗ, 'ಆಟಕ್ಕೆ ಉಂಟು ಲೆಕ್ಕಕ್ಕೆ ಇಲ್ಲ' ಕಾನ್ಸೆಪ್ಟ್ ವರ್ಕ್ ಆಗಿತ್ತು. ಅದನ್ನೇ ಉಪಯೋಗಿಸಿ ನೋಡೋಣ ಅಂತ, 'ಒಂದೊಂದು ಸಲ ಹೀಗಾಗಿ ಬಿಡತ್ತೆ ಕಂದ. ನೀನು ಐಸ್ ಪೈಸ್ ಆಡೋವಾಗ, ಹರ್ಷಿತ ಆಟಕ್ಕೆ ಬಂದ್ರೆ ಯಾಕೆ ಅವಳನ್ನ ಔಟ್ ಮಾಡಲ್ಲ?' ಅಂದೆ.

'ಅತ್ತೆ, ನಿನಗೆ ಅಷ್ಟೂ ಗೊತ್ತಿಲ್ವ. ಅವಳು ಆಟಕ್ಕುಂಟು ಲೆಕ್ಕಕ್ಕಿಲ್ಲ'.

'ಹಾಗೆ ಕಂದ, ಇದು, ಆಟೋಕ್ಕುಂಟು ಲೆಕ್ಕಕ್ಕಿಲ್ಲ'

'ಹೆ ಹೆ, ಚೆನ್ನಾಗಿದೆ.. ಅಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲ, ಇಲ್ಲಿ ಆಟೋಕ್ಕುಂಟು ಲೆಕ್ಕಕ್ಕಿಲ್ಲ..' ನಗ್ತಾ ಚೇಂಜ್, ಗೋಲಕ ಎಲ್ಲ ಮರೆತು ಚಂದ್ರನ ಮನೆ ಒಳಗೆ ಓಡಿದ! ■

# ಕೇಶ – ಕ್ಲೇಷ

। ಕೆ. ರಮೇಶ್

ನನ್ನ ಕೇಶ ಕ್ಲೇಷ ಪ್ರಾರಂಭವಾಗಿದ್ದು ನಾನು 6ನೇ ವಯಸ್ಸಿನಲ್ಲಿದ್ದಾಗ. ನಾವಾಗ ಕೊಡಗಿನ ಸಣ್ಣ ಊರಲ್ಲಿ ವಾಸವಿದ್ದೆವು. ನಮ್ಮ ತಂದೆ 2 ತಿಂಗಳಿಗೊಮ್ಮೆ ನನ್ನ ಸಹೋದರರನ್ನು ಕೂಡಿಸಿ ಕೇಶ ಮುಂಡನಕ್ಕೆ ಕರೆದೊಯ್ಯುತ್ತಿದ್ದರು. ನಮಗಾವ ಸ್ವಾತಂತ್ರ್ಯವೂ ಇರಲಿಲ್ಲ. ನಾಪಿತನಿಗೆ ಸ್ಪಷ್ಟವಾಗಿ ಕೇವಲ ಅರ್ಧ ಇಂಚು ಬಿಟ್ಟು ಪೂರ ಕೇಶ ಮರ್ದನಕ್ಕೆ ಸೂಚನೆ ಕೊಡುತ್ತಿದ್ದರು. ನಾವಂತೂ ಗೋಳೋ ಎಂದು ಅಳುತ್ತಿದ್ದರೂ ನಾಪಿತನ ಕತ್ತರಿಗೆ ತಲೆಯೊಡ್ಡುವುದು ಅನಿವಾರ್ಯವಾಗಿತ್ತು. ಈಗ ಅರವತ್ತು ವರ್ಷಗಳಾದ ಮೇಲೆ ಅದೇ ಆರು ವಯಸ್ಸಿನ ಹುಡುಗ ಅಪ್ಪನ ಜೊತೆ ನಾಪಿತನ ಅಂಗಡಿಗೆ ಕಾಲಿರಿಸಿದ ಕೂಡಲೇ ಬಾಲಕನೇ ನಾಪಿತನಿಗೆ ಸೂಚನೆ ಕೊಡುತ್ತಾನೆ. ನೋಡಿ ನನಗೆ ಧೋನಿ ಅಥವಾ ವಿರಾಟ್ ಕೊಹ್ಲಿಯ ಸ್ಟೈಲ್‌ನಲ್ಲಿ ಕೇಶವಿನ್ಯಾಸ ಮಾಡಿ ಎಂದು. ಬಾಲಕನ ತಂದೆ ಅಸಹಾಯಕನಾಗಿ ನೋಡುತ್ತಿರುತ್ತಾನೆ ಅಷ್ಟೆ. ಈ ಬದಲಾವಣೆ ನನ್ನನ್ನು ಮೂಕನಾಗಿಸುತ್ತದೆ. ಕಾಲಾಯ ತಸ್ಮೈ ನಮಃ.

ಈ ಸಂದರ್ಭದಲ್ಲಿ ಓರ್ವ ಸೈನ್ಯದ ಬ್ರಿಗೇಡಿಯರ್ ರವರ ಅಳಲು ನಿಜಕ್ಕೂ ಖೇದಕರ. ಅವರ ಪ್ರಕಾರ ಅವರ ಕೆಳಗಿನ ಇಪ್ಪತ್ತು ಸಾವಿರ ಸೈನಿಕರ ಹೇರ್ ಸ್ಟೈಲ್‌ನ್ನು ಒಂದೇ ದಿನದಲ್ಲಿ ಬದಲಿಸಬಲ್ಲರು. ಆದರೆ ಅವರ ಮಗನ ಹೇರ್ ಸ್ಟೈಲ್‌ನ ಬಗ್ಗೆ ಮಾತನಾಡುವ ಹಕ್ಕು ತನಗಿಲ್ಲ ಎನ್ನುತ್ತಾರೆ. ಅದರ ಬಗ್ಗೆ ಮಾತು ಪ್ರಾರಂಭವಾದರೆ ಅದು ಭಾರತ–ಪಾಕ್ ನಂತಾಗುತ್ತದೆ ಎನ್ನುತ್ತಾರೆ. ಈ ಪರಿಸ್ಥಿತಿ ಪ್ರಾಯಶಃ ಎಲ್ಲಾ ಅಪ್ಪಂದಿರಲ್ಲೂ ಕಾಣಬರುತ್ತದೆ ಅಲ್ಲವೇ? ಒಂದು ವಕ್ರ ತುಂಡೋಕ್ತಿಯನ್ನು ಇಲ್ಲಿ ನೆನಪಿಸಬಹುದು. ನಿಮ್ಮ ಮಗ ಹೇರ್ ಸ್ಟೈಲ್ ವಿಷಯದಲ್ಲಿ ನಿಮ್ಮ ಮಾತು ಇನ್ನೂ ಕೇಳುತ್ತಾನೆ ಅಂದರೆ ಅವನಿನ್ನೂ ಬಹಳ ಚಿಕ್ಕವನು ಎಂದೇ ಅರ್ಥ.

ಇವಿಷ್ಟೂ ತಲೆಯ ಕ್ಲೇಶದ ಕ್ಲೇಷಗಳಾದರೆ ಗಡ್ಡದ ಬಗ್ಗೆ ಇಷ್ಟೇ ಕ್ಲೇಷಗಳಿವೆ. ನೀವೆಲ್ಲಾ ಕೇಳಿರುವಂತೆ "ನೋ ಶೇವ್ ನವೆಂಬರ್" ಎಂಬ ಒಂದು ಪದ್ಧತಿ. ನವೆಂಬರ್ ಪೂರ ಶೇವ್ ಮಾಡದೆ ಗಡ್ಡ ಬೆಳೆಸಿ ಉಳಿಸಿದ ಹಣವನ್ನು ಕ್ಯಾನ್ಸರ್ ಪೀಡಿತರಿಗೆ, ಕ್ಯಾನ್ಸರ್ ಬಗ್ಗೆ ಸಂಶೋಧನೆ ಮಾಡುವ ಸಂಸ್ಥೆಗಳಿಗೆ ದೇಣಿಗೆಯಾಗಿ ನೀಡುವ ಪದ್ಧತಿ ವಿಶ್ವದಾದ್ಯಂತ ಆಚರಣೆಯಲ್ಲಿದೆ. ಇದೊಂದು ಒಳ್ಳೆಯ ಸುದ್ದಿ.

ಈಗಂತೂ ಗಡ್ಡ ಬಿಡುವುದು ಒಂದು ಶೋಕಿಯೋ ಅಥವಾ ಸೋಮಾರಿತನದ ಕುರುಹೋ ತಿಳಿಯದಾಗಿದೆ. ಹಿಂದೆ ಗಡ್ಡ ಬಿಟ್ಟರೆ ನಿನಗೆ ಹುಷಾರಿಲ್ಲವಾ ಎಂದು ಕೇಳುತ್ತಿದ್ದರು. ಈಗ ಎಲ್ಲರಿಗೂ ಕೇಳಬೇಕಾದ ಪರಿಸ್ಥಿತಿ ಬಂದಿದೆ. ಹಿಂದೊಮ್ಮೆ ಗಡ್ಡ ಬಿಟ್ಟವ ಪ್ರೀತಿಯಲ್ಲಿ ಸೋತವ ಎಂದರ್ಥ. ಸಿನಿಮಾಗಳಲ್ಲೂ ಇದನ್ನು ಪ್ರದರ್ಶಿಸುತ್ತಿದ್ದಂತೆ ನೆನಪು. ಗಡ್ಡ ಬಿಟ್ಟವರೆಲ್ಲಾ ಸನ್ಯಾಸಿಗಳು ಎಂದು ಬಿಂಬಿಸುತ್ತ ಮಾತನಾಡಿಸುವ ಕಾಲವಿತ್ತು. ದಕ್ಷಿಣಕನ್ನಡ, ಉಡುಪಿಯ ಕಡೆ ಇವತ್ತಿಗೂ ಗಡ್ಡ ಬಿಟ್ಟರೆ ನಿಮ್ಮ ಮನೆಯಾಕೆ ಗರ್ಭಿಣಿಯಾ? ಎಂದು ಕೇಳುವುದು ವಾಡಿಕೆ. ಗಡ್ಡ ಬಿಡುವ ಬಗ್ಗೆ ಮನೆಯಲ್ಲಿಯ ಸಾಮರಸ್ಯದ ಕೊರತೆ ಉಂಟಾಗುವುದೂ ಇದೆ. ಮನೆಯಾಕೆ ಅಥವಾ ತಾಯಿಗೆ ಗಡ್ಡದ ಬಗ್ಗೆ ಅಂಥಹ ಮೋಹವಿಲ್ಲ.

ಈಗಿನ ಯುವಕರಂತೂ ತಲೆಕೂದಲು, ಗಡ್ಡದ ಬಗ್ಗೆ ಬಹಳ ತಲೆ ಕೆಡಿಸಿಕೊಳ್ಳುತ್ತಾರೆ. ಕೇಶದ ಬಗ್ಗೆ ಕೆಲವು ಆಸಕ್ತಿಕರವಾದ ಸಂಗತಿಗಳಿರುವುದು ವಿಶೇಷ. ಪ್ರತಿ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆಯೆಂಬುದು ಸರ್ವವಿದಿತ. ಹಾಗೆಯೇ ಪ್ರತಿ ಸುಂದರ ಮಹಿಳೆಯ ಹಿಂದೆ ಓರ್ವ ಹೇರ್ ಡ್ರೆಸರ್ ಇರುತ್ತಾಳೆ ಅಲ್ಲವೇ? ನಮ್ಮ ಕೂದಲು ಎದ್ದು ನಿಂತಿದೆಯೆಂದರೆ ಅದನ್ನು ಯಾರಾದರೂ ಸುಲಭವಾಗಿ ಕತ್ತರಿಸಬಹುದು. ಹಾಗೆ ಕೂದಲಿಲ್ಲದವರು ಯಾವಾಗಲೂ ತಲೆ ನೇವರಿಸಿಕೊಳ್ಳುತ್ತಿರುತ್ತಾರೆ. ಸಂಸಾರದಲ್ಲಿ ತಂದೆ ಮಗನಿಗೆ ಭಿನ್ನಾಭಿಪ್ರಾಯ ಬರುವುದು ಕೂದಲು ಕತ್ತರಿಸುವ ವಿಷಯದಲ್ಲೇ. ನಮ್ಮ ಸೌಂದರ್ಯ ನಿರ್ಧಾರವಾಗುವುದು ನಮ್ಮ ಕಡೆಯ ಕೇರ್ ಕಟ್‌ನಿಂದ ಮಾತ್ರವೇ. ಮಗ ತಂದೆಯ ಮಾತನ್ನು ಎಲ್ಲಾ ವಿಷಯದಲ್ಲಿ ಒಪ್ಪಿದರೂ ಕೂದಲಿನ ವಿನ್ಯಾಸದ ಬಗ್ಗೆ ಒಮ್ಮತವಿರುವುದಿಲ್ಲ. ಈಗಿನ ಯುವಕರಲ್ಲಿ ಕೂದಲನ್ನು ಬಾಚಿಕೊಳ್ಳದಿರುವುದೇ ಒಂದು ಸ್ಟೈಲ್ ಆಗಿ ಪರಿಣಮಿಸಿದೆ. ಯುವಕರಂತೂ ಜಡೆ ಕಟ್ಟುತ್ತಾರೆ. ಕ್ಲಿಪ್ ಅಳವಡಿಸಿಕೊಳ್ಳುತ್ತಾರೆ. ಇವೆಲ್ಲಾ ವಿಚಿತ್ರ ಆದರೂ ನಿಜ. ವಿಗ್‌ನಿಂದ ಒಂದು ಉಪಯೋಗವಿದೆ. ಅದೆಂದರೆ ಹೇರ್‌ಸ್ಟೈಲ್ ಬದಲಾಗುವುದಿಲ್ಲ, ಒಂದೇ ತೆರನಾಗಿರುತ್ತದೆ. ಕನ್ನಡಿ ಮುಂದೆ ನಿಂತವರು ಕೂದಲನ್ನು ಸರಿಪಡಿಸದೆ ಇರುವುದಿಲ್ಲ. ಕೂದಲು ಕತ್ತರಿಸುವ ವಿಷಯದಲ್ಲಿ ಮಗನಿಗೂ ತಂದೆಗೂ ಇರುವ ವ್ಯತ್ಯಾಸವೆಂದರೆ ಮೊದಲ ಬಾರಿಗೆ ಕೂದಲು ಕತ್ತರಿಸಿದಾಗ ಮಗು ಅಳುತ್ತದೆ. ಇದೇ ಬೇಸರ ವಯಸ್ಸಾದವರ ಅಪ್ಪನಿಗೂ ಆಗುತ್ತದೆ. ನೀವು ಯಾರನ್ನಾದರೂ ಬದಲಿಸಬಹುದು, ಆದರೆ ಅವರ ಕೇಶ ವಿನ್ಯಾಸವನ್ನು ಬದಲಿಸಲಾರಿರಿ. ಪ್ರಯತ್ನಿಸಿನೋಡಿ. ಇನ್ನೊಂದು ವಿಶೇಷ ಕೇಶವಿರುವವರೂ, ಇಲ್ಲದಿರುವವರು ಕೇಶದ ಬಗ್ಗೆಯೇ ಚಿಂತಿಸುತ್ತಿರುತ್ತಾರೆ ಅಲ್ಲವೇ? ಕೂದಲು ಹಾಗೂ ಜಲಕ್ಕೆ ಬಹಳ ಸಾಮ್ಯತೆ ಇರುವಂತೆ ತೋರುತ್ತದೆ. ಇವೆರಡೂ ಸಮೃದ್ಧವಾಗಿದ್ದಾಗ ಯಾರಿಗೂ ಅದರ ಪ್ರಾಮುಖ್ಯತೆಯು ಅರಿವು ಇರದು. ಇಲ್ಲದಿದ್ದಾಗ ಪೇಚಾಟ, ಪರದಾಟ ಪ್ರಾರಂಭವಾಗುವುದು ಅಲ್ಲವೇ? ಕೊನೆಯದಾಗಿ ಡಕಾಯಿತರು ತಮ್ಮ ಕೇಶ ವಿನ್ಯಾಸದಿಂದ ಪೋಲಿಸರು ಕಂಡುಹಿಡಿಯುತ್ತಾರೆಂದು ಮತ್ತು ಸಿ.ಸಿ. ಕ್ಯಾಮೆರಾವನ್ನು ವಂಚಿಸಲು ತಲೆಗೆ ಪೂರಾ ಟೊಪ್ಪಿಗೆ ಧರಿಸಿರುತ್ತಾರೆ. ಇದು ನಾವು ಸಾಮಾನ್ಯವಾಗಿ ನೋಡುವ ಒಂದು ದೃಶ್ಯ.

ಇಷ್ಟೆಲ್ಲ ಆದಮೇಲೆ ಕೇಶದ ಬಗ್ಗೆ ಒಂದೆರಡು ಮಾತು. ತಿರುಪತಿಯ ಕೇಶದ ವಹಿವಾಟು ವಾರ್ಷಿಕ ಹಲವಾರು ಕೋಟಿಗಳು. ಇದು ಭಕ್ತರು ದೇವರಿಗೆ ಹರಕೆಯ ರೂಪದಲ್ಲಿ ಅರ್ಪಿಸಿದ ಕೇಶದ ವಿಲೇವಾರಿಯ ಆದಾಯ. ಹಿಂದೆ ಬರೇ ಪುರುಷರಿಗೆ ಮಾತ್ರ ಕೇಶವಿನ್ಯಾಸದ ವಿವರಗಳಿದ್ದುವು. ಈಗ ಇದಕ್ಕೂ ಮೀರಿ ಮಹಿಳೆಯರಿಗೆ ಅಲಂಕಾರ ವರ್ಧಕ ಪಾರ್ಲರ್‌ಗಳು ಸಾಕಷ್ಟಿವೆ. ಇವುಗಳ ವ್ಯವಹಾರ ಪ್ರಪಂಚದಾದ್ಯಂತ ಸಾವಿರಾರು ಕೋಟಿ ಎಂದರೆ ಆಶ್ಚರ್ಯವಲ್ಲವೇ?

ಬಹಳ ಹಿಂದೆ ಮಾನವ ದೇಹದಿಂದ ಯಾವುದಾದರೂ ಕಾರಣಕ್ಕೆ ರಕ್ತವನ್ನು ತೆಗೆಯಬೇಕಾದರೆ ಅದನ್ನು 'ಬಾರ್ಬರ್ ಸರ್ಜನ್' ಎಂಬುವವರು ಮಾಡುತ್ತಿದ್ದರು. ಇದು 'ಅವಚರಣ ರಕ್ತವಿಮೋಚನ ಚಿಕಿತ್ಸೆ' ಎಂದೇ ಪ್ರಸಿದ್ಧವಾಗಿತ್ತು. ಇವರು ತಮ್ಮ ಅಂಗಡಿಯ ಮುಂದೆ ಒಂದು ಕಂಬವನ್ನು ನೆಟ್ಟು ಅದಕ್ಕೆ ಕೆಂಪು ಮತ್ತು ಬಿಳಿಯ ಬಣ್ಣ ಬಳಿಯುತ್ತಿದ್ದರು. ಕೆಂಪು ಬಣ್ಣ ರಕ್ತವನ್ನೂ, ಬಿಳಿಯ ಬಣ್ಣ ಬ್ಯಾಂಡೇಜಿನ

ಬಿಳುಪನ್ನೂ ಸೂಚಿಸುತ್ತಿದ್ದವು. ರೋಗಿಯನ್ನು ಈ ಕಂಬಕ್ಕೆ ಕಟ್ಟಿಹಾಕಿ 'ಬಾರ್ಬರ್ ಸರ್ಜನ್' ತಮ್ಮ 'ರಕ್ತವಿಮೋಚನ ಚಿಕಿತ್ಸೆ' ಪ್ರಾರಂಭಿಸುತ್ತಾರೆ. ಇದು ಆ ಕಾಲದಲ್ಲಿ ಬಹಳ ಜನಪ್ರಿಯ ಚಿಕಿತ್ಸೆಯಾಗಿತ್ತು. ಕ್ರಮೇಣ ಶಸ್ತ್ರಚಿಕಿತ್ಸೆಯ ಮಾರ್ಪಾಡಾದಂತೆ ಈ ಚಿಕಿತ್ಸೆ ನಿಧಾನವಾಗಿ ಕಣ್ಮರೆಯಾಯಿತು. ನಾಪಿತರೂ ಆ ಕಾಲದಲ್ಲಿ ಬಹಳ ಪ್ರಸಿದ್ಧರಾಗಿದ್ದರು ಎನ್ನಲು ಈ ಸಂದೇಶ.

ಒಂದು ವಕ್ರತುಂಡೋಕ್ತಿಯಿಂದ ಈ ಲೇಖನವನ್ನು ಮುಗಿಸೋಣವೆ?
ಗಡ್ಡವನ್ನು ಬೋಳಿಸುವಂತೆ ಮಾಡಿ ಮುದ್ದಾಗಿ ಕಾಣುವಂತೆ
ಮಾಡುವ ತಾಖತ್ತು ಇರುವುದೂ ಅವಳಿಗೇ. ಗಡ್ಡವನ್ನು
ಬಿಡುವಂತೆ ಮಾಡಿ ಸನ್ಯಾಸಿಯ ಹಾಗೆ ಕಾಣುವಂತೆ
ಮಾಡುವ ತಾಖತ್ತು ಇರುವುದೂ ಅವಳಿಗೇ!

ಕೇಶದ ಕ್ಲೇಶ ಸಾಕೆನಿಸುತ್ತದೆ. ಕೇಶದ ಬಗ್ಗೆ ಕ್ಲೇಶ ಬೇಡ ನೀವೇನಂತೀರಿ?

■

---

**ಲಕ್ಷ್ಮಣ್ ಕೊರವಂಜಿ**

**ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.**

**ಅವುಗಳಲ್ಲಿ ಇದೂ ಒಂದು – ನಿಮಗಾಗಿ.**



"ಯಾಕೋ, ಮಾತ್ಮಾತಿಗೂ ಸುಡುಗಾಡು, ಸುಡುಗಾಡು ಅಂತಿಯಂತೆ – ಸುಡುಗಾಡು"

# ಹಿರಿಯರ ಕೆಲ ಸ್ವಾರಸ್ಯ ಪ್ರಸಂಗಗಳು

**। ಎ. ಆರ್. ಹರಿಪ್ರಸಾದ್**

ಕೆಲವು ವ್ಯಕ್ತಿಗಳ ಜೀವನದಲ್ಲಿ ಅವರು ಮಹತ್ತರವದ ಸಾಧನೆಮಾಡಿ ಹೆಸರು ಗಳಿಸಿಕೊಂಡಿರುತ್ತಾರೆ. ಅವರ ಜೀವನದಲ್ಲಿ ಕೆಲವು ಸ್ವಾರಸ್ಯಪ್ರಸಂಗಗಳು ನಡೆದಿರುತ್ತವೆ. ಉದಾಹರಣೆಗೆ ಬೇಂದ್ರೆಯವರ ಚಪ್ಪಲಿ ಹೊಲಿಯುವವನ ಪ್ರಸಂಗ.

ಈಗ ನಾನ್ನು ಹೇಳಲು ಹೊರಟಿರುವುದು ನಮ್ಮ ದೊಡ್ಡಪ್ಪನವರಾದ ಬಸವಾನಿರಾಮಶರ್ಮರ ಬಗ್ಗೆ. ಅವರ ಬಗ್ಗೆ ನಮ್ಮ ಓದುಗರ ಬಳಗದಲ್ಲಿ ಕೆಲವರಾದರೂ ಕೇಳಿರಬಹುದು. ಪ್ರಜಾವಾಣಿಯಲ್ಲಿ 'ಬದುಕಿನ ಬೆನ್ನುಲುಬು ಬೇಸಾಯ' ಎಂಬ ಅಂಕಣ ಲೇಖನವನ್ನು ಬರೆಯುತ್ತಿದ್ದರು.

ಬಸವಾನಿರಾಮಶರ್ಮರು ವೈದಿಕಮನೆತನದಲ್ಲಿ ಬ್ರಹ್ಮೀಭೂತ ವೆಂಕಟರಾಮಶರ್ಮ ಮತ್ತು ಕಾವೇರಮ್ಮ ದಂಪತಿಗಳ ಮರಿಮಗ ರಾಮಶರ್ಮರ ಅಜ್ಜ ಮಂಜುನಾಥಭಟ್ಟರ ಸುಪುತ್ರರಾಗಿ 1913ರಲ್ಲಿ ಜನಿಸಿದರು. ತಂದೆ ವಿಶ್ವನಾಥಭಟ್ಟರು ನಿತ್ಯವೂ ಏಕಾದಶವಾರು ಸೋಮೇಶ್ವರನಿಗೆ ರುದ್ರಾಭಿಷೇಕ ಮಾಡುವಾಗ ಅವರ ಕಂಚಿನ ಕಂಠದ ಮಂತ್ರ ಪಠಣೆಯನ್ನು ಕೇಳಲು ಆ ಊರಿನ ಜನರಲ್ಲದೇ ಹೊರಊರಿನವರೂ ಸಹ ಕಾತುರತೆಯಿಂದ ಕೇಳುತ್ತಿದ್ದರಂತೆ.

ತಾಯಿ ಲಿಂಗದಹಳ್ಳಿಯ ಪುರೋಹಿತರಾದ ವೆಂಕಟರಮಣಾವಧಾನಿಗಳ ಅಕ್ಕ ನಾಗಮ್ಮ. ರಾಮಶರ್ಮರು ಕಲಿತಿದ್ದೂ ಸನಾತನ ವಿದ್ಯೆಯನ್ನೇ; ಅದರೊಂದಿಗೆ ಓದು ಮುಗಿಯುವಹೊತ್ತಿಗೆ ಮದುವೆಯಾದದ್ದೂ ಮಾವ ವೆಂಕಟರಮಣಾವಧಾನಿಗಳ ಮಗಳಾದ ಸಾವಿತ್ರಮ್ಮನವರನ್ನೇ. ಶೃಂಗೇರಿ, ಆನಂದವನ, ಧಾರವಾಡ, ಬೇಲೂರುಗಳಲ್ಲದೇ ದೂರದ ಮಾಯವರದಲ್ಲಿಯೂ ಕೂಡ ಸನಾತನವಿದ್ಯೆಯನ್ನು ಕಲಿತುದ್ದಲ್ಲದೇ ಯಜುರ್ವೇದ, ಘನಾಂತ, ಸಂಸ್ಕೃತ, ವೇದಭಾಷ್ಯ, ಸಂಸ್ಕೃತ, ವೇದಾಂತಶಾಸ್ತ್ರಗಳನ್ನು ಅಧ್ಯಯನ ಮಾಡಿ ಅವುಗಳನ್ನು ಕಂಠಪಾಠಮಾಡಿಕೊಂಡರು. ಇವುಗಳಲ್ಲದೇ ತಿರುವಣ್ಣಾಮಲೈಗೆ ಹೋಗಿ ರಮಣ ಮಹರ್ಷಿಗಳಿಂದ ಅಧ್ಯಾತ್ಮವಿದ್ಯೆಯ ಉಪದೇಶವನ್ನು, ಕಂಚಿಕಾಮಕೋಟಿ ಪೀಠಾಧೀಶರಾಗಿದ್ದ ಶ್ರೀಶ್ರೀ ಚಂದ್ರಶೇಖರೇಂದ್ರ ಸ್ವಾಮೀಜಿಗಳಿಂದ ವೇದಾಂತರಹಸ್ಯದ ಉಪದೇಶವನ್ನೂ ವೇದಾಂತಪ್ರಚಾರದ ಆದೇಶವನ್ನೂ ಪಡೆದರು. ಅಲ್ಲದೇ ಶೃಂಗೇರಿ ಪೀಠದ ಮೂವರು ಜಗದ್ಗುರುಗಳ ಅನುಗ್ರಹಕ್ಕೆ ಪಾತ್ರರಾದರು. ಸಂಸ್ಕೃತ, ಹಿಂದಿ, ಇಂಗ್ಲೀಷ್, ತಮಿಳು ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡುವ ಪರಿಣಿತಿಯನ್ನು ಪಡೆದವರಾಗಿದ್ದರು. ಮನೆಯಲ್ಲಿ ತೋಟ ಗದ್ದೆಗಳಿದ್ದು ಕೃಷಿಕರಾಗಿಯೂ ಇದ್ದರು.

ಶೃಂಗೇರಿಯ ಗುರುಗಳು ಮುಖ್ಯಸಮಾರಂಭಗಳಲ್ಲಿ ರಾಮಶರ್ಮರಿಗೆ ಕರೆಯನ್ನು ಕಳುಹಿಸುತ್ತಿದ್ದು ವಿಶೇಷವಾಗಿತ್ತು. ಆ ಸಮಯದಲ್ಲಿ ಒಂದು ಅವಿಸ್ಮರಣೀಯ ಘಟನೆ ನಡೆಯಿತು. ಒಂದು ದಿನ ಗುರುಗಳ ಸಮೀಪದಲ್ಲಿದ್ದು ಬಹಳ ಹೊತ್ತಿನಿಂದ ಆಧ್ಯಾತ್ಮವಿಚಾರಗಳನ್ನು ಚರ್ಚಿಸಿ ಸಂಜೆ ಬಸವಾನಿಗೆ ತೆರಳಬೇಕೆಂದು ನರಸಿಂಹವನದಿಂದ ದೋಣಿ ಹತ್ತಿ ಇನ್ನೊಂದು ದಡಕ್ಕೆ ಪ್ರಯಾಣಿಸುವಾಗ ಪುನಃ ಗುರುಗಳು ಅವರಿಗೆ ಕರೆನೀಡಿದರು ರಾಮಶರ್ಮರು ದೋಣಿಯವನಿಗೆ ಪುನಃ

ನರಸಿಂಹವನಕ್ಕೆ ತೆರಳುವಂತೆ ಹೇಳಿದರು ಅವರೊಂದಿಗೆ ಆಡಳಿತಾಧಿಕಾರಿಯಾಗಿದ್ದ ಚಿ.ನ. ವಿಶ್ವನಾಥಶಾಸ್ತ್ರಿಗಳೂ ಇದ್ದರು ಆದರೆ ಗುರುಗಳು ರಾಮಶರ್ಮರನ್ನು ಕರೆದುದರಿಂದ ಅವರೊಬ್ಬರೇ ಗುರುಗಳ ಸಮೀಪಕ್ಕೆ ಹೋಗಿ ನಮಸ್ಕರಿಸಿದರು. ಅಷ್ಟುಹೊತ್ತಿಗೆ ಒಂದು ದುರಂತದ ವಾರ್ತೆ ಅವರಿಗೆ ತಲುಪಿತು ರಾಮಶರ್ಮರು ಹೋಗಬೇಕಾಗಿದ್ದ ದೋಣಿ ನೀರಿನಲ್ಲಿ ಮುಳುಗಿ ಅದಲ್ಲಿದ್ದ ವಿಶ್ವನಾಥಶಾಸ್ತ್ರಿಗಳು ಹಾಗೂ ಇನ್ನಿಬ್ಬರು ನೀರುಪಾಲಾಗಿದ್ದರು. ರಾಮಶರ್ಮರಿಗೆ ಒಂದುಕ್ಷಣ ಸಾವಿನದರ್ಶನ ಪಡೆದು ಗೆದ್ದುಬಂದಂತಾಯಿತು. ತಮ್ಮಪತ್ನಿ ಸದಾ ಲಲಿತಾಸಹಸ್ರನಾಮ ಪಠಿಸುತ್ತಿದ್ದರ ಫಲ ಹಾಗೂ ಗುರುಗಳ ದಯೆಯಿಂದ ಬದುಕಿಬಂದೆ ಎಂದು ಹೇಳಿಕೊಂಡರು.

ಇವರು  ತಮಿಳು, ಕನ್ನಡ, ಹಿಂದಿ ಸಂಸ್ಕೃತ ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡುತ್ತಿದ್ದರು. ಸಭೆಗಳಲ್ಲಿ ಸಾಮಾನ್ಯವಾಗಿ ಇವರು ಭಾಷಣಕ್ಕೆ ನಿಂತರು ಎಂದರೆ ಕೆಲ ಕುಹಕಿ ಹುಡುಗರು ಇವರು ತಮ್ಮ ಗಂಟಲು ಸರಿಮಾಡಿಕೊಳ್ಳುವ ಧ್ವನಿಯನ್ನು ಅನುಕರಿಸಿ ಶಬ್ದ ಮಾಡುತ್ತಿದ್ದರು. ಆದರೆ ಶರ್ಮರು ಇದಕ್ಕೆ ಸೊಪ್ಪು ಹಾಕದೆ “ಇಂದು ಮಹಾ ಸುದಿನ. ಬಸವಾನಿಯ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡಬೇಕಾದ ದಿನ”ಎಂದು ತಮ್ಮ ಭಾಷಣವನ್ನು ಪ್ರಾರಂಭಿಸುತ್ತಿದ್ದರು.

“ವ್ಯಾಖ್ಯಾನಕೇಸರಿ” ಎಂಬ ಬಿರುದನ್ನು ಪಡೆದಿದ್ದು, ಇವರ ವಿದ್ವತ್ತಿನ ಬಗ್ಗೆ ಶೃಂಗೇರಿಯ ಮಹಾಗುರುಗಳಿಗೆ ಅರಿವಿದ್ದು ಒಂದು ವಿದ್ವತ್‌ಸಭೆಗೆ ಇವರನ್ನು ಆಹ್ವಾನಿಸಿದ್ದರು. ಕಾರಣಾಂತರಗಳಿಂದ ಸಭೆಗೆ ಇವರು ಬರುವುದು ಸ್ವಲ್ಪ ತಡವಾಯಿತು. ಇವರ ಆಗಮನವಾದದ್ದನ್ನು ಕಂಡ ಗುರುಗಳು “ಈಗ ಶರ್ಮರು ಮಾತನಾಡುತ್ತಾರೆ” ಎಂದು ಅಪ್ಪಣೆ ಕೊಡಿಸಿದರು. ಶರ್ಮರಿಗೆ ಅಲ್ಲಿ ನಡೆಯುತಿದ್ದ ಚರ್ಚೆಯ ವಿಷಯದ ಬಗ್ಗೆ ತಿಳಿದಿರಲಿಲ್ಲ. ಪಕ್ಕದವರನ್ನು ಕೇಳಿ ತಿಳಿದುಕೊಂಡು ಆ ದಿನದ ವಿಷಯವಾದ ಬ್ರಾಹ್ಮಣರ ಸ್ವತ್ತಾದ ವೇದವನ್ನು ಉಳಿಸಿ ಬೆಳೆಸುವ ಬಗ್ಗೆ ಒಂದು ಘಂಟೆಕಾಲ ನಿರರ್ಗಳವಾಗಿ ಮಾತನಾಡಿ ಗುರುಗಳ ಪ್ರಶಂಸೆಯನ್ನು ಗಳಿಸಿಕೊಂಡರು. ಆ ಕೂಡಲೇ ಗುರುಗಳು ಕೀಟಲೆಗಾಗಿ ಈಗ ರಾಮಶರ್ಮರು  ಪ್ರಸ್ತುತ  ಉದ್ಯೋಗಗಳಿಗೆ ಅಗತ್ಯವಿರುವ ಇಂಗ್ಲಿಷ್ ಭಾಷೆ ಅತೀ ಮುಖ್ಯ ಎಂಬುದರ ಬಗ್ಗೆ ಮಾತನಾಡುತ್ತಾರೆ ಎಂದು ಹೇಳಿದಾಗ ಅಷ್ಟೇ ವಿದ್ವತ್‌ಪೂರ್ಣವಾಗಿ ಇಂಗ್ಲೀಷ್ ಭಾಷೆಯ ಅಗತ್ಯತೆಯನ್ನು ಅನುಕೂಲತೆಯ ಬಗ್ಗೆ ಒಂದುಗಂಟೆ ಕಾಲ ಸಭಿಕರು ಅಚ್ಚರಿಪಡುವಂತೆ ಮಾತನಾಡಿದರು.

ಇವರು ಸ್ವಾತಂತ್ರಹೋರಾಟಗಾರರಾಗಿದ್ದು ಸಾಕಷ್ಟು ಕೆಲಸವನ್ನು ಮಲೆನಾಡಿನ ಭಾಗದಲ್ಲಿ ನಿರ್ವಹಿಸಿದರು. ಕಾಗೋಡು ಸತ್ಯಾಗ್ರಹದಲ್ಲೂ ಸಹ ಸಕ್ರಿಯವಾಗಿ ಭಾಗವಹಿಸಿದ್ದರು. ಶಾಂತವೇರಿ ಗೋಪಾಲಗೌಡರ ಗೆಳೆಯರಾಗಿದ್ದು  ಅವರೊಡನೆ ಉತ್ತಮ ಸಂಪರ್ಕವನ್ನು ಹೊಂದಿದ್ದರು.

ಇವರಿಗೆ ಇಸ್ಪೀಟಾಡುವ ಹುಚ್ಚು ಕೆಲಕಾಲ ಇತ್ತು. ತಮ್ಮೂರಿನಲ್ಲಿ ಇದ್ದ ಕ್ಲಬ್ಬಿಗೆ ಹೋಗುತ್ತಿದ್ದರು. ಒಮ್ಮೆ ಮಾತ್ರ ಮೂರುಪ್ಯಾಕಿನಲ್ಲಿರುವ ಅಷ್ಟೂ ಎಲೆಗಳನ್ನು ಅರ್ಧಮಾಡಿ ತಲೆಕೆಳಗು ಮಾಡಿ  ಹಂಚುತ್ತಿದ್ದರು. ಇದಕ್ಕೆ ಅಲ್ಲಿ ‘ಶರ್ಮರ ಕಲಸಿಗೆ’ ಎಂದೇ ಹೆಸರಿತ್ತು. ಊಟದ ಸಮಯದಲ್ಲಿ ಹಸಿಮೆಣಸಿನಕಾಯನ್ನು ಇಟ್ಟುಕೊಂಡೇ ಊಟಮಾಡುತ್ತಿದ್ದರು. ಅವರೊಡನೆ ನಾನೂ ಸಹ ಈ ಮೆಣಸಿನಕಾಯಿಯ ಊಟವನ್ನು ಅನೇಕಬಾರಿ ಸವಿದಿದ್ದೇನೆ.

ಇವರು ರುದ್ರಾಧ್ಯಾಯವನ್ನು ಕರತಲಾಮಲವನ್ನಾಗಿ ಮಾಡಿಕೊಂಡು ಅನೇಕರಿಗೆ ಇದರ ಪಾಠವನ್ನು ಹೇಳಿಕೊಟ್ಟಿದ್ದಾರೆ.

ಇವರ ಇನ್ನೊಂದು ವೈಶಿಷ್ಟ್ಯವೆಂದರೆ ಯಾವುದೇ ಅಧಿಕಾರಿಯಿಂದಾಗಲೀ, ಮಂತ್ರಿಯಿಂದಾಗಲೀ ಯಾವುದಾದರೂ ಕೆಲಸವಾಗಬೇಕಾದರೆ ಸೀದಾ ಹೇಗಾದರೂ ಮಾಡಿ ಅವರನ್ನು ಭೇಟಿಮಾಡಿ ಕೆಲಸವನ್ನು ಸಾಧಿಸಿಕೊಂಡು ಬರುವ ಛಾತಿಯನ್ನು ತೋರಿಸುತ್ತಿದ್ದರು. ಕಛೇರಿಯ ಢವಾಲಿಯ ಹೆಗಲಮೇಲೆ ಕೈಹಾಕಿ, "ಇರಲಿ, ನೀನೂ ನಮ್ಮವನೇ ಕಣಯ್ಯಾ, ಏನು ನಿನ್ನ ಹೆಸರು? ನಿನ್ನ ಊರು ಯಾವುದು" ಎಂದು ಕೇಳುತ್ತಾ ಮೆಲ್ಲಗೆ ಕಛೇರಿಗೆ ನುಗ್ಗುತ್ತಿದ್ದರು. ಅವರು ಒಳಗೆಹೋದ ಮೇಲೆ ಆ ಡವಾಲಿಯು ಜೇಬನ್ನು ನೋಡಿದಾಗ ಅದರಲ್ಲಿ ಐದೋ, ಹತ್ತೋ ರುಪಾಯಿ ಸೇರಿರುತ್ತಿತ್ತು. ಕೆಲಸವಾಗದೇ ಅವರು ಹಿಂತಿರುಗುತ್ತಿರಲಿಲ್ಲ. ನಮ್ಮ ಭಾಗದ ಅನೇಕ ಯುವಕ ಯುವತಿಯರಿಗೆ ಈ ರೀತಿಯಲ್ಲಿ ತಮ್ಮದೇ ಆದ ಶೈಲಿಯಲ್ಲಿ ಕೆಲಸ ಮಾಡಿಸಿಕೊಟ್ಟಿದ್ದಾರೆ.

ಒಮ್ಮೆ ಅವರಿಗೆ ಎರಡೂ ಕಾಲುಗಳೂ ನೋಯುತ್ತಿದ್ದು ಸರಿಯಾಗಿ ನಡೆಯಲು ಆಗುತ್ತಿರಲಿಲ್ಲ. ಆದರೂ ತಿರುಗುವುದನ್ನು ತಪ್ಪಿಸುತ್ತಿರಲಿಲ್ಲ. ಒಂದು ದಿನ ನಮ್ಮ ಮನೆಗೆ ಬಂದಾಗ ಅವರು ಒಂದು ಆಟೋರಿಕ್ಷಾದವನನ್ನು ಕರೆದು ನಿಲ್ಲಿಸಿಕೊಂಡು ಅದರ ಹತ್ತಿರ ಹೋಗಿ ಅವನ ಹತ್ತಿರ "ನೋಡೋ, ನನ್ನ ಎರಡೂಕಾಲನ್ನು ಎತ್ತಿ ನಿನ್ನ ರಿಕ್ಷಾದಲ್ಲಿ ಇಡು" ಎಂದರು. ಅವನು ಕಕ್ಕಾಬಿಕ್ಕಿ!

ಇವರದ್ದು ಅನುರೂಪವಾದ ದಾಂಪತ್ಯ. ಇವರ ಪತ್ನಿ ಸ್ವಾತಂತ್ರ ಹೋರಾಟಗಾರ್ತಿ, ಸಮಾಜ ಸೇವಕಿಯಾದ ಶ್ರೀಮತಿ ಸಾವಿತ್ರಮ್ಮ. ಇವರಿಗೆ ಸಮಾಜಸೇವೆಗಾಗಿ ಭಾರತ ಸರ್ಕಾರದ ಪ್ರಶಸ್ತಿಯೂ ಬಂದಿದೆ. ಇವರು ನೊಂದ ಮಹಿಳೆಯರಿಗಾಗಿ ಒಂದು ಅಭಯಾಶ್ರಮವನ್ನು ಸ್ಥಾಪಿಸಿದ್ದು ಇಂದಿಗೂ ಅದು ಕೆಲಸ ನಿರ್ವಹಿಸುತ್ತಿದೆ. ಸುಮಾರು 15 ಜನ ನೊಂದಮಹಿಳೆಯರು ಇಲ್ಲಿದ್ದಾರೆ.

ಇವರ ಮನೆಯಲ್ಲಿ ಶರ್ಮರಿಗೆ ಏನಾದರೂ ಬೇಕಾದಾಗ ಅವರು ಸಾವಿತ್ರಮ್ಮನವರನ್ನು ಅವರ ಭಾಷೆಯಾದ ಸಂಕೇತಿ ತಮಿಳಿನಲ್ಲಿ "ಕೋಕ್ರಾ?" (ಕೇಳ್ರಾ) ಅಂತ ಕೂಗುತ್ತಿದ್ದರು. ಅದಕ್ಕೆ ಉತ್ತರ ಸಿಗದಿದ್ದಲ್ಲಿ ಎರಡನೆಯಬಾರಿ "ಕೋಕ್ಕಿಲ್ಯಾ? (ಕೇಳಲಿಲ್ವಾ), ಮೂರನೆಯಬಾರಿ "ಎರ್ಮೆಯಸ್ತದ್ದಿ" (ಎಮ್ಮೆಯಂತಹವಳು) ಎನ್ನುತ್ತಿದ್ದರು. ನಮ್ಮ ತಾಯಿಯವರು ಇದಕ್ಕೆ ಒಮ್ಮೆ ಆಕ್ಷೇಪಣೆ ಮಾಡಿದಾಗ "ಪದ್ದಾ, ನಂಗೂ ಅವಳ ಮೇಲೆ ಪ್ರೀತಿ ಇದೆಕಣೇ, ಇದು ನಮ್ಮ ಪ್ರೇಮಕಲಹ" ಎಂದರಂತೆ. ಇಷ್ಟಾದರೂ ಸಾವಿತ್ರಮ್ಮನವರು ಸ್ವಲ್ಪವೂ ಬೇಜಾರು ಮಾಡಿಕೊಳ್ಳುತ್ತಿರಲಿಲ್ಲ. ಆತಿಥ್ಯಕ್ಕೆ ಹೆಸರು ಅವರ ಮನೆ. ಈ ದಂಪತಿಗಳಿಗೆ ಮಕ್ಕಳಿರಲಿಲ್ಲವಾದರೂ ಪ್ರತಿದಿನ ಕನಿಷ್ಠ 5–6 ಎಲೆ ಊಟಕ್ಕೆ ಹಾಕುತ್ತಿದ್ದರು. ಮನೆಯ ಮತ್ತು ತೋಟದ ಕೆಲಸದವರನ್ನು ಮನೆಯಮಕ್ಕಳಂತೆ ನೋಡಿಕೊಳ್ಳುತ್ತಿದ್ದರು. ಅವರ ಆಳೊಬ್ಬ ಇವರ ಮನೆಯಲ್ಲಿ ಊಟಮಾಡಿಕೊಂಡು ಕೂಲಿ ಹಣ ತೆಗೆದುಕೊಂಡು ಎಣ್ಣೆಹಾಕಿ ಬೀದಿಯುದ್ದಕ್ಕೂ ಇವರನ್ನೇ ಬೈಯ್ಯುತ್ತಿದ್ದ. ಬೆಳಗ್ಗೆ ಕೇಳಿದರೆ ಅದು ನನಗೆ ಗೊತ್ತಿಲ್ಲ ಎನ್ನುತ್ತಿದ್ದ. ಹೀಗೆ ಎಲ್ಲರಿಗೂ ಬೇಕಾಗಿ, ಬಸವಾನಿ ಗ್ರಾಮಕ್ಕೆ ಬಹಳಷ್ಟು ಅನುಕೂಲ ಮಾಡಿಕೊಟ್ಟು 88ನೆಯ ವಯಸ್ಸಿನಲ್ಲಿ ಕಾಲವಾದರು.

■




ಅಯ್ಯೋ ನೀವು ತಿಳ್ಕೊಂಡ ಹಾಗೇ ರಸ್ತೆ
ಅಗೆಯುವದಕ್ಕೆ ಹೋಗ್ತಾ ಇಲ್ಲ.....!ಗದ್ದೆ
ಅಗೆಯುವುದಕ್ಕೆ ಹೋಗ್ತಾ ಇರೋದು ಸರ್..

ಆನ್‌ಲೈನ್‌ನಲ್ಲಿ ಗಂಡನ ಮಾರಾಟಕ್ಕಿಟ್ಟ
ಮಹಿಳೆ – ಸುದ್ದಿ




ಅಯ್ಯೋ 'ಓಎಲ್‌ಎಕ್ಸ್' ಯಾಕೇ ಓಪನ್
ಮಾಡ್ತಿದೀಯಾ...!?

# ಹಿಂದಿ –ಚೈನಿ ಚೌ ಚೌ

**। ಇ.ಆರ್. ರಾಮಚಂದ್ರನ್**

ಪೇಪರ್ ಓದುತ್ತಿದ್ದ ಅಜ್ಜಿ ಉದ್ಗಾರ ತೆಗೆದ್ರು.

'ಏನ್ ಆಯ್ತು ಅಜ್ಜಿ? ಇವತ್ತು ಅವಲಕ್ಕಿ ಒಗ್ಗರಣೆಗೆ ಖಾರ ಜಾಸ್ತಿ ಆಯ್ತಾ? ನೀರು ಕೊಡ್ಲಾ..'?

'ನೀರು ಗೀರು ಏನು ಬೇಡಾ.. ಇವತ್ತಿನ ಪೇಪರ್ನಲ್ಲಿ ಹಾಕಿದೆ....ಆರ್ಥಿಕ ವಿಷಯದಲ್ಲಿ ಚೀನ ಅಮೇರಿಕಾಗಿಂತ ಮುಂದೆ ಹೋಗಿದೆಯಂತೆ. ಈಗ ನಂಬರ್ 1 ಅಂತೆ. ನೋಡಿದ್ಯೇನೋ?'

' ನೋಡ್ದೆ ಅಜ್ಜಿ...ಅವರನ್ನ ಹಿಡಿಯಲು ಇನ್ನು ಯಾರಿಂದಲೂ ಸಾಧ್ಯವಾಗಲ್ಲ..'

'ನನಗನ್ಸುತ್ತೆ.. ಇನ್ನು ಮೇಲೆ ನಮ್ಮ ಹುಡುಗ್ರು ಹುಡುಗೀರು ಓದಕ್ಕೆ ಕೆಲಸಕ್ಕೆ ಅಮೇರಿಕಾ, ಇಂಗ್ಲೆಂಡಿಗೆ ಹೋಗೋದ್ರ ಬದಲು ಚೈನಾಗೆ ಹೋಗ್ತಾರೆ ನೋಡ್ಕೋ'.

'ಅದು ಇಷ್ಟು ಬೇಗ ಹೇಗೆ ಹೇಳ್ತಿ ಅಜ್ಜಿ?'

'ಅಯ್ಯೋ! ನನಗೆ ಈಗ್ಲೇ ಮರೆವು ಬಂದಿದೆಯಲ್ಲೋ! ನಿನಗೆ ಹೇಳೊದು ಮರ್ತುಹೋಯ್ತು ನೋಡು'.

'ಹೌದು! ನಿನಗೆ ಇಷ್ಟು ಬೇಗ ಮರೆವು ಬಂದಿರೋದು ಆಶ್ಚರ್ಯನೇ! ಏನದು ಹೇಳು ಅಜ್ಜಿ'.

'ನಮ್ಮ ಸಾಫ್ಟ್ವೇರ್ ಸೀತಮ್ಮನ ಪಕ್ಕದ ಮನೆಯವರು– ಹಯವದನ ರಾವ್ ಯೋಗದಲ್ಲಿ ಎತ್ತಿದ ಕೈ, ಕಾಲು. ಅವರು ಫ್ಯಾಮಿಲಿ ಸಮೇತ ಚೈನಾದಲ್ಲಿ 6 ತಿಂಗಳು ಇದ್ದು ಈಗ ವಾಪಸ್ಸು ಬಂದಿದಾರೆ. ಅವರಿಗೆ ಅಲ್ಲಿನ ಬಿಜಿಂಗ್ ಯೂನಿವರ್ಸಿಟಿಲಿ ಯೋಗ ಕಲಿಸುವ ಕೆಲಸ ಸಿಕ್ಕಿತ್ತು.'

' ಹೌದಾ....? ಅದಕ್ಕೆ ಅವರು ಯಾರೂ ಇಲ್ಲಿ ಕಾಣಿಸ್ತಿರಲಿಲ್ಲ.'

'ಅವ್ರು ಅಲ್ಲಿರೋವ್ರಿಗೆ ಯೋಗ ಕಲಿಸಿ, ಅಲ್ಲಿನ ಕುಂಗ್ಫೂ, ಥೋಂಗ್ ಫೂ ಇನ್ನೂ ಏನೇನೋ ಕಲಿತ್ಕೊಂಡು ಬಂದಿದಾರೆ. ಅವರು ಸೀತಮ್ಮಗೆ ಅವರ ಹೊಸ ವಿಸಿಟಿಂಗ್ ಕಾರ್ಡ ಕೊಟ್ಟಿದಾರೆ. ಇಂಗ್ಲಿಷ್ನಲ್ಲಿ ಯೋಗ ಕ್ಲಾಸ್ ವಿಚಾರ ಬರೆದಿದೆ. ಹಿಂದೆ ಕನ್ನಡದಲ್ಲಿ..ಕುಂಗ್ಫೂ, ಥೋಂಗ್ಫೂ, ಥಯ್ ಚಿ, ಇನ್ನೂ ಏನೇನೊ ಹಾಕೀದಾರೆ. ಇದೆಲ್ಲಾ ಕಲಿಸುವಾಗ ಹಯವದನ್ ರಾವು ಅವರ ಹೆಸರು ಈಗ ಹಯ್ವು! ಅವರ ಮನೇಲಿ ಡೆಮಾನ್ಸ್ಟ್ರೇಷನ್ ಕೊಟ್ರಂತೆ. ತಂದೆ ಮಗ ಇಬ್ರೂ ತಲೆ ಪೂರ್ತಿ ಬೋಳಿಸ್ಕೊಂಡಿದಾರೆ.. ತಲೆಯಿಂದ ಕಾಲಿನ್ ತನ್ಕ ಒಂದು ಹಳದಿ ಬಣ್ಣದ ಲಾಂಗ್ಕ್ಲಾತ್ ಬಟ್ಟೆ ಹಾಕ್ಕೊಂಡು ಎಗರಿ ಎಗರಿ ಕಾಲಿಂದ ಒಬ್ಬರಿಗೊಬ್ರು ಕಾಲಿಂದ ಒದೀತಾರಂತೆ ಕಣೋ! ಅದೇ ಥೋಂಗ್ಫೂ! ಸುತ್ತಮುತ್ತಲಿರೋವ್ರನ್ನ ಕರೆದು ಅವರೆದುರಿಗೆ ಒಂದು 10 ನಿಮಿಶ ಮಾಡಿತೋರಿಸಿದ್ರಂತೆ!'

'ಅವ್ರ ಮಗ ಲಕ್ಷ್ಮೀಶ ನಮ್ಜೊತೆ ಲಗ್ಗೆ ಲಗೋರಿ ಆಡೋದಕ್ಕೆ ಬರ್ತಿದ್ದ.'

'ಅವ್ನ ಹೆಸರು ಈಗ ಲಿನ್. ಅಪ್ಪ ಮಗನ ಫೈಟ್‌ನಲ್ಲಿ ಲಿನ್ ಹಲ್ಲಿಗೆ ಏಟುಬಿದ್ದು ರಕ್ತ ಬಂತಂತೆ; ಎಲ್ಲಾರು ಫಾಬ್ರಿ ಆಗಿ ಡೆಟಾಲ್ ಸಾವ್ಲಾನ್ ಹುಡುಕ್ತಿದ್ದಾಗ ಅವ್ನ ಅಕ್ಕ ಸರಸ್ವತಿ – ಈಗ ಅವ್ಳು ಷೀ – ನಿಧಾನಕ್ಕೆ ಬಂದು ಅವಳ ತಲೆಗೆ ಹಾಕಿದ್ದ ಸೇಫ್ಟಿ ಪಿನ್ ತೊಗೊಂಡು ಅವ್ನ ಸೊಂಟಕ್ಕೆ ಮೂರು ಸರ್ತಿ ಚುಚ್ಚಿದಕ್ಕೆ ರಕ್ತ ನಿಂತು ಹೋಯ್ತು ಅಂದ್ರು ಸೀತಮ್ಮ.  ಏನು ಆಗದಿರೋ ಹಾಗೆ  ಎದ್ದ ಲಿನ್ ಅವ್ನ ಅಪ್ಪನ ಮೇಲೆ ಎರಡೂ ಕೈ ತಿರಿಗಿಸ್ತಾ ಎಗರ್‍ತಾ ಹೋಗಿ ಅವರಿಗೆ ಒದ್ದ ಅಂದ್ರು!'

'ಅಜ್ಜಿ! ನೀನು ಹೀಗೇ ಅವ್ರ ಫೈಟಿಂಗ್‌ನ ನೋಡ್ತಾ ಹೋದ್ರೆ ಮುಂದೆ ಸುನಿಲ್ ಗವಾಸ್ಕರ್ ತರಹ ಒಳ್ಳೆ ಚೈನೀಸ್ ಮಾರ್ಷಲ್ ಆರ್ಟ್‌ಸ್ ಲೈವ್ ಕಾಮಂಟೇಟರ್ ಆಗ್ತಿಯ ನೋಡ್ಕೊ!'

****

ಸಾಯಂಕಾಲ ನಾನು ವಾಕಿಂಗ್ ಮುಗಿಸಿ ಕೊಂಡು ಬಂದಾಗ ಅಜ್ಜಿ ಮನೆಯಲ್ಲಿ ಇರ್‍ಲಿಲ್ಲ. ಒಂದರ್ಧಗಂಟೆಯಾದಮೇಲೆ ಬಂದ್ರು. ಮನೆಯಲ್ಲಾ ನಾಥ ಹೊಡೆಯಕ್ಕೆ ಶುರುವಾಯ್ತು.

'ಅಜ್ಜಿ! ಅಲ್ಲೇ ನಿಂತ್ಕೊ! ಮನೆ ಹಿಂದುಗಡೆಯಿಂದ ಹಾಗೆ ಬಚ್ಚಲು ಮನೆಗೆ ಹೋಗಿ ಸ್ನಾನ ಮಾಡಿ ಒಳಗೆ ಬಾ' ಅಂದೆ.

'ಈಗ ಯಾಕೆ ಸ್ನಾನಮಾಡ್ಬೆಕೋ? ಗ್ರಹಣ ಏನೂ ಇಲ್ಲ ಇವತ್ತು'.

'ನಿನ್ನ ಹತ್ರ ಬಂದ್ರೇನೇ ಗಬ್ಬು ನಾಥ ಹೊಡೆಯುತ್ತೆ. ಅದೇನು ಮಾಡ್ಕೊಂಡು ಬಂದಿದೀಯ ಅಜ್ಜಿ!  ವಾಕಿಂಗ್‌ಗೆ ಹಂದಿಲಾಯದ ಹತ್ತಿರ ಹೋಗಿದ್ಯಾ ಏನು?'

' ನಾನು ಹಯವದನ್ ರಾವ್ ಮಗಳು  ಸರಸ್ವತಿ – ಸೂಷಿ ಮನೆಗೆ ಹೋಗಿದ್ದೆ. ಸೀತಮ್ಮನಿಗೆ ನನ್ನನ್ನೂ ಕರಕೊಂಡು ಬಾ ಅಂತ ಅವರ ತಾಯಿ ಗೌರಮ್ಮ ಹೇಳಿದ್ರಂತೆ'.

'ಅವರ ಮನೆಲಿ ಗುಡಿಸೋದು ಸಾರಿಸೋದು ಪದ್ಧತಿ ಇಲ್ವಾ? ಯಾಕೆ  ಈ ಸು–ವಾಸ್ನೆ?

'ಸರಸ್ವತಿ ಒಂದಿಷ್ಟು ಪುಡಿಗಳನ್ನು ಕೊಟ್ಟಿದಾಳೆ.  ಈ ಪುಡಿಗಳು ಬಿಸಿ ನೀರಲ್ಲಿ ಹಾಕಿ ಒಂದೆರೆಡು ಚಮಚ ತೊಗೊಂಡ್ರೆ ಕೆಮ್ಮು, ನೆಗಡಿ, ಜ್ವರ  ವಾಸಿ ಆಗುತ್ತೆ. ಉಪಯೋಗಿಸಿ ನೋಡಿ ಅಂತ ಕೊಟ್ಲು. ಬೇಕಾದ್ರೆ ಇನ್ನೂ ಇದೆಯಂತೆ ಅವಳ ಹತ್ರ.'

'ಆ ನಾಥ ತಡ್ಕೋಳಕ್ಕೆ ಏನಾದ್ರೂ ಔಷದ ಕೊಡ್ಲಿಲ್ವಾ?'

'ಜ್ವರ ಕೆಮ್ಮು ಕುಡಿದ ಎರೆಡು ದಿವಸಕ್ಕೆ ವಾಸಿ ಯಾಗುತ್ತೇಂದ್ರೆ ಯಾವ ವಾಸ್ನೆನೂ ತಡ್ಕೊಬಹುದು. ಷೀ  ಚೀನಾದ ಹೊಕ್ಕಳ ವಿದ್ಯೆನೂ ಕಲಿತುಕೊಂಡು ಬಂದಿದ್ದಾಳೆ. ಹೊಕ್ಕಳ ಸುತ್ತಲೂ 8 ಚಕ್ರಗಳು ಇದೆಯಂತೆ. ಅಲ್ಲಿಗೂ ಅಕ್ಯುಪ್ರಷರ್ ಸೂಜಿಗಳನ್ನು ಹಾಕಿ ಚುಚ್ಚಿದರೆ ಆಸ್ತಮ, ವಾಯು, ಹೊಟ್ಟೆಯ ಕಾಹಿಲೆಗಳು ವಾಸಿಯಾಗುತ್ತಂತೆ. ಹಯವದನ ರಾವ್ ಅವರಿಗೆ ಮುಂಚೇನೆ ನಾಭಿಶಾಸ್ತ್ರ ಗೊತ್ತು. ಈಗ ಷೀ ಇದನ್ನು ಕಲಿತಮೇಲೆ ಅವಳಿಗೆ ಪೂರ್ತಿ ಇಂಡೊ–ಚೈನಾದ  ಹೊಕ್ಕಳ

ವಿದ್ಯೆ ಅವಳಿಗೆ ಕರಗತವಾಗಿದೆ. ಆಲ್ಲಿ ಚೈನೀಸ್ ತಿಂಡಿ ಏನೋ ಕೊಟ್ರು.'

'ಏನದು ಅಜ್ಜಿ?'

'ಓಂದು ಹೂಜೀಲಿ ಕುಡಿಯೋದಕ್ಕೆ ಕೊಟ್ರು. ಉಪ್ಪು ಖಾರವಾಗಿತ್ತು. ಅರ್ಧಕುಡಿದ ಮೇಲೆ ಅದು ಗಟ್ಟಿಯಾಗಿ ಸ್ಪೂನಿನಲ್ಲಿ ತಿಂದೆವು. ಆಗ ಅದು ಸಿಹಿಯಾಗಿತ್ತು. ಅವರ ಅಡುಗೆನೇ ವಿಚಿತ್ರ!'

'ನೀನು ಹೀಗೆ ಎರಡು ಮೂರು ಸಲ ಅವರ ಮನೆಗೆ ಹೋಗಿ ಕುಡಿತಾ ತಿನ್ತಾ ಹೋದ್ರೆ ನಿನಗೂ ಸೂಜಿ ಕಣ್ಣು ಬರುತ್ತೆ ನೋಡ್ಕೊ!'

'ಸುಮ್ನಿರೋ. ಕೆಟ್ಟ ಬಾಯಿ... ಆಮೇಲೆ ಅವರ ಅಮ್ಮ ಗೌರಮ್ಮ ಚೈನೀಸ್ ಪಾಕಶಾಸ್ತ್ರ, ಚೈ–ಕಶಾಸ್ತ್ರನ ಅರೆದು ಕುಡಿದು ಬಂದಿದ್ದಾಳೆ. ಅವರು ಬಿಸಿನೆಸ್ಗೂ ಇಳಿದಿದ್ದಾರೆ..

'ಏನದು ಅಜ್ಜಿ'.

'ಅವರು ಚೈನಾಗೆ ಹೋಗ್ತಾ  ನಮ್ ಸುಬ್ಬಮ್ಮನ ಅಂಗಡಿಯಿಂದ ಚಕ್ಕಲಿ, ಕೋಡುಬಳೆ, ಮುಚ್ಚೋರೆ, ಪುಳ್ಳಂಗಾಯಿ ಉಂಡೆ, ಕಜ್ಜಾಯ, ಓಂಪುಡಿ ಎಲ್ಲಾ ತೊಗೊಂಡು ಹೋಗಿದ್ರು. ಅವರಿಗೆ ಬೇಕಾಗುತ್ತೇ ಅಂತ ತೊಗೊಂಡು ಹೋಗಿದ್ರು.. ಅಲ್ಲಿಯವರಿಗೂ ರುಚಿಗೇಂತ ಸ್ವಲ್ಪ ಜನಕ್ಕೆ ಕೊಟ್ರಂತೆ. ಅವರಿಗೆಲ್ಲಾ ಅದು ಬಹಳ ಇಷ್ಟವಾಗಿ ನಮಗೆಲ್ಲಾ ಬೆಂಗ್ಳೂರಿಂದ ಪಾರ್ಸೆಲ್  ತರಿಸ್ಕೊಡಿ ಅಂತ ಹೇಳಿದಾರೆ. ಅವರ ಸಿಚುವಾನ್ ಮೆಣಸಿನ ಪುಡಿಗಳು ಕೊಟ್ಟುಕಳ್ಸಿದಾರೆ. ಅದನ್ನು ಹಾಕಿ ಮಾಡ್ಸೋದಕ್ಕೆ ಹೇಳಿದಾರೆ.  ಒಂದೊಂದೂ 5 ಟನ್ ಬೇಕಂತೆ'.


'ಗ್ರೇಟ್ ಐಸೆ'.

'ಅದು ಇಷ್ಟ ಆಯ್ತು ಅಂದ್ರೆ ಬಿಜಿಂಗ್, ಷಾಂಗಾಯ್ನಲ್ಲಿ ಸುಬ್ಬಮ್ಮನ ಚೈನಾದ ಫ್ಯಾಕ್ಟರಿ ಹಾಕಿ ಅಂತ ಕೇಳಿದಾರೆ'.

'ಈಗ ಗೌರಮ್ಮನ ಹೊಸ ಹೆಸರು ಏನು?'

'ಸರಿಯಾಗಿ ಕೇಳ್ದೆ! ಲಿಂಗ್‌ಶಿ – ಲಿಂಗ್‌ಶಿ ಅಂದ್ರೆ ಚೈನೀ ಭಾಷೆಯಲ್ಲಿ ಕುರಕುಲು ತಿಂಡಿ ಅಂತೆ!'

■



। ದಂನಆ

- ಮಾರ್ಕ್ಸಿಸ್ಟರ ಕಾಲ ಮುಗಿದಿರಬಹುದು. ಈಗ ಮಾಸ್ಕಿಸ್ಟರ ಕಾಲ.
- ನಿಮ್ಮ ಪಾದ ದೂಳು ನನ್ನ ಹಣೆ ಮೇಲಿರಲಿ. ಕಣ್ಣೊಳಗೆ ಮಾತ್ರ ಬೀಳದಿರಲಿ.
- ಸೀರೆ ಆಯ್ಕೆ ಮಾಡುವಾಗ ಇರುವ ಜಾಣತನ ಗಂಡನನ್ನು ಆಯ್ಕೆ ಮಾಡುವಾಗ ಇರಲ್ಲ ಎಂದು ಎಷ್ಟೋ ಹೆಂಗಸರು ನಂತರ ಪಶ್ಚಾತ್ತಾಪ ಪಡುತ್ತಾರಂತೆ.
- ಪೀಪಲ್ ಹು ಹ್ಯಾವ್ ನಥಿಂಗ್ ಟು ಲೂಸ್ ಆರ್ ವೆರಿ ರಿಚ್.
- ಯಶಸ್ವಿಯಾದ ಮೇಲೆ ನೀವು ಹೇಗೆ ಕಾಣುತ್ತೀರಿ ಎಂಬುದರ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳುವುದಿಲ್ಲ.
- ಒಳ್ಳೆಯ ಜ್ಞಾಪಕ ಶಕ್ತಿ ಇರುವುದು ಮೆದುಳಿನ ಒಂದು ಲಕ್ಷಣ. ಆದರೆ ಬೇಡವಾದುದನ್ನು ಮರೆಯುವಂತೆ ಮಾಡುವುದು ಹೃದಯದ ಇನ್ನೂ ಒಳ್ಳೆಯ ಲಕ್ಷಣ.
- ಆಹಾರ ಪಂಚೇದ್ರಿಯಗಳಿಗೂ ಪರಮಾಪ್ತವಾಗಿರಬೇಕು. ಕಣ್ಣಿಂದ ನೋಡುತ್ತಲೇ ಹಸಿವಾಗಬೇಕು; ಮೂಗಿಗೆ ಪರಿಮಳ ತಾಕುತ್ತಲೇ ಜಿಹ್ವೆ ಎಚ್ಚರಗೊಳ್ಳಬೇಕು. ಸ್ಪರ್ಶಕ್ಕೆ ಬಂದಕೂಡಲೇ ಮಾಂತ್ರಿಕತೆ ಸೃಷ್ಟಿಯಾಗಬೇಕು. ಆಗ ಮಾತ್ರ ಮಾಡಿದ ಆಹಾರ ಔಷಧವಾಗಲು ಸಾಧ್ಯ.
- ಹ್ಯಾಪಿನೆಸ್ ಡಸ್ ನಾಟ್ ಡಿಪೆಂಡ್ ಆನ್ ವಾಟ್ ಯು ಹ್ಯಾವ್ ಆರ್ ಹು ಯು ಆರ್. ಇಟ್ ಸೋಲ್‌ಲಿ ರೆಸ್ಟ್‌ಸ್ ಆನ್ ವಾಟ್ ಯು ಥಿಂಕ್.
- ಮನುಷ್ಯ ತನ್ನಿಂದ ತಾನು ಕಡಿಮೆ ನಿರೀಕ್ಷಿಸುತ್ತಾನೆ. ಆದರೆ ಬೇರೆಯವರಿಂದ ಹೆಚ್ಚು ನಿರೀಕ್ಷಿಸುತ್ತಾನೆ.
- ನನಗೆ ಇಷ್ಟು ಸಾಕು ಎಂದು ಯಾರಿಗೆ ಅರಿವಿರುತ್ತದೊ ಅವರ ಬಳಿ ಸಾಕಷ್ಟು ಇದ್ದೇ ಇರುತ್ತದೆ.
- ಬೋರ್ಡಮ್ ಗಿವ್ಸ್ ಯು ಎಂಪ್ಟಿ ಸ್ಪೆಸಸ್ ದಟ್ ಯು ಹ್ಯಾವ್ ಟು ಫಿಲ್.
- ಅತ್ಯಂತ ಶ್ರೀಮಂತ ಅತ್ಯಂತ ಸಂತುಷ್ಟ ಮನುಷ್ಯನಲ್ಲ. ಅತ್ಯಂತ ಸಂತುಷ್ಟ ಮನುಷ್ಯ ಅತ್ಯಂತ ಶ್ರೀಮಂತನೂ ಅಲ್ಲ.
- ವಿಶ್ವಾಸ ಮೂಡುವುದು ನಿಮ್ಮ ಬಳಿ ಎಲ್ಲ ಉತ್ತರಗಳಿದ್ದಾಗ ಅಲ್ಲ. ಎಲ್ಲ ಪ್ರಶ್ನೆಗಳನ್ನು ಎದುರಿಸಲು ನೀವು ತಯಾರಿದ್ದಾಗ.
- ನಿಮ್ಮ ತೋಟದಲ್ಲಿ ಉದ್ದುದ್ದಕ್ಕೆ ಬೆಳೆದ ಕಳೆ ಸುಂದರ ಪುಷ್ಪಗಳ ಮೇಲೆ ನೆರಳು ಬೀಳದಂತೆ ಎಚ್ಚರ ವಹಿಸಿ.
- ಚೂಸಿಂಗ್ ನಾಟ್ ಟು ಚೂಸ್ ಈಸ್ ಆಲ್ಸೊ ಎ ಚಾಯ್ಸ್.

■

TEMPLE OF KNOWLEDGE

# BEECHI Systems & Services

Email: admin@beechi.in
Web: www.beechi.in
Mob: 98452 64304

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

## Beechi Prakashana ಬೀಚಿ ಪ್ರಕಾಶನ



**Books Available**

- Kannada Books
- Banking Exam Books
- Biographies
- Business & Economics
- Children & Young Adult Books
- Comics
- Competitive Exam Books
- Engineering Entrance Exam
- Fiction & Non-Fiction Books
- Office Stationery
- ಕನ್ನಡ ಪುಸ್ತಕಗಳು
- Health & Family
- Humour
- Law
- Literature
- Medical Entrance
- Politics
- Reference Books
- Religion & Spirituality
- Romance
- Other Books

**BUY Books online and get 10% discount.**

Email : admin@beechi.in | **www.beechi.in** | **98452 64304**

**You could also request any book of your choice by WhatsApp**

# ಮುದ್ದೇಶನ ಪೋಸ್ಟ್ ಮಾರ್ಟಂ

। ನಾಗರತ್ನ ಚಂದ್ರಶೇಖರ

"ರೀ,,,,ನಾವು ಮುಂದಿನ ವಾರ ಟೂರ್ ಹೋಗ್ತಿವಲ್ಲ..ಆಗ ನಮ್ಮ ಗಾರ್ಡನ್ ಗಿಡಗಳಿಗೆ ನೀರು ಹಾಕೋಕೆ ಆ ಮುದ್ದೇಶನಿಗೆ ಹೇಳಿದರೆ ಹೇಗೆ?"

"ಏನು? ಆ ಎಡಬಿಡಂಗಿನ....ಅವನನ್ನ ನಂಬಿದರೆ ಅಷ್ಟೆ, ನಾವು ವಾಪಸ್ಸು ಬರೋ ಅಷ್ಟರಲ್ಲಿ ನೀನು ಸಾಕಿರುವ ಗಿಡಗಳು ಬದುಕಿದ್ದರೆ ಅದೃಷ್ಟ ಅಷ್ಟೆ!"

"ಬೇರೆ ಯಾರಿಗೋ ಹೇಳೋಕಾಗೋಲ್ಲ, ಗೇಟು ತೆಗೆದು ಒಳಗೆ ಬಂದು ಮತ್ತೆ ಸರಿಯಾಗಿ ಗೇಟು ಬೀಗ ಹಾಕಿಕೊಂಡು ಹೋಗಬಲ್ಲ ನಂಬಿಕಸ್ತರು ಬೇಕು. ಮುದ್ದೇಶನ ಅಪ್ಪ ನಮ್ಮ ಗಾರ್ಡನ್ ಮಾಲಿ ಆಗಿರೋದ್ರಿಂದ ಅವನಿಗೆ ಗಿಡಗಳ ಬಗ್ಗೆ ನಮ್ಮಷ್ಟೇ ಪ್ರೀತಿ ಇದೆ."

ಮಂಗಳಮ್ಮ, ಸತ್ಯಮೂರ್ತಿ ಟೂರ್ ಹೋಗುವ ವಾರ ಮುಂಚೆನೇ ಮುದ್ದೇಶನಿಗೆ ಏನೇನ್ ಕೆಲ್ಸ ಮಾಡಬೇಕು ಅನ್ನೋದನ್ನ ಅರೆದು ಕುಡಿಸಿ ನಿಶ್ಚಿಂತೆಯಿಂದ ಮನೆ ಬೀಗ ಹಾಕಿ, ಗೇಟ್ ಬೀಗ ಅವನಿಗೊಪ್ಪಿಸಿ ಹೊರಟರು.

ಮುದ್ದೇಶನಿಗೂ ಇವರ ಕಾಂಪೌಂಡ್ನಲ್ಲಿ ದಂಡಿಯಾಗಿ ಬಿಟ್ಟಿರುವ ಸೀಬೆಕಾಯಿ, ಮಾವಿನಕಾಯಿಗಳನ್ನು ಬೇಕಾದಷ್ಟು ತಿನ್ನಬಹುದಾದ ಸಂಭ್ರಮ, ಖುಷಿಯಿಂದಲೇ ಬೆಳಗಾಗುತ್ತಲೇ ಹಾಜರಾಗಿ ಬಿಡುತ್ತಿದ್ದ.

ಆ ದಿನ ಎಂದಿನಂತೆ ಮುದ್ದೇಶ ಗಿಡಗಳಿಗೆ ನೀರು ಹಾಕಲು ಗೇಟಿನ ಬೀಗ ತೆಗೆದು ಮನೆಯ ಹಿತ್ತಲಿಗೆ ಹೋದ. ಅವನಿಗಿಂತ ಎರಡರಷ್ಟು ಎತ್ತರವಾಗಿದ್ದ ಸಿಮೆಂಟ್ ತೊಟ್ಟಿಯ ತುಂಬಾ ನೀರು ತುಂಬಿ ಹೋಗಿದ್ದರು. ಏನಿದ್ದರೂ ಅದಕ್ಕೆ ಅಳವಡಿಸಿದ್ದ ಕೆಳ ಭಾಗದಲ್ಲಿದ್ದನಲ್ಲಿ ಬಿಟ್ಟರೆ ನೀರು ಸಾಕಷ್ಟು ಬರುತ್ತಿತ್ತು. ಪೈಪೆನಿಂದಲೋ, ಚಿಕ್ಕ ಬಕೆಟ್ನಿಂದಲೋ ನೀರು ಹಾಕುವುದು ಅಷ್ಟೇನೂ ಶ್ರಮದ ಕೆಲಸವೂ ಆಗಿರಲಿಲ್ಲ. ಮೇಲೆ ತೂಗಾಡುತ್ತಿದ್ದ ಮಾವಿನಕಾಯಿಗಳ ಗೊಂಚಲು, ಸೀಬೆ ಗಿಡದಲ್ಲಿ ಕಣ್ಣು ಮುಚ್ಚಾಲೆಯಾಡುವ ದೋರುಗಾಯಿಗಳು ಪ್ರಮುಖ ಆಕರ್ಷಣೆ, ಮುದ್ದೇಶನಿಗೆ ಈಗಂತೂ ಮನೆಯಲ್ಲಿ ಯಾರೂ ಇಲ್ಲ. ಎಷ್ಟು ಬೇಕಾದರೂ ತಿಂದು, ಸ್ಕೂಲಿನ ಚೀಲಕ್ಕೂ ಒಂದಷ್ಟು ಲೋಡ್ ಮಾಡಿಕೊಳ್ಳುವ ಲೆಕ್ಕಚಾರದಲ್ಲೇ ಅವನು ಬರುತ್ತಿದ್ದದ್ದು. ಮನೆಯ ಮುಂದೆ ಕಾಂಪೌಂಡ್ಗೆ ಹತ್ತಿದಂತೆ ಇದ್ದಂತ ಹಲವಾರು ಗಿಡಗಳಿಗೆ ಮಾತ್ರ ಹಿಂದಿನಿಂದ ಬಕೆಟ್ನಲ್ಲೇ ತಂದು ನೀರು ಹಾಕುವುದು ಬಾಕಿ ಇತ್ತು. ಆಗ ಅವನಿಗೆ ಇದ್ದಕ್ಕಿದ್ದಂತೆ ದಬ್ ಎಂದು ನೀರಿಗೆ ಬಿದ್ದ ಶಬ್ದ ಕೇಳಿ ಬೆಚ್ಚಿ ಬಿದ್ದ. ಟ್ಯಾಂಕಿನೊಳಗೆ ಯಾರೋ ಬಿದ್ದಿರಲೇ ಬೇಕು, ಯಾರೋ ಕಳ್ಳರೇ ಇರಬೇಕು ಎಂದು ಗಾಭರಿಯಿಂದ ಬೀದಿಯತ್ತ ಓಡಿದ.

ಎದುರು ಮನೆ ಅಜ್ಜಿ ಇವನ ಎದುಸಿರು, ಗಾಭರಿ ಕಂಡು "ಏನಾಯ್ತೋ ಮುದ್ದೇಶ, ಹಾಂಗ್ಯಾಕೆ ಓಡ್ ಬಂದೆ?"ಎಂದರು.

"ಅಜ್ಜಿ....ನೀರಿನ ಟ್ಯಾಂಕೊಳಗೆ ಯಾರೋ ಬಿದ್ದಂಗಾತು, ದೊಡ್ಡ ಶಬ್ದ ಬಂತು!"

"ಹೌದೇನೋ....ತಾಳು ನನ್ನ ಮೊಮ್ಮಗ ಮನೇಲಿದ್ದಾನೆ, ಅವನಿಗೆ ಹೇಳ್ತೀನಿ,

ಏನಾಯ್ತೂತಂತ"

ಅಜ್ಜಿ, ಮೊಮ್ಮಗ ಇಬ್ಬರೂ ಮುದ್ದೇಶನ ಜೊತೆ ನೀರಿನ ಟ್ಯಾಂಕ್ ಹತ್ರ ಬಂದದ್ದೇನೋ ಆಯಿತು. ಆದರೆ ಅವರಿಬ್ಬರ ಕಣ್ಣಳತೆಗೂ ಮೀರಿದ ಎತ್ತರದಲ್ಲಿದ್ದ ನೀರಿನ ಟ್ಯಾಂಕಿನಲ್ಲಿ ಏನಿದೆ ಎಂದು ತಿಳಿಯಲಾಗದೆ ಚಡಪಡಿಸಿದ್ದೇ ಬಂತು. ಮುದ್ದೇಶನಿಗೆ ಒಂದುಪಾಯ ಹೋಳಿತು. ಆತ ಸರ ಸರನೆ ಸೀಬೆಮರ ಏರಿದ. ಅಲ್ಲಿಂದ ನೀರಿನ ಟ್ಯಾಂಕಿನ ಒಂದು ಭಾಗ ಕಾಣಬಹುದಿತ್ತು.

"ಅಜ್ಜಿ...ಅಲ್ಲಿ ಏನೋ ತೇಲಿ ಮುಳಿಗಿದಂತೆ ಆಗ್ತಾಇದೆ, ದಪ್ಪಗೆ ತಲೆ ತರ ಕಾಣ್ತಾ ಇದೆ!"

ಮುದ್ದೇಶನ ಮಾತಿಗೆ ಬೆಚ್ಚಿ ಬಿದ್ದ ಅಜ್ಜಿ, "ಲೋ ಕೆಳಗೆ ಬಾ...ಬೇಗ ಹೋಗಿ ಈ ರಸ್ತೆ ಕೊನೇಲಿ ಇರೋ ಪೋಲೀಸ್ ಸ್ಟೇಷನ್ಗೆ ಹೋಗಿ ಹೇಳಿ ಬರೋದು ಒಳ್ಳೇದು!"

ಬೆಳಿಗ್ಗೆ ಕೊಲೆ, ಅತ್ಮಹತ್ಯೆ ಅಂತ ದೂರು ಬರುತ್ತೆ ಅಂತ ಯಾವ ಪೋಲೀಸರೂ ಆಸೆ ಪಡುವುದಿಲ್ಲವಷ್ಟೆ. ಮುದ್ದೇಶನ ಹೇಳಿಕೆ ಮೇಲೆ ಜೀಪ್ ಹತ್ತಿ ಪೋಲೀಸರೂ ಅವರ ಹಿಂದೆ ಸ್ಟೇಷನ್ನಲ್ಲೇ ಇದ್ದ 'ಸಮಾಚಾರ' ಪತ್ರಿಕೆಯ ಪ್ರತಿನಿಧಿ ಎಲ್ಲರೂ ಮಂಗಳಮ್ಮ, ಸತ್ಯಮೂರ್ತಿ ಮನೆ ಮುಂದೆ ಹಾಜರಾಗಿದ್ದರು. ಗಾಳಿ ಮಾತು ಗಾಳಿಗಿಂತ ವೇಗವಾಗಿ ಬೀದಿ, ಬೀದಿ ತಲುಪಿಯಾಗಿತ್ತು. "ಅದ್ಯಾರೋ ಅವರ ಮನೇಲಿರೋ ನೀರಿನ ಟ್ಯಾಂಕ್ಗೆ ಹಾರಿಕೊಂಡು ಅತ್ಮಹತ್ಯೆ ಮಾಡಿ ಕೊಂಡಿದ್ದಾರಂತೆ".

"ಅಯ್ಯೋ, ಕೊಲೆ ಮಾಡಿ ನೀರಿನ ಟ್ಯಾಂಕ್ಗೆ ಎಸೆದಿದ್ದಾರಂತೆ".

"ಆ ಮನೇವ್ರು ಯಾರೂ ಊರಲಿಲ್ದೇ ಇರೋ ಸಮಯ ನೋಡಿ ಕಳ್ಳ ಬಂದಿದ್ನಂತೆ, ಬೆಳಿಗ್ಗೆ ಆ ಮಾಲಿ ನೀರು ಹಾಕೋಕ್ಕೆ ಹೋದಾಗ ಗಾಭರಿಯಿಂದ ಕಾಂಪೌಂಡ್ ಹಾರೋವಾಗ ನೀರಲ್ಲಿ ಬಿದ್ದೋದ್ನಂತೆ".

"ಅಲ್ಲ...ಅ ಮನೇವ್ರಿಗೆ ಯಾರಾದ್ರೂ ಸುದ್ದಿ ಮುಟ್ಟಿಸಿ ಊರಿಗೆ ಬರೋ ಹಾಗೆ ಹೇಳ್ಬೇಕಲ್ವೆ!".

"ನಮ್ಮ ರಸ್ತೇಲೇ ಪೋಲೀಸ್ ಸ್ಟೇಷನ್ ಇದೆ, ಅದ್ರೇನು? ಅವ್ರ ಮೂಗಿನ ನೇರಕ್ಕೇ ಕಳ್ಳರೂ ಓಡಾಡ್ತಿದ್ರು ಅವರಿಗೆ ಕಾಣ್ಸೋದೇ ಇಲ್ಲ!"

"ಎಲ್ಲಿ, ಜಾಗ ಬಿಡಿ....ದೂರ ಹೋಗಿ, ಫೋಟೋಗ್ರಾಫರ್ ಬರ್ತಾ ಇದಾರೆ" ಪಿ.ಸಿ. ಗೇಟಿನ ಬಳಿ ಸೇರಿದ್ದ ಜನನೆಲ್ಲಾ ಚದುರಿಸಲು ಪ್ರಯತ್ನಿಸುತ್ತಿದ್ದ.

"ಅಂದ್ರೆ, ಹೆಣ ತೆಗೆದು, ಫೋಟೋ ಹಿಡಿದು, ಪೋಸ್ಟ್ಮಾರ್ಟಂ ಅಂತ ಇವತ್ತೆಲ್ಲಾ ಸುದ್ದಿನೋ ಸುದ್ದಿ, ನಾ ಬರೋದು ತಡ ಆಗಬಹುದು" ಸಮಾಚಾರ ಪತ್ರಿಕೆಯವನು ಮನೆಗೆ ಫೋನ್ ಮಾಡುತ್ತಾ ಹೆಂಡತಿಗೆ ಹೇಳ್ತಾ ಇದ್ದ.

"ರೀ, ರಮೇಶ್...ಏಣಿ ಇದ್ರೆ ತರಿಸ್ರೀ, ಈ ಆಳೆತ್ತರ ನೀರಿನ ಟ್ಯಾಂಕ್ನೊಳಗೆ ಇಣುಕಿ ನೋಡಕ್ಕೆ ಇಲ್ಲಿಂದ ಆಗ್ತಾ ಇಲ್ಲ" ಸಬ್ ಇನ್ಸ್ಪೆಕ್ಟರ್ ಪಿ.ಸಿ.ಗೆ ಹೇಳ್ತಾ ಇದ್ದ ಹಾಗೆ ಪಕ್ಕದ ಮನೆಯವರು ಇವರಿಗೆ ಏಣಿ ಕೊಟ್ಟೇ ಬಿಟ್ಟರು.

ಸರ ಸರ ಏಣಿ ಹತ್ತಿದ ಪಿ.ಸಿ. ರಮೇಶ ಅಲ್ಲಿಂದಲೇ ಕೂಗಿದ "ಸಾರ್,

ಒಂದಲ್ಲ, ಎರಡು, ತೇಲಾಡ್ತಿವೆ!"

"ನಿಮ್ಮೊಬ್ಬರಿಗೆ ಆಗೋದಿಲ್ಲಾಂದ್ರೆ ಇನ್ನಿಬ್ಬರನ್ನು ಸಹಾಯಕ್ಕೆ ಕರೆಸ್ತೇನೆ, ತಾಳಿ"

"ಬೇಡಾ, ಬಿಡಿ ಸಾರ್, ನಾನೇ ಮ್ಯಾನೇಜ್ ಮಾಡ್ತೀನಿ"

ನೀರಿನ ಟ್ಯಾಂಕಿನಿಂದ ಬರಲಿರುವ ಒಂದಲ್ಲ, ಎರಡು ಬಾಡಿಗಳಿಗಾಗಿ ಕ್ಯಾಮೆರಾ ಸರಿಮಾಡಿ ಕೊಳ್ಳುತ್ತಿದ್ದ ಫೋಟೋಗ್ರಾಫರ್ಗೆ ನಗುವುದೋ, ಅಳವುದೋ ನೀವೇ ಹೇಳಿ" ಅನ್ನೋ ಹಾಗಾಯಿತು.

ನೀರಿನ ಟ್ಯಾಂಕಿನಿಂದ ಹೆಣ ಬರಬಹುದೆಂದೇ ಕಾಯುತ್ತಿದ್ದವರಿಗೆ ಕಂಡದ್ದು ಒಣಗಿದ ಮೊಟ್ಟೆ ತೆಂಗಿನಕಾಯಿ ಕೆಳಗೆ ಬಿದ್ದ ಶಬ್ದ, ಅದರ ಹಿಂದೆಯೇ ಒಂದು ದೊಡ್ಡ ಹೆಗ್ಗಣದ ಸತ್ತ ದೇಹ.

ಈಗ ಮುದ್ದೇಶನ ಪೋಸ್ಟ್ಮಾರ್ಟಂ ಮಾಡಲು ಎಲ್ಲರೂ ಅವನನ್ನು ಹುಡುಕುತ್ತಿದ್ದರೆ, ಅವನು ಆಗಲೇ ಸೀಬೆಕಾಯಿ, ಮಾವಿನಕಾಯಿ ತುಂಬಿದ ಚೀಲ ಹಿಡಿದು ನಾಪತ್ತೆಯಾಗಿದ್ದ.

■

---



# ಆಸ್ಕರ್ ವೈಲ್ಡ್ ದೃಷ್ಟಿಯಲ್ಲಿ ಗಂಡಸು

ಸಂಗ್ರಹ । **ಬೇಲೂರು ರಾಮಮೂರ್ತಿ**

ಯಾವ ಮನುಷ್ಯನೂ ತನ್ನ ಭೂತಕಾಲದ ವೈಭವಗಳನ್ನು ವೈಭೋಗಗಳನ್ನು ಕೊಳ್ಳುವಷ್ಟು ಶ್ರೀಮಂತನಲ್ಲ.

(ಎನ್ ಐಡಿಯಲ್ ಹಸ್ಬೆಂಡ್)

ಒಬ್ಬ ಮನುಷ್ಯ ನಟಿಸುತ್ತಿದ್ದರೆ ಅವನು ಸೂತ್ರದ ಗೊಂಬೆ. ಆದರೆ ಅವನು ಏನನ್ನಾದರೂ ವಿವರಿಸುತ್ತಿದ್ದರೆ ಅವನು ಕವಿ. (ಇನ್ ಕಾನ್ವರ್ಸೇಷನ್
)

ಒಬ್ಬ ಮನುಷ್ಯನ ನಡವಳಿಕೆಗಳನ್ನು ನೋಡಿ ಅವನನ್ನು ಅಳೆಯಲಾಗದು. ಅವನು ಕಾನೂನು ಪಾಲಕನಾಗಿದ್ದು ಸಮಾಜದ ದೃಷ್ಟಿಯಲ್ಲಿ ಅಪ್ರಯೋಜಕನಾಗಿರಬಹುದು ಕಾನೂನನ್ನು ಮುರಿದು ಸಮಾಜದಲ್ಲಿ ಜನಪ್ರಿಯ ವ್ಯಕ್ತಿಯಾಗಿರಬಹುದು.

(ದ ಸೋಲ್ ಆಫ್ ಮ್ಯಾನ್ ಅಂಡರ್ ಸೋಷಿಯಲಿಸಮ್)

ಅತ್ಯಂತ ಶ್ರೀಮಂತ ಬ್ರಹ್ಮಚಾರಿಗಳಿಗೆ ಹೆಚ್ಚು ಹೆಚ್ಚು ತೆರಿಗೆ ವಿಧಿಸಬೇಕು. ಏಕೆಂದರೆ ಕೆಲವೇ ವರ್ಗದ ಜನರು ಶ್ರೀಮಂತರಾಗಿರುವುದು ನನಗಿಷ್ಟವಿಲ್ಲ.

(ಇನ್ ಕಾನ್ವರ್ಸೇಷನ್)

ಒಬ್ಬ ಮನುಷ್ಯನಿಗೆ ತಪ್ಪುಗಳನ್ನು ಮಾಡುವಷ್ಟು ವಯಸ್ಸಾಗಿದೆ ಎಂದರೆ ಅವನು ಸರಿಯಾದುದನ್ನು ಮಾಡುವಷ್ಟೂ ವಯಸ್ಸಾಗಿದೆ.

(ಎ ಉಮನ್ ಆಫ್ ನೋ ಇಂಪಾರ್ಟೆನ್ಸ್)

ಸಜ್ಜನನಿಗೆ ಸಾಕಷ್ಟು ಗೊತ್ತಿರುತ್ತೆ. ಆದರೆ ಅವನು ಸಜ್ಜನನಲ್ಲದಿದ್ದರೆ ಅವನಿಗೆ ಏನು ಗೊತ್ತಿದೆಯೋ ಅದು ಅವನಿಗೇ ಕೆಟ್ಟದು (ದಿ ಪಿಕ್ಚರ್ ಆಫ್ ಡೋರಿಯನ್ ಗ್ರೇ)

ಸಭ್ಯ ವ್ಯಕ್ತಿ ಎಂದರೆ ಅವನಿಗೆ ಏನು ತಿಳಿದಿದೆಯೋ ಅದಕ್ಕಿಂತ ಕಡಿಮೆ ಮಾತಾಡಬೇಕು ಮತು ಅವನು ಎಷ್ಟು ಮಾತಾಡುತ್ತಾನೋ ಅದಕ್ಕಿಂತ ಹೆಚ್ಚಿಗೆ ತಿಳಿದಿರಬೇಕು.

(ದಿ ಪಿಕ್ಚರ್ ಆಫ್ ಡೋರಿಯನ್ ಗ್ರೇ)

■

# ಹಾಲ್ಸಾಬಿಯ (ಖೋಟಾ) ನಸೀಬು....!

**। ಶರತ್‌ಕಲ್ಕೋಡ್**

"ಕೌಸಲ್ಯಾ ಸುಪ್ರಜಾರಾಮ, ಸೂರ್ಯಸಂಧ್ಯಾ ಪ್ರವರ್ತತೇ..." ಗುನುಗುತ್ತ ಮನೆಯಂಗಳಕ್ಕೆ ನೀರು ಚಿಮುಕಿಸಿ ರಂಗವಲ್ಲಿಚೆಲ್ಲುವ ಸೊಸೆ, ಜಗುಲಿ ಮೇಲ್ಕುಳಿತು ಬೀಡಿಯೆಳೆವ ಯಜಮಾನ, ಆರಾಮಕುರ್ಚಿಯಲ್ಲೊರಗಿ ಏದುಬ್ಬಸಗರೆವ ಮುದುಕ– ಎಲ್ಲರ ಕಣ್ಣು ಮನೆಯೆದುರ ಹಾದಿ ಮೇಲೇ, ಹಾಲ್ಸಾಬಿ ಬರುವಿನಲ್ಲಿ...

"ನಮ್ಮೂರ ಹಟ್ಟಿ ಸಂಸ್ಕೃತಿ ಎಕ್ಕುಟ್ಟಿಸಿದ್ದೇ ಈ ದರಿದ್ರ...!" ಬಾಯಿಬಿಟ್ಟು ಹೇಳಿದರೆ ಮಗ ಬೈದಾನೆಂದು, ಮನದಲ್ಲೇ ಹಾಲ್ಸಾಬಿಯನ್ನು ಶಪಿಸುತ್ತಾ, ಕಾಫಿ ಚಪಲ ಚಿತ್ತದ ಮುದುಕ ಕೇಳಿದ: "ಇನ್ನೂ ಬರಲ್ಲಿಲ್ವಲ್ಲೇನೇ...? ಆ ಶನಿಮುಂಡೇದು...!"

ಬೈಗುಳದ ಮರ್ಮಬಲ್ಲ ಕುಮಾರನ ಬಿಪಿಯೇರಿತು: "ನಿಮ್ಗೇನು ಹೇಳಿ, ಜಾನುವಾರು ಸಾಕುವುದೆಂದ್ರೆ ಮಕ್ಕಳಾಟಿಕೆನಾ? ಹುಲ್ಲುಹುರುಳಿ, ಹಿಂಡಿಬೂಸಾ, ಆಳ್‌ರೇಟೆಲ್ಲಾ ಗಗನಕ್ಕೇರಿರುವಾಗ? ಉತ್ಪತ್ತಿಗಿಂತ ಜಾಸ್ತಿ ಖರ್ಚು, ಜಮೀನು ಮಾರ್ಬೇಕಷ್ಟೇ! ಮನೆ ಬಾಗ್ಲಿಗೇ ಹಾಲು ತಂದುಕೊಡ್ತಾನಲ್ಲ ಆ ಪುಣ್ಯಾತ್ಮ, ನಿಮ್ಮ ದೃಷ್ಟಿಯಲ್ಲಿ ಶನಿಯಲ್ವಾ? ಕಾಸಿನ ಕೆಲ್ಸ ಮಾಡದೇ ಮನೇಲ್ಲಿ ಕೂತು ತಿನ್ತಾರಲ್ಲಾ, ಅಂಥವ್ರನ 'ಏನಂತಾ ಕರೆಯೋಣ...!?"

"ಬೆಳಬೆಳಗ್ಗೆ ಸುಖಾಸುಮ್ನೆ ಎಂಥಾ ಜಗಳ ನಿಮ್ದು? ಅವ್ನೇ ಬಂದ ನೋಡಿ..." ಟಿವಿಎಸ್ ಚಾಂಪ್‌ನಿಂದಿಳಿದು ಬಲಗೈಲ್ಲಿ ಪ್ಯಾಕೇಟ್, ಪೇಪರ್, ಎಡಗೈಯಲ್ಲಿ ಮೊಬೈಲ್ ಹಿಡಿದು ಯಾರ್ಹತ್ತಿರವೋ ಮಾತಾಡುತ್ತಾ ಬಂದ ಹಾಲ್ಸಾಬಿನ ಉಲ್ಲಾಸದಲ್ಲಿ ಸ್ವಾಗತಿಸಿ ಸೊಸೆ ಹೇಳಿದಳು:

"ಕೊನೆಗೂ ದೇವ್ರು ಬಂದ್ಹಾಂಗ್ಹೆ ಬಂದ್ಯಾ ಮಾರಾಯ...!"

"ಸಾಕಮ್ಮ ನಿಮ್ಮ ವಾರಾತ, ನಾನೆಂಥದೇವ್ರು!?" ಪ್ಯಾಕೇಟ್ ಕೊಡುತ್ತ ಹಾಲ್ಸಾಬಿ ಪ್ರತಿಕ್ರಿಯೆ.

"ಮುರಾಯಿಟ್ಟು, ಹುಲ್ಹಾಕಿ, ದನಕರಾ ಬಿಟ್ಟು, ಸಗಣಿ ಬಾಚಿ, ಕೊಟ್ಟಿಗೆ ತೊಳೆದು, ಮಾಡಿದ ಮನೆ ಕೆಲ್ಸನಾ ಮತ್ತೆಮತ್ತೆ ಮಾಡ್ತಾ ಸೊಂಟ ಬಿದ್ದು ನರಳಾಡ ಬೇಕಾಗಿದ್ದ ನನ್ನಂಥ ಬಡಪಾಯಿಗಳನ್ನ ಕಷ್ಟಕೋಟಲೆಗಳಿಂದ ಪಾರುಮಾಡಿದ ನೀನೇ ನಿಜಕ್ಕೂ ನಮ್ಮ ಪಾಲಿನ ದೇವ್ರುಕಣೋ! ಅದಕ್ಕೆ ಈಗಿನ್ಹುಡುಗಿಯರು, ಹಳ್ಳಿ ಹುಡುಗರ್ರನ್ನ ಜಪ್ಪಯ್ಯಾ ಅಂದ್ರೂ ಒಪ್ಪದೇ ಪೇಟೆಯವರೇ ಬೇಕೆಂದು ರೋತೆ ಹಿಡಿದು ಮದುವೆಯಾಗೋದು... ಪೇಟೆಪಟ್ಟಣ, ಹೊಟೇಲ್‌ಸಿನಿಮಾ, ಆಭರಣ ಬಟ್ಟೆಯಂಗಡಿ ಅಲೆಯುತ್ತಾ ಎಷ್ಟು ಸುಖವಾಗಿಯಿರ್ತಾರೆ, ಎಲ್ಲದಕ್ಕೂ ಪುಣ್ಯ ಪಡಕೊಂಡು ಬಂದಿರಬೇಕೋ ಅಲ್ವೇನೋ ಹಾಲ್ಸಾಬಿ...!?"

"ನನ್ಕಷ್ಟ ನಿಮ್ಗೇನು ಗೊತ್ತಮ್ಮಾ? ಮಳೆ ಚಳಿ ಬಿಸಿಲೊಂದೂ ಲೆಕ್ಕಿಸದೇ ಬೆಳಗಾ ಮುಂಚೆ ಮೂರಗಂಟೆಗೇಯೆದ್ದು ರೆಡಿಯಾಗಿ ಕೈಮರದ ಮೋರಿ ಮೇಲೆ ಶಿಮೊಗ್ಗಾದಿಂದ ಬರುವ ಹಾಲ್‌ಕಾಯ್ತಾ ಕುಕ್ಕರಿಸಿರ್ತೀನಿ. ನಾಲ್ಕು–ನಾಲ್ಕೂವರೆಗೆ ವ್ಯಾನ್ ಬಂದಕೂಡ್ಲೇ ಪ್ಯಾಕೇಟ್‌ಯಿಳಿಸಿಕೊಳ್ಳದಿದ್ರೆ ಬಡ್ಡೀಮಕ್ಕಳು ಅವ್ರೇಕದ್ದು, ನನ್ನ ಹತ್ರದುಡ್ಡು ಪೀಕಸ್ತಾರೆ. ಬೆಳಗಾದ್ಮೇಲೆ ಪೇಪರ್‌ವ್ಯಾನ್‌ಗೆ ಕಾಯಬೇಕು.ಆ ಮುಂಡೇವಕ್ಕೋ ಹೊತ್ತು ಗೊತ್ತೂಂದೂಯಿಲ್ಲ. ಲೇಟ್ ಮಾಡಿಕೊಂಡು ಬರ್ತಾರೆ. ಆಮೇಲೆ ಎಪ್ಪತ್ತೆರಡು ಮನೆಗೆ ನೂರಾಮೂವತ್ತು ಲೀಟರ್ ಹಾಲು, ಇಪ್ಪತ್ತೆರಡು ಲೀಟರ್ ಮೊಸರು, ನಲವತ್ತೈದು

ಪೇಪರ್ ಹಂಚ ಬೇಕು. ದುಡ್ಡಾದ್ರೂ ಸುಸೂತ್ರ ಕೊಡ್ತಾರಂತೀರಾ? ಅದೂಯಿಲ್ಲ! ಜಗುಲಿಟ್ಹಾಲು ನಾಯಿ ಕಚ್ಚಿಕೊಂಡ್ಹೋಯ್ತು, ಪ್ಯಾಕೇಟ್ ಲೀಕೇಜ್ ನೂರಾರು ಕಂಪ್ಲೇಂಟ್! ತಿಂಗಳ ಲೆಕ್ಕದಲ್ಲೂ ಕೆಲವರದ್ದು ಇಂದಾಪತಿ. ಕೊಟ್ಟವನು ಕೋಡಂಗಿ, ತಗಂಡ್ಹೋನು ಈರಭದ್ರಾಂತ ವರ್ಷಾನುಗಟ್ಟಲೆ ಅಲೆಸಿ ಸತಾಯಿಸೋದು ಬೇರೇ, ಥತ್ ಬಾಂಚೋತ್...!

"ಸಂಜೆಗತ್ತಲಾದ್ರೂ ನಮಾಜಿಗೂ ಸುಖಾವುಂಟೂಂತೀರಾ? ನಾಳೆ ನಂಗ್ಹಿಂತಿಷ್ಟು ಹಾಲು/ಮೊಸರು ಜಾಸ್ತಿ ಕೊಡೋ ಅನ್ನೋರೊಂದು ಕಡೆ. ಕಮ್ಮಿ ಹಾಕೋ ಅನ್ನೋರು ಮತ್ತೊಂದುಕಡೆ. ಮೊಬೈಲ್‌ಗೆ ಕ್ಷಣವಾದರೂ ಪುರುಸೊತ್ತುಂಟಾ? ಇಷ್ಟೇಲ್ಲಾ ಒದ್ದಾಡಿದರೂ ತಿಂಗಳಿಗ್ಗಿಗೋ ಕಮೀಷನ್ನೆಷ್ಟು ಗೊತ್ತಾ ನಿಮ್ಗೆ? ಸತ್ಯ ಹೇಳಿದ್ರೂ ಹೌದು, ಸುಳ್ಳ್ ಹೇಳಿದ್ರೂ ಹೌದಂತೀರಾ. ದೇವ್ರಂತ ನಿಮ್ಹತ್ರ ಸುಳ್ಯಾಕೆ ಹೇಳ್ಲಮ್ಮ? ಹಾಲ್ಯಾಪಾರದಲ್ಲಿ ಹನ್ನೆರಡರಿಂದ ಹದಿನೈದ್ಸಾವಿರ! ಸಂಸಾರ ತೂಗಸಾಕೆ ಸಾಧ್ಯವಾ? ಅದಕ್ಕೆ ಪ್ಲಾಸ್ಟಿಕ್, ಕಬ್ಬಿಣಗುಜರಿ, ಹಳೇಪೇಪರ್, ಖಾಲಿ ಬಾಟ್ಲೀ ಒಟ್ಹಾಕೋದು, ಕೋಳಿಫಾರಂ, ಬಂಗ್ಡೆ ಅಂತಾ ಹಗಲು ರಾತ್ರೀಗೇಯೋದಲ್ವಾ? ಎಷ್ಟು ದುಡಿದರೂ ಈ ಸಾಬೀದೂ ಖೋಟಾ ನಸೀಬು...!" ಎನ್ನುತ್ತಾ ಟಿವಿಎಸ್ ಚಾಂಪ್ ಏರಿದ.

**** **** ****

ಹಾಗೆ ನೋಡಿದ್ರೆ ನಮ್ಮೂರಲ್ಲಿ ಬೆಳಗಾಗೋದು, ಕತ್ಲಾಗೋದು ಹಾಲ್ಸಾಬಿಯ ನಾಮಸ್ಮರಣೆಯಿಂದಲೇ...

ಅವಶ್ಯಕತೆಗೆ ತಕ್ಕಂತೆ ಅಡ್ಡಹೆಸ್ರು ಹಿಡಿದು ಮನಸೋಯಿಚ್ಚೆ ಕರೆದು, ಅಗತ್ಯದ ತುರ್ತು ಕೆಲಸ ಮಾಡಿಸಿಕೊಳ್ಳುವ ನಮ್ಮೂರವರ ಹತ್ತಿರ ಹಾಲ್ಸಾಬಿಯ ನಿಜ ಹೆಸರೇನೆಂದು ಕೇಳಿ, ಹೇಗೆ ತಬ್ಬಿಬ್ಬಾಗಿ ತಡಬಡಾಯಿಸುತ್ತಾರೆ ನೋಡಿ! ಎಳೆಯರಿಂದ ಮುದುಕರವರೆಗೆ ಬಳಸುವ ಏಕವಚನ ಕರೆಗೂ ಬೇಸರಿಸದೇ ನಗು ನಗುತ್ತಾ ಓಗೊಟ್ಟು ಹೇಳಿದ ಕೆಲಸ ಮಾಡಿಕೊಡುವ ಹಾಲ್ಸಾಬಿ ಹಲವಾರು ಅಡ್ಡಕಸಬುಗಳ ಸರದಾರ. ಪಕ್ಕಾ ಪರೋಪಕಾರಿ! ಹಾಗಾಗಿ ಮತ್ತಷ್ಟು ಜನಪ್ರಿಯ!! ಯಾರ್‍ಯಾವ ಕೆಲಸಹೇಳಿದರೂ, ಒಲ್ಲೆಯೆನ್ನದ ಅಸಾಮಿ.

ಮಳೆಗಾಲ ಮನೆ ಹಂಚು, ಕೋರೆ, ಸೋರುತ್ತಿದ್ದರೆ, ಪಕಾಸಿ, ರೀಪಿಗೆ ವರಲೆ ತಗುಲಿದ್ದರೆ "ಹಾಲ್ಸಾಬಿ ಹೀಗಾಗಿದೆಯಲ್ಲೋ..." ಅನ್ನೋದೇ ತಡ "ಅದಕ್ಯಾಕೆ ಯೋಚ್ನೆ ಮಾಡ್ತೀರಿ, ನಾನಿಲ್ವಾ?" ಅಭಯ ನೀಡುತ್ತಲೇ ಜಡಿಮಳೆಯಲ್ಲೇ ಮಂಗನ್ಹಾಗೆ ಹಂಚಿನ ಮಾಡು ರಿಪೇರಿ ಮಾಡುವ ಛಾತಿಯವ! ಕರಾವುಯಿಲ್ಲದವರು, ಬಾಲ (ಎಮ್ಮೆ, ದನ) ಖರೀದಿಸುವ ಇರಾದೆ ವ್ಯಕ್ತಪಡಿಪಿಸಿದರೆ ಸಾಕು, ಇಂಥವರ ಮನೇಲ್ಲಿ ಬೆಳ್ಳಗ್ಗೆ, ಸಂಜೆ ಹೊತ್ತುಹೊತ್ತಿಗೆ ಇಂತಿಂತಿಷ್ಟು ಲೀಟರ್ ಹಾಲ್ಕರೆವ ರಾಸುಂಟು, ರೇಟು ಹೀಗ್ಹೀಗೆ...., ಲಗಾವ್ ಆಗಬಹುದಾ! ಯೋಚ್ನೆ ಮಾಡಿ ಹೇಳಿ. ಯಾಪಾರದ ಜವಾಬ್ದಾರಿ ನಂಗೀರಲಿ..ಅನುಮಾನ ಬ್ಯಾಡ, ಗ್ಯಾರಂಟಿ ಇಲ್ವಾ ನಾನು. ಊರುಬಿಟ್ಟು ಪದರಾಡಾಗ್ತಾನಾ ಈ ಸಾಬಿ!?" ಒಂದೇ ಎರಡೇ ವ್ಯವಹಾರ, ಮಾತಿನ ಹಿಕ್ಮತ್ತು, ಚಮತ್ಕಾರ ನೂರಾರು!!

ಆಳಂಗ, ಉಡುಗೆತೊಡಿಗೆಗಳೂ ಜನರ ಸಲುಗೆಗೆ ಮೂಲವಾಗಿರಬಹುದು. ನಾಲ್ಕೂವರಡಿ ಎತ್ತರ, ಕರೀಬಣ್ಣ, ಬಡಕಟ್ಟೆ ಶರೀರ, ತೆಂಗಿನಚಿಪ್ಪಿನ ತಲೆ, ಅಗಲಹಣೆ, ಚೂಪುಮೂಗು, ಚಕ್ಕುಗಲ್ಲ, ಗುಳಿಯೊಳಗೆ ಪಿಳಿಪಿಳಿಸುವ ಕಣ್ಣು. ದೊಗಲೆ ಪ್ಯಾಂಟು ಶರ್ಟು, ಮಂಕೀ ಕ್ಯಾಪು. ಚಳಿಗೆ ಸ್ವೆಟರ್, ದೇಹಕ್ಕೆ ಭಾರವಾದ ಗಂಬೂಟು, ಮಳೆಗಾಲ ರೈನ್‌ಕೋಟ್. (ಇಂಬಳದ ಕಾಟ ತಡೆಗಟ್ಟುವ ಮೊಣಕಾಲ್ ಬೂಟು). ಕಾಲೆಳೆಯುತ್ತಾ ಹೆಜ್ಜೆ ಕಿತ್ತಿಡುತ್ತಾ ಅಡ್ಡಾದಿಡ್ಡಿ ಏಡಿನಡಿಗೆಯ ಹಾಲ್ಸಾಬಿ ನೋಡಿದರೆ ಫಕ್ಕನೆ ಕಣ್ಣಿಗೆ ಕಟ್ಟುವುದು ಚಾರ್ಲಿಚಾಪ್ಲೀನ್!

**** **** ****

ಹಾಲ್ಸಾಬಿಗೆ ಮದರಸಕ್ಕೆ ಹೋಗುವ ಮಗಳಿದ್ದಾಳೆ, ಮುಂದೆ ಅವಳ ಮದುವೆಗೆಂದು ಕೆಲವು ವರ್ಷಗಳಿಂದ ಕೋಳಿಫಾರಂನಲ್ಲಿ ದುಡಿದ ಹಣದಲ್ಲಿ ನಾಲ್ಕೂವರೆ ಪವನ್ ಚಿನ್ನದಾಭರಣ ಮಾಡಿಸಿ ಮುರಕಲ ಬೀರುನಲ್ಲಿ ಭದ್ರವಾಗಿರಿಸಿದ್ದೇನೋ ಸರಿ, ಆದ್ರೆ ಯಾರೋ ಎಗರಿಸಿ ಬಿಡೋದೇ? ಬಡಪಾಯಿ ಸಂಕಷ್ಟಕ್ಕೆ ಮರುಗದ ಊರವರೇ ಇಲ್ಲ. "ಪೋಲೀಸ್ ಕಂಪ್ಲೇಂಟ್ ಕೊಡು" ಯಾರೆಷ್ಟೇ ಹೇಳಿದರೂ ಹಾಲ್ಸಾಬಿ ಬಿಲ್‌ಕುಲ್‌ಒಪ್ಪಲಿಲ್ಲ,

ಒಮ್ಮೆ ಹೇಳಿದೆ: "ಬೆಂಗಳೂರ್‍ನಾಗೆ ಉನ್ನತ ಪೊಲೀಸ್ ಅಧಿಕಾರಿಗಳ ಗುರ್ತಿದೆ. ಬೇಕಾದರೆ ಒಂದ್ಮಾತು ಹೇಳ್ತೇನೆ. ಪತ್ತೆಮಾಡಿ ಕಳ್ಳರ ಬೆನ್ನು ಬೆಂಡೆತ್ತಿ ವಡವೆ ವಾಪಾಸ್ ಪಡೆಯೋದು ಕಷ್ಟದ ಕೆಲ್ಸವಲ್ಲ"

"ಬೇಡ...ಖಂಡಿತಾ ಬೇಡಯ್ಯಾ..." ತಲೆ ತುರಿಸಿಕೊಳ್ಳುತ್ತಾ ದೈನಾವಸ್ಥೆಯಲ್ಲಿ ಪಿಸುಗುಟ್ಟಿದ.

"ಯಾಕೋ...?"

"ಲಪಟಾಯಿಸಿದವ್ರು ಯಾರೂಂತಾ ನಮ್ಗೂ ಗೊತ್ತುಂಟು..ಆದ್ರೂ..."

"ಆದ್ರೂಯೇನೋ ಅದು...?"

"ಅದರಲ್ಲೊಂದು ವ್ಯವಹಾರದ ಧರ್ಮಸೂಕ್ಷ್ಮತೆ ಎಳೆ ತಗಲ್ಹಾಕಿಕೊಂಡಿದೆ ಸಾಮಿ...."

"ಅದ್ಯಾವ ಮಹಾಧರ್ಮಸೂಕ್ಷ್ಮತೆ ಯೆಳೆಯೋ...?"

"ಕದ್ದವರ್‍ಯಾರೆಂದು ಗೊತ್ತೆಂದು ಆಗ್ಲೇ ಹೇಳಿದ್ನಲ್ಲಾ. ಅಲ್ಲೇ ಅಡಗಿದೆ ನೋಡಿ ವ್ಯವಹಾರದ ಧರ್ಮಸೂಕ್ಷ್ಮತೆ ಎಳೆಕಗ್ಗಂಟು! ಆದಕ್ಕೇ ಎಟಕಾಯದಂಥ ಅಸಹಾಯಕ ಸ್ಥಿತಿ. ಯಾಕೆಂದರೆ ಆ ಕಗ್ಗಂಟಿನ ಎಳೆ ಬಿಡಸ್ತಾ ಹೋದ್ರೆ, ಹಗ್ಗ ಕೊಟ್ಟು, ಕೈ ಕಟ್ಟಿಸಿಕೊಳ್ಳೋವಂತಾ ಇಕ್ಕಟ್ನಲ್ಲಿ ಸಿಕ್ಕಿಬೀಳ್ತೀನಿ, ಎಗರಿಸಿದವರ ಜಾಗದಲ್ಲೇ ಸಾಮಿ, ನನ್ನ ಕೋಳಿಫಾರಂ ಇರೋದು! ನಮಾಜ್ ಮಾಡ್ಹಾಕೆ ಹೋಗಿ, ಮಸೀದೀನಾ ಮೈಮೇಲೆ ಕೆಡವಿ ಕೊಂಡ್ಹಾಂಗ್ಹಾದರೆ ಈ ಬಡಪಾಯಿ ಸಂಸಾರದ ಗತಿ? ಅದಕ್ಕೆ ಬಾಯಿ ಮುಚ್ಚಿಕೊಂಡು ಕುಳ್ತೀವ್ನಿ. ಏನ್ ಮಾಡೋದು? ಮೊದ್ಲೇ ಹೇಳಿದ್ದೇನಲ್ಲಾ ನಂದು ಖೋಟಾ ನಸೀಬು....!"

**** **** ****

ಕೆಸರೂರಾಚೆ ಮಗ್ಗಲ ಸಾಲುಸಾಲು ಮನೆ ಸಾಲು ಸಾಬ್ರಕೇರಿಯೆಂದೇ ಪ್ರಸಿದ್ಧ. ಒಂದು ಕಾಲದಲ್ಲಿ ಸೊರಗುತ್ತಿದ್ದ ಅಡಿಕೆಸೋಗೆ ಜೋಪಡಿಗಳು, ಇತ್ತೀಚೀನ ವರ್ಷಗಳಲ್ಲಿ ಟೆರೇಸ್, ಟೈಲ್ಸ್ ಅಲಂಕೃತಗೊಂಡು ಜಗ್‌ಮಗಾಯಿಸುತ್ತಿವೆ! "ಆ ಶ್ರೀಮಂತಿಕೆ, ವೈಭವ ದುಬೈ ದುಡ್ಡಿಂದು"– ಊರುತುಂಬಿ ತುಳುಕುತ್ತಿರುವ ಗುಸುಗುಸು. ಆದರೂ ಕೆಲವು ಜೋಪಡಿ ಮೊದಲಿದ್ದ ಹಾಗೇ ಮಂಕುಕವಿದು ಕುಗುರುತ್ತಿವೆ! ಬಡತನ ನೆರಳು ಚೆಲ್ಲುತ್ತವೆ. ನರಳಿಕೆ ನಿಟ್ಟುಸಿರುಗರೆಯುತ್ತವೆ, ಅಂಥವುಗಳಲ್ಲಿ ಹಾಲ್ಸಾಬಿಯದೂಒಂದು.


ಮಾತಿನ ನಡುವೆಒಮ್ಮೆ ಕೇಳಿದೆ:

"ಯಾಕೋ ನಿಮ್ಮಗುಡಿಸಲು ಹಾಗೇಯಿದೆಯಲ್ಲಾ? ದುಬೈದುಡ್ಡು ಸಿಕ್ಕಿಲ್ವಾ?"

"ದುಬೈದೊರೆಗಳು ಬಡಬಗ್ಗರಿಗೆ ಮನೆಕಟ್ಟಿಕೊಳ್ಳಲು ಧರ್ಮಾರ್ಥದುಡ್ಡುಕೊಡೋದು ನಿಜ. ಆದ್ರೆ ಅದಿಲ್ಲಿ ಎಲ್ಲರಿಗೂ ದಕ್ಕೋದು ಹರಮಕಷ್ಟ ಮರಾಯ್ರೇ! ಮಸೀದಿ ಕಮಿಟಿಯವರ ಕೃಪೆಗೆ ಪಾತ್ರರಾದವರಿಗೆ ಆ ಭಾಗ್ಯ. ದೇವರು ಕೊಟ್ಟರೂ, ಪೂಜಾರಿ ಕೊಡಾಂತ ಗಾದೆನೇ ಐತಲ್ಲಾ? ಆ ವಿಷಯದಲ್ಲೂ ನಂದು ಖೋಟಾ ನಸೀಬು..!! ■

# ಸದ್ದು ಯಾವುದು

ಪಕ್ಕದ ಮನೆ ಪೀತಾಂಬರ ಸ್ವಾಮಿಗಳು ಬಂದು ನಿಮಗೇನಾದರೂ ಹದ್ದಿನ ಸದ್ದು ಕೇಳಿಸಿತೇ ಅಂತ ಕೇಳಿದಾಗ ಶಿವಪ್ಪ ಇಲ್ವಲ್ಲಾ ಯಾಕೆ ಅಂತ ಕೇಳಿದರು. ಹಾಗಾದರೆ ಕೇಳಿಸಿದ್ದು ಗೂಬೆ ಸದ್ದಿರಬೇಕು ಅಂದರು. ಶಿವಪ್ಪ ಇಲ್ಲ ಗೂಬೆಯ ಸದ್ದೂ ಕೇಳಿಲ್ಲ ಅಂದರು. ಪೀತಾಂಬರಸ್ವಾಮಿಗಳು ನನಗೆ ಕೇಳಿಸಿದ್ದು ಕೋತಿಯ ಕೂಗು ಅಂತ ಈಗ ಖಚಿತವಾಯಿತು ಅಂದರು. ಶಿವಪ್ಪ  ಅಯ್ಯೋ ನಿಮಗೆಲ್ಲೋ ಭ್ರಾಂತು. ಆ ಯಾವ ಸದ್ದುಗಳೂ ನನಗೆ ಕೇಳಿಲ್ಲ ಅಂದರು. ಅಂದ ಮೇಲೆ ಅದು ಘೇಂಡಾಮೃಗದ ಕೂಗಿರಬೇಕು ಅಂದರು ಪೀತಾಂಬರ ಸ್ವಾಮಿಗಳು . ಶಿವಪ್ಪ ಯಾವ ಕೂಗೂ ಕೇಳೇ ಇಲ್ಲ ಅಂದ ಮೇಲೆ ಅದು ಇಂಥದೇ ಕೂಗು ಅಂತ ಹೇಗೆ ಹೇಳೋದು ಅಂದರು. ಆಗ ಪೀತಾಂಬರ ಸ್ವಾಮಿಗಳು ಇಬ್ಬರೂ ಅಕ್ಕಪಕ್ಕದಲ್ಲಿದ್ದೇವೆ. ನನಗೆ ಸದ್ದು ಕೇಳಿಸಿತು ನಿಮಗೆ ಕೇಳಿಸಲಿಲ್ಲ ಅಂದರೆ ಏನರ್ಥ ಅಂದರು. ಅದಕ್ಕೆ ಶಿವಪ್ಪ ಪೀತಾಂಬರ ಸ್ವಾಮಿಗಳ ಹತ್ತಿರ ಬಂದು ಮೆತ್ತಗೆ ಅವರ ಕಿವಿಯಲ್ಲಿ ತುಂಬಾ ಸಿಂಪಲ್ ನಿಮ್ಮ ಹೆಂಡತಿ ಮನೆಯಲ್ಲೇ ಇದ್ದಾರೆ. ನನ್ನ ಹೆಂಡತಿ ತವರು ಮನೆಗೆ ಹೋಗಿದ್ದಾಳೆ ಅಂದರು. ಇದ್ದರೂ ಇರಬಹುದು ಅಂದುಕೊಂಡು ಪೀತಾಂಬರಸ್ವಾಮಿಗಳು ಮನೆಗೆ ಹಿಂದಿರುಗಿದಾಗ ಹಾವು ಭುಸುಗುಟ್ಟುತ್ತಿರುವ ಸದ್ದು ಅಡಿಗೆ ಮನೆಯಿಂದ ಬರುತ್ತಿತ್ತು.




ಅಯ್ಯೊ ಚಿನ್ನದ ಬೆಲೆ ಇಳಿಲಿಲ್ಲ ಕಣೇ....!
ಬೆಲೆ  ಇಳಿದಿದ್ದು  ಟೊಮೆಟೋ ಕಣೇ..!!!

## STATEMENT OF OWNERSHIP OF APARANJI
## (KANNADA MONTHLY)
## (SEE RULES AND FORM IV)

| | | | |
|---|---|---|---|
| 1. | Place of Publication | : | Bangalore |
| 2. | Periodicity of Publication | : | Monthly |
| 3. | Printer's Name | : | V.R. Bharath |
| | Nationality | : | Indian |
| | Address | : | Ravi Graphics<br>49, 4th Cross, SSI Area<br>Rajajinagar<br>Bangalore - 560010 |
| 4. | Publisher's Name | : | Koravanji Aparanji Trust |
| | Address | : | No 36, 6th Main Road<br>Malleswaram<br>Bangalore - 560003 |
| 5. | Editor's Name | : | M. ShivaKumar |
| | Nationality | : | Indian |
| | Address | : | 36, 6th Main Road<br>Malleswaram<br>Bangalore - 560003 |
| 6. | Name and address of Individuals who own the Paper | : | Koravanji Aparanji Trust<br>36, 6th Main Road<br>Malleswaram<br>Bangalore - 560003 |

I M. Shivakumar hereby declare that the particulars given above are true to the best of my knowledge and belief.

1-3-2022 **M. ShivaKumar**
Bangalore (Signature of the Publisher)